ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜುಲೈ 2019 ಬೆಲೆ ರೂ. 5/-



ಸ್ವಾಮಿಯವರ
ಆಣಿವರ ಆಸ್ಥಾನ ಮಹೋತ್ಸವ
ತಿರುಮಲೆ

17-07-2019




ನೂತನ ವರ (ಸ್ವಾಮಿಯವರು)



ಕಲ್ಯಾಣವೇದಿಕೆ



ನೂತನ ವಧು (ಶ್ರೀದೇವಿ, ಭೂದೇವಿ)



ಸ್ವಾಮಿಯವರಿಗೆ ಹೂವಿನ ಹಾರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ



ಗರುಡ ವಾಹನದಲ್ಲಿ ಸ್ವಾಮಿಯವರು

ಅಶ್ವವಾಹನದಲ್ಲಿ ಸ್ವಾಮಿಯವರು



ಸತ್ತ್ವಾನುರೂಪಾ ಸರ್ವಸ್ಯ ಶ್ರದ್ಧಾ ಭವತಿ ಭಾರತ।
ಶ್ರದ್ಧಾಮಯೋಽಯಂ ಪುರುಷಃ ಯೋ ಯಚ್ಛ್ರದ್ಧಃ ಸ ಏವ ಸಃ॥

- (ಶ್ರೀ ಮದ್ಭಗವದ್ಗೀತೆ ಅಧ್ಯಾಯ -17, ಶ್ಲೋಕ -3)



ಅರ್ಜುನ ಎಲ್ಲರ ಶ್ರದ್ಧೆಯೂ ಅವರ ಮನಸ್ಸಿನ ಸಂಸ್ಕಾರಕ್ಕೆ ಅನುಗುಣವಾಗಿ ಆಗುತ್ತದೆ. ಈ ಮನುಷ್ಯನು ಶ್ರದ್ಧೆಯಂತೆ ಆಗುತ್ತಾನೆ. ಯಾವನಿಗೆ ಯಾವ ಬಗೆಯ ಶ್ರದ್ಧೆಯೋ ಅವನು ಅದೇ ಆಗುತ್ತಾನೆ.



ನೀನೇ ಅನಾಥ ಬಂಧು ಕಾರಣ್ಯಸಿಂಧು

ಮದಗಜವೆಲ್ಲ ಕೂಡಿದರೇನು ಅದರ ವೇಳೆಗೆ ಒದಗಲಿಲ್ಲ

ಮದನನಯ್ಯ ಮಧುಸೂದನ ಎನ್ನಲು

ಮುದದಿಂದಲಿ ಬಂದೋದಗಿದೆ ಕೃಷ್ಣ

ಪತಿಗಳೈವರಿದ್ದರೇನು ಸತಿಯ ಭಂಗ ಬಿಡಿಸಲಿಲ್ಲ

ಗತಿ ನೀನೆ ಮುಕುಂದ ಎನ್ನಲು ಅತಿವೇಗದಿ ಅಕ್ಷಯವಿತ್ತೆ ಕೃಷ್ಣ

ಶಿಲೆಯ ರಕ್ಷಿಸಿ ಕುಲಕೆ ತಂದೆ ಬಲಿಗೆ ಒಲಿದು ಪದವಿಯನಿತ್ತೆ

ಸುಲಭದಿ ಭಕ್ತರ ಸಲಹುವನಮ್ಮ ಚೆಲುವ ಪುರಂದರವಿಠಲರಾಯ

- ಶ್ರೀ ಪುರಂದರ ದಾಸರು

(ನಾಲ್ಕನೆಯ ದಶಕವು)

# ದಯಾ ಶತಕಮ್

- ಎನ್. ನರಸಿಂಹಾಚಾರ್ಯ



ಅನುಭವಿತು ಮಘುಘಂ ನಾಲಮಾಗಾಮಿಕಾಲಃ ಪ್ರಶಮಯಿತು ಮಶೇಷಂ ನಿಷ್ಕ್ರಿಯಾಭಿರ್ನ ಶಕ್ಯಮ್।
ಸ್ವಯಮಿತಿ ಹಿ ದಯೇ ತ್ವಂ ಸ್ವೀಕೃತ ಶ್ರೀನಿವಾಸಾ ಶಿಥಿಲಿತಭವಭೀತಿಃ ಶ್ರೇಯಸೇ ಜಾಯಸೇ ನಃ ॥ ೩೪॥

ದಯಾದೇವಿಯ ಪ್ರತಿವಾದದ ರೀತಿಯು ಇಲ್ಲಿ ವರ್ಣಿಸಲ್ಪಡುವುದು. ಪಾಪಗಳನ್ನು ತೊಲಗಿಸುವುದಕ್ಕೆ ಎರಡು ಮಾರ್ಗಗಳುಂಟು. ಆ ಪಾಪಗಳ ಫಲವನ್ನು ಅನುಭವಿಸುವುದು ಒಂದು ; ಪ್ರಾಯಶ್ಚಿತ್ತಗಳನ್ನು ಮಾಡುವುದು ಎರಡನೆಯದು. ಈ ಎರಡು ಮಾರ್ಗಗಳೂ ಶಾಸ್ತ್ರದಲ್ಲಿ ಹೇಳಲ್ಪಟ್ಟಿರುವುದಾದರೂ ಈ ಜೀವನ ವಿಷಯದಲ್ಲಿ ಸಾಧ್ಯವಿಲ್ಲದವು. ಅವನು ಮಾಡಿರುವ ಪಾಪಗಳೂ, ಮಾಡಬಹುದಾದ ಪಾಪಗಳೂ ಅನಂತ ವಾಗಿರುವುದರಿಂದ ಮುಂಬರುವ ಕಾಲವೆಲ್ಲವೂ ಫಲವನ್ನು ಅನುಭವಿಸಿದರೂ ಆ ಕಾಲವು ಸಾಲದು; ಕಾಲವು ಅನಂತವಾದರೂ ಅವನ ಕರ್ಮಗಳು ಮುಗಿಯಲಾರವು. ಶಾಸ್ತ್ರದಲ್ಲಿ ಹೇಳಿರುವಂತೆ ಸರಿಯಾದ ರೀತಿಯಲ್ಲಿ ಪ್ರಾಯಶ್ಚಿತ್ತಗಳನ್ನು ಮಾಡಿ ಆ ಪಾಪಗಳನ್ನು ತೊಲಗಿಸಿಕೊಳ್ಳುವುದೆಂಬುದಂತು ಸುತರಾಂ ಸಾಧ್ಯವಿಲ್ಲದ ಕೆಲಸ. ಸಾಧ್ಯವಿಲ್ಲದ ಕೆಲಸದಲ್ಲಿ ಮಾಡುವುದೇನಿರುತ್ತದೆ? ಆದ್ದರಿಂದ-"ಶರಣಾ ಗತನಾದವನನ್ನು ಕ್ಷಮಿಸಿ ಕಾಪಾಡುತ್ತೇನೆ," ಎಂದು ತಾನೇ (ನ್ಯಾಯಾಧಿಪತಿಯೂ ಪರಮಪುರುಷನೂ ಆದ ಶ್ರೀನಿವಾಸನು) ಹೇಳಿರುವಂತೆ, ಇವನ ಪಾಪಗಳನ್ನು ಕ್ಷಮಿಸಿ ಇವನನ್ನು ಕಾಪಾಡುವುದೊಂದೇ ಪ್ರಕೃತದಲ್ಲಿ ಮಾಡಬೇಕಾದುದೂ, ಮಾಡಬಹುದಾದುದೂ ಆಗಿರುವ ಕಾರ್ಯ. ಈ ರೀತಿಯಲ್ಲಿ ಹೇಳಿ. ನಿನ್ನ ಗುಣಗಳಿಂದ ಶ್ರೀನಿವಾಸನನ್ನು ವಶೀಕರಿಸಿಕೊಂಡು ಮಹಾಪರಾಧಿಗಳಾದ ನಮ್ಮ ಶ್ರೇಯಸ್ಸಿಗಾಗಿ ನೀನು ಪಾಡುಪಡುತ್ತಿರುವೆ. ಆದರಿಂದಲೇ ನಿನ್ನ ವಾತ್ಸಲ್ಯವು ವ್ಯಕ್ತಪಡುವುದು. ಈ ಪದ್ಯದಲ್ಲಿ "ಸ್ವೀಕೃತ ಶ್ರೀನಿವಾಸಾ" ಎಂಬ ಪದದ ಸ್ವಾರಸ್ಯವೇನೆಂದರೆ, ಶ್ರೀನಿವಾಸನೆಂಬ ನ್ಯಾಯಾಧಿಪತಿಯನ್ನು ತನ್ನ ಪಕ್ಷಕ್ಕೆ ಅನುಕೂಲಿಸುವಂತೆ ವಶಪಡಿಸಿಕೊಂಡು ಹಿಂದೆ ಹೇಳಿರುವಂತೆ ಬಗೆಬಗೆಯಾಗಿ ಹೇಳಿ ದಯಾದೇವಿಯು ನಮಗಾಗಿ, ನಮ್ಮ ಶ್ರೇಯಸ್ಸಿಗಾಗಿ ಬಹುವಾಗಿ ಕಷ್ಟಪಡುವಳೆಂಬುದೇ ಆಗಿರುತ್ತದೆ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 50 ಸಂಚಿಕೆ -2

ಶ್ರೀ ವಿಕಾರಿನಾಮ ಸಂವತ್ಸರ
ಜ್ಯೇಷ್ಠ - ಆಷಾಢ ಮಾಸ
ಸಂಚಿಕೆ

ಜುಲೈ 2019




## ವಿಷಯಸೂಚಿಕೆ


ಸಂಪಾದಕೀಯ 6

ಹಸಿರುತೋರಣ

ತಿರುಮಲೇಶನ ಆಣಿವರ ಆಸ್ಥಾನ ಮಹೋತ್ಸವ 7
- ಕೆ. ನರಸಿಂಹಮೂರ್ತಿ

ಪೆರಿಯಾಳ್ವಾರ್ ಅವರ ಶ್ರೀನಿವಾಸನ ದಿವ್ಯಾನುಭವ 10
- ಶ್ರೀಮತಿ.ಎ. ಗೀತವೀರರಾಘವನ್

ಪೂರಿಜಗನ್ನಾಥ ಯಾತ್ರೆಗೆ ಹೋಗೋಣ ಬನ್ನಿ 13
- ಡಾ॥ ಪಿ.ಗುರುರಾಜ

ಭಕ್ತ ಧ್ರುವ ಚರಿತ್ರೆ (ಭಾಗ - 2) 17
- ಡಿ.ಎಸ್.ಬದ್ರಿನಾಥ್

ಸುರಕ್ಷಿತ ಔಷಧೀಯ ಆಹಾರ ಜೀರಿಗೆ 20
- ಶ್ರೀಮತಿ

ಅತ್ತಿವರದರಾಜ ಸ್ವಾಮಿ 22
- ಶ್ರೀಮತಿ. ಎಸ್.ಸುರೇಖ

ಸಂಸ್ಕಾರ ಸಮನ್ವಿತ ಜೀವನವೃತ್ತಿ 23
- ಆರ್.ಎನ್.ಎನ್.ಮೂರ್ತಿ

ಮಹಾತ್ಮ ಗೋಕರ್ಣ 31
-ಶ್ರೀಮತಿ. ಎಸ್.ಕಲ್ಯಾಣಿ

ಜಯತೀರ್ಥರ ಹಿರಿಮೆ - ಸಂದೇಶ 34
-ಪ್ರಣವ

ಆಚಾರ್ಯ ಮಧ್ವರು ಸಂದರ್ಶಿಸಿದ ತಾಣಗಳು 38
- ಬಿ. ಗೋಪಾಲಾಚಾರ್

ಪಾಂಡವರ ಹೆಮ್ಮೆಯ ಸಂತಾನ ವೀರ ಅಭಿಮನ್ಯು 43
- ಎಸ್.ಆರ್.ಪೂಜಾರ್

ತಪಸ್ಸಿನಿಂದ ಸಕಲ ವಿಜಯಗಳು ಸಾಧ್ಯ 47
- ಡಿ.ಎಸ್.ಭೂಮಿಕ

ಪುಷ್ಕರಿಣಿಯ ಒಡೆಯ! ಕೀಲಪಟ್ಟಾಧೀಶ 49
- ಶ್ರೀಮತಿ.ಪಿ.ಪದ್ಮಜ


ಮುಖಚಿತ್ರ - ಸ್ವಾಮಿಯವರ ಆಣಿವರ ಆಸ್ಥಾನ ಮಹೋತ್ಸವ, ತಿರುಮಲೆ
ಹಿಂಬದಿಚಿತ್ರ - ಶ್ರೀ ವಿಖನಸಚಾರ್ಯರು, ತಿರುಪತಿ


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**
ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333

ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ


ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

# ಗುರು ಸಾಕ್ಷತ್ ಪರಬ್ರಹ್ಮ

## ಸಂಪಾದಕೀಯ

ಗುರು ಬ್ರಹ್ಮ ಗುರುವಿಷ್ಣು ಗುರು ದೇವ್ರೋ ಮಹೇಶ್ವರಃ
ಗುರು ಸಾಕ್ಷಾತ್ ಪರ ಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ

ತ್ರಿಮೂರ್ತಿಗಳಿಗೆ ಸಮಾನವಾದವನು ಗುರು, ಗುರುವನ್ನು ಭಗವಂತನಂತೆಯೇ ಕಾಣುತ್ತೇವೆ.

ಹಿಂದೂ ಸಂಸ್ಕೃತಿಯಲ್ಲಿ ಗುರುವಿಗೆ ಅತ್ಯಂತ ಮಹಿಮಾನ್ವಿತವಾದ ಹಾಗೂ ಅಷ್ಟೇ ಪವಿತ್ರವಾದ ಸ್ಥಾನವಿದೆ. ಲೌಕಿಕ ವಿದ್ಯೆಗಳಿಗಾಗಲೀ, ಪಾರಲೌಕಿಕ ವಿದ್ಯೆಗಳಿಗಾಗಲೀ 'ಗುರುವಿನ' ಅಗತ್ಯವಿದೆ.ಆದ್ದರಿಂದಲೇ ಗುರುವಿಲ್ಲದ ವಿದ್ಯೆ ಕುರುಡು ಎಂದಿದ್ದಾರೆ.

ಲೌಕಿಕ ಪರಿಜ್ಞಾನದೊಂದಿಗೆ ಹೋಲಿಸಿದರೆ ಅಕ್ಷರಗಳನ್ನು ತಿದ್ದಿಸುವವನೇ ನಿಜವಾದ ಗುರು. ಮನುಷ್ಯನಿಗೂ ಭಗವಂತನ ಸನ್ನಿಧಿಗೂ ಮಾರ್ಗವನ್ನು ತೋರಿಸುವವನೇ ಗುರು.! ಅಕ್ಷರಗಳನ್ನು ಕಲಿತವರು ಯಾರಾದರು ಅಕ್ಷರಗಳನ್ನು ಹೇಳಿಕೊಡಬಲ್ಲರು ಮತ್ತಿನ್ನೇನು ಮಾಡಬೇಕು?ವಿದ್ಯೆಯೊಂದಿಗೆ ಬುದ್ಧಿಯನ್ನು ಹೇಳಿಕೊಡುವವನೇ ನಿಜವಾದ ಗುರುವು. ಜೀವನವೆಂದರೆ ಕೇವಲ ನಮ್ಮ ಕಣ್ಣೆದಿರಿಗೆ ಕಾಣಿಸುವುದಷ್ಟೇ ಅಲ್ಲ. ಭಾಷೆಗೂ, ಭಾವಕ್ಕೂ, ಸ್ಪರ್ಶಕ್ಕೂ ಕಣ್ಣಿಗೆ ಕಾಣಿಸದ ಅಲೌಕಿಕ ಆನಂದವನ್ನು ನೀಡುವ ಅಂತರ್ಯಾಮಿಯನ್ನು ಅನುಭವಕ್ಕೆ ತಂದು ಕೊಡುವವನೇ ಗುರುವು.ಅದಕ್ಕಿಂತಲೂ ಹೆಚ್ಚಾಗಿ ಬ್ರಹ್ಮ ಸಾಯುಜ್ಯದೆಡೆಗೆ ಕೊಂಡೊಯ್ಯುವವನೇ ನಿಜವಾದ ಸದ್ಗುರು.

ಗುರುವನ್ನು ಆಯ್ದುಕೊಳ್ಳುವುದರಲ್ಲೇ ಶಿಷ್ಯನ ಪ್ರತಿಭ ಅಡಗಿದೆ. ಅಂತರ್ಯಾಮಿಯನ್ನು ಅರಿತುಕೊಳ್ಳುವುದಕ್ಕಿಂತಲೂ, ಉತ್ತಮ ಗುರುವನ್ನು ಹುಡುಕುವುದೇ ಶಿಷ್ಯನಿಗೆ ನಿಜವಾದ ಪರೀಕ್ಷೆ. ಗುರುವು ಎಂದೂ ರಹದಾರಿಯಂತಹನು. ನಮ್ಮ ಗುರಿಯನ್ನು ತಲುಪುವುದಕ್ಕೆ ಆಯ್ದುಕೊಂಡ ದಾರಿ ಸುಗಮವಾಗಿದ್ದರೆ ನಮ್ಮ ಪ್ರಯಾಣ ಸುರಕ್ಷಿತವಾಗಿ ಸಾಗುತ್ತದೆ. ಹಾಗಾಗದೇ ಇದ್ದರೆ ಎಲ್ಲಾ ಅಗಮ್ಯಗೋಚರವಾಗಿರುತ್ತದೆ. ಅದಕ್ಕೇ ಗುರುವಿನ ಬಗೆಗೆ ಶಿಷ್ಯನಿಗೆ, ಶಿಷ್ಯನ ಬಗೆಗೆ ಗುರುವಿಗೆ ಅಪಾರವಾದ ಅನುರಾಗಗಳೊಂದಿಗೆ, ಅಂತ್ಯವಿಲ್ಲದ ಗೌರವವಿರುತ್ತದೆ.

ಜ್ಞಾನವನ್ನು ಅರ್ಜಿಸಬೇಕೆಂದು ಬಯಸುವವನು, ತ್ರಿಕರಣ ಶುದ್ಧಿಯಾಗಿ ಗುರುವಿಗೆ ಶುಶ್ರೂಷೆಯನ್ನು ಮಾಡಬೇಕು. ದೃಢವಾದ ವಿಶ್ವಾಸದಿಂದ ಗುರುವಿಗಿಂತಲೂ ಅಧಿಕವಾದ,ಶಾಸ್ತ್ರವಾಗಲೀ,ತಪಸ್ಸಾಗಲೀ ಬೇರೆ ಇಲ್ಲವೆನ್ನುವಂತೆ ಗುರುವಿನ ಸೇವೆಯನ್ನು ಮಾಡಬೇಕು. ಆಗ ಆ ಗುರುವು ಶಿಷ್ಯ ಏನು ಕೇಳದಿದ್ದರೂ ಎಲ್ಲಾ ವಿದ್ಯೆಗಳನ್ನು ಬೋಧಿಸುತ್ತಾನೆ. ಅಜ್ಞಾನಾಂಧಕಾರವನ್ನು ತೊಲಗಿಸಿ ಕೊಳ್ಳುವ ಮಾರ್ಗವನ್ನು ತೋರಿಸುತ್ತಾನೆ.

ಜ್ಞಾನಪಿಪಾಸಿಗೆ ಪರಮಾರ್ಥವನ್ನು ತಿಳಿಸಿ ಕೊಡುವುದಕ್ಕೆ ಒಬ್ಬ ಗುರುವಿನ ಅವಶ್ಯಕತೆ ಇದೆ. ಇವೆಲ್ಲವೂ ಸರಿಯೇ ಆದರೆ ಗುರುವೇ ಇಲ್ಲದೇ ಏನೂ ತಿಳಿಯದ ಜೇಡರ ಹುಳಕ್ಕೂ, ವಿಷಸರ್ಪಕ್ಕೂ,ಹಿಂಸೆಯಿಂದ ಆಹಾರವನ್ನು ಪಡೆಯುವುದನ್ನು ಬಿಟ್ಟು ಇನ್ನೇನೂ ತಿಳಿಯದ ಬೇಡರವನಿಗೆ ಸಾಯುಜ್ಯವು ಲಭಿಸಲಿಲ್ಲವೇ? ಅಂದರೆ ಅವರಿಗೆ ಯಾರೂ ಗುರುವಿಲ್ಲವೆಂದು ಅರ್ಥವಲ್ಲ. ಅವರವರ ಮನಸ್ಸಿನಲ್ಲಿ ಅಚಂಚಲವಾದ, ಬೇರೇ ದೃಷ್ಟಿಯಿಲ್ಲದ ಭಕ್ತಿಯೇ ಅವರಿಗೆ ಗುರುವಾಗಿ ನಿಂತಿತು. ತಿಳಿಯದಿರುವುದು ಬೇರೆ. ತಿಳಿಯುವುದು ಬೇರೆ. ನಮ್ಮದೂ ಅತ್ತಲೂ ಇಲ್ಲದ ಇತ್ತಲೂ ಇಲ್ಲದ ಪರಿಸ್ಥಿತಿ. ಲೌಕಿಕ ಅಲೌಕಿಕಗಳ ನಡುವೆ ಡೋಲಾಯ ಮಾನವಾದ ಸ್ಥಿತಿ. ಅದಕ್ಕೇ ಕೈಹಿಡಿದು ನಡೆಸುವವರು ಬೇಕು.ಅಂತಹವರನ್ನು ನಾವು ಅವಿರತವಾಗಿ ಹುಡುಕಬೇಕು.ಅಂತಹಾ ಜಿಜ್ಞಾಸಾಪರನಾದ ಶಿಷ್ಯನಿಗಾಗಿ, ಗುರುವಿನ ರೂಪದಲ್ಲಿ ಭಗವಂತನೇ ಹುಡುಕಿ ಕೊಂಡು ಬರುತ್ತಾನೆ.

ಅಜ್ಞಾನ, ಹೆಂಡತಿ ಮಕ್ಕಳು ಎಂಬ ಅನುಬಂಧಗಳೆಂಬ ವಲ್ಮೀಕದಲ್ಲಿ ವಾಸಿಸುತ್ತಿದ್ದೇವೆ.ಕಣ್ಣು ತೆರೆದರೆ ದಟ್ಟವಾದ ಅಂಧಕಾರವೇ ಕಂಡು ಬರುತ್ತದೆ. ಸ್ವಲ್ಪ ಶ್ರಮದಿಂದ ಅವುಗಳನ್ನು ದಾಟಿ ಬಂದರೆ ಸೂರ್ಯನ ದರ್ಶನವಾಗುತ್ತದೆ. ಅಂತಹಾ ಸೂರ್ಯನ ಕಿರಣಗಳು ಮನಸ್ಸನ್ನು ತಾಕಿದರೆ ಮಹರ್ಷಿಗಳಾಗುತ್ತೇವೆ. ಹಾಗಾಗುವುದಕ್ಕೆ ಆಸಕ್ತಿಯಿಂದ ಶ್ರದ್ಧಾ ಭಕ್ತಿಯಿಂದ ಒಬ್ಬ ಸದ್ಗುರುವನ್ನು ಆಶ್ರಯಿಸಬೇಕು.ಆತನನ್ನು ಅರ್ಚಿಸಬೇಕು, ಆರಾಧಿಸಬೇಕು. ಅದೇ ಸಾಕ್ಷಾತ್ತು ಪರಬ್ರಹ್ಮನಾದ ಗುರುವಿಗೆ ಅರ್ಪಿಸುವ ನಿಜವಾದ ಗುರು ಪೂಜ್ಯೋತ್ಸವದ ಪುಷ್ಪಾಂಜಲಿ.

ವ್ಯಾಸೋ ನಾರಾಯಣೋ ಹರಿಃ

ಹಸಿರು ತೋರಣ

# ತಿರುಮಲೇಶನ ಆಣಿವರ ಆಸ್ಥಾನ ಮಹೋತ್ಸವಗಳು

- ಮೂಲ ಶ್ರೀಮತಿ. ಎಂ. ವಿಜಯಲಕ್ಷ್ಮೀ

- ಅನುವಾದ ಕೆ. ನರಸಿಂಹಮೂರ್ತಿ

ಆಡಿಮಾಸ ಎಂದರೆ ಕರ್ಕಾಟಕಮಾಸ. ಕರ್ಕಾಟಕ ದಿಂದ ಧನಸ್ಸುವರೆಗಿನ ಸೂರ್ಯಸಂಚಾರದ ಆರು ಮಾಸ ಗಳನ್ನು ದಕ್ಷಿಣಾಯನ ಅಂದರೆ ಕರ್ಕಾಟಕ ಸಂಕ್ರಮಣದ ಸಮಯ ಅಂದರೆ ದಕ್ಷಿಣಾಯನ ಪುಣ್ಯಕಾಲ.

ತಿರುಮಲೆಯ ಶ್ರೀನಿವಾಸನಿಗೆ ಈ ದಕ್ಷಿಣಾಯನ ಪ್ರಾರಂಭ ಪುಣ್ಯಕಾಲದಲ್ಲಿ ವಿಶೇಷ ಪೂಜೆಗಳನ್ನು ಜರುಗಿಸ ಬೇಕೆಂಬ ಸಂಕಲ್ಪದಿಂದ ಏರ್ಪಾಟುಗೊಂಡಿರುವುದೇ ಆಣಿ ವರ ಆಸ್ಥಾನ. ಇದರ ನಿಜವಾದ ಹೆಸರು ಆಡಿಪೂಜೆ ಅದೇ 'ಅಣಿವಲ್' ಆಗಿದೆ.ತಮಿಳು ಸಂಸ್ಕೃತಿ ಪ್ರಭಾವದಿಂದ 'ಡ' 'ಣ' ವಾಗಿ ಪರಿವರ್ತನೆಗೊಂಡು ಅಣಿವಾರ್ ಆಗಿದೆಯೆಂದು ಹೇಳಬಹುದು. ಈ ವಿಶೇಷ ಪೂಜೆಯಲ್ಲಿ ಸ್ವಾಮಿಗೆ ಬರುವುದೇ ವಾರ್ಷಿಕ ಆದಾಯ-ಅದನ್ನೇ ಆರ್ಥಿಯ ಸಂವತ್ಸರಾಂಭ ವಾಗಿ ಪರಿಗಣಿಸಲ್ಪಟ್ಟು, ಆ ದಿನದಿಂದಲೇ ಎಲ್ಲಾ ಅಧಿ ಕಾರಿಗಳು ಬದಲಿಗೊಂಡು, ನಿಯಮಗಳನ್ನು ಸಕ್ರಮವಾಗಿ ಜರುಗಿಸುವುದಾಗಿ ಪ್ರಮಾಣ ವಚನಗಳನ್ನು ಸ್ವಾಮಿಯ ಮುಂದೆ ಅರ್ಪಿಸಿ ಅಧಿಕಾರಗಳನ್ನು ವಹಿಸಿಕೊಳ್ಳು ತ್ತಾರೆಂದು ಹೇಳಬಹುದು.

ಆದಿಕಾಲದಿಂದಲೂ ಪುಣ್ಯ ಕಾರ್ಯಗಳನ್ನು ಕೈಗೊಳ್ಳುವುದೊಂದು ಶೇಷ ಸಂಸ್ಕೃತಿಯಾಗಿದೆ. ಆಣಿವರ ಆಸ್ಥಾ ನದ ಸಮಯದಲ್ಲಿ ಸ್ವಾಮಿಯನ್ನು ನೆನೆಯು ವುದು,ಸೇವಿಸುವುದು,ಕೀರ್ತಿಸುವುದು,ಸ್ತುತಿಸು ವುದು, ಧ್ಯಾನಿಸುವುದು,ಸ್ವಾಮಿ ಸಾಕ್ಷಿಯಾಗಿ ಪುಣ್ಯ ಕಾರ್ಯ ಗಳನ್ನು ಮಾಡಿ ಆ ಮೂಲಕ ಆತನನ್ನು ಆರಾಧಿಸುವುದೂ ಜನ್ಮ ಸಾಫಲ್ಯಕ್ಕೆ ಹಾಗೂ ಭಗವದನುಗ್ರಹಕ್ಕೆ ಸೋಪಾನವೇ ಸರಿ.

ನಿರಂತರವಾಗಿ, ನಿರಾತಂಕವಾಗಿ ರಾತ್ರಿ ಸಮಯ ದಲ್ಲಿ ಬ್ರಹ್ಮಾದಿ ದೇವತೆಗಳಿಂದ. ಹಗಲು ಮಾನವರುಗಳಿಂದ ಸೇವೆಗೊಳ್ಳುತ್ತಾ ತನ್ನ ಕರುಣಾದೃಷ್ಟಿಯಿಂದ ಎಲ್ಲರನ್ನು ಸಂಪೂರ್ಣವಾಗಿ ಅನುಗ್ರಹಿಸುತ್ತಿರುವ ಶ್ರೀನಿವಾಸಪ್ರಭುವಿಗೆ ಸಾಟಿಯಾದ ದೇವರು ಮತ್ತೊಬ್ಬರಿಲ್ಲ.ಈ ದೇವರಿಗೆ ಈ ದೇವನೇ ಮಿಗಿಲಾದವನು. ಇಂತಹ ಸರ್ವಜಗತ್ಪ್ರಭುವಾದ ತಿರುಮಲೆ ಶ್ರೀವೇಂಕಟೇಶ್ವರ ಸ್ವಾಮಿಗೆ ಜರಗುವ ವಾರ್ಷಿಕ ಉತ್ಸವಗಳಲ್ಲಿ ಬಹು ಪ್ರಾಧಾನ್ಯತೆಯನ್ನು ಪಡೆದಿರುವ ಉತ್ಸವ ವಾಗಿದೆ ಈ ಆಣಿವಾರೋತ್ಸವ.



ಈ ಆಣಿವರ ಆಸ್ಥಾನ ಜರಗುವಾಗ ಪ್ರತಿದಿನ ಬೆಳಗ್ಗೆ ಸುಪ್ರಭಾತ,ವಿಶ್ವರೂಪದರ್ಶನ,ತೋಮಾಲಸೇವೆ, ಮುಂತಾದವುಗಳನ್ನು, ಸ್ನಪನ ಮಂಟಪದಲ್ಲಿ ಶ್ರೀವೇಂಕಟೇಶ್ವರ ಸ್ವಾಮಿಯ (ಉತ್ಸವ ಮೂರ್ತಿಯನ್ನು) ಛತ್ರಚಾಮರಾದಿಗಳಿಂದ,ಬಂಗಾರಸಿಂಹಾಸನ ಮೇಲಿರಿಸಿ ವಿರಾಜಮಾನಗೊಳಿಸಿ ಉದ್ಯೋಗ ಭೃತ್ಯವೃಂದದವರು ಸ್ವಾಮಿಗೆ ಪಂಚಾಂಗ ಶ್ರವಣ ಮಾಡಿಸುತ್ತಾರೆ. ತಿಥಿ, ವಾರ, ನಕ್ಷತ್ರ ವಿಶೇಷಗಳೊಂದಿಗೆ ಉತ್ಸವಗಳ ವಿಶೇಷತೆಗಳನ್ನು ಸ್ವಾಮಿಗೆ ಕೇಳಿಸುತ್ತಾರೆ. ಅಷ್ಟೇ ಅಲ್ಲದೇ ಹಿಂದಿನ ಆದಾಯವನ್ನು, ಬೆಳ್ಳಿ-ಬಂಗಾರ, ಒಡವೆಗಳು ಪಾತ್ರೆಗಳು, ಮುಂತಾದ ಸಮಸ್ತ ವಸ್ತುಗಳನ್ನು ಲೆಕ್ಕವಿಟ್ಟು, ಹಣದ ಆದಾಯವನ್ನು ಪೈಸೆಗಳ ಸಮೇತ ಶ್ರೀ ಸ್ವಾಮಿಗೆ ಭಕ್ತಿಯುತರಾಗಿ ಓದಿಸಿ ತಿಳಿಸುತ್ತಾರೆ. ಈ ಹಿಂದೆ ಸಂದರ್ಶಿಸಿದ ಭಕ್ತರ ಸಂಖ್ಯೆಗಳನ್ನು ಸಹಾ ತಿಳಿಸಲಾಗುತ್ತದೆ. ಈ ಲೆಕ್ಕ ಪತ್ರಗಳನ್ನು ಸ್ವಾಮಿ ಮಹಾಗರ್ವದಿಂದ ಆಲಿಸಿಕೊಂಡು, ಆನಂದಗೊಂಡು ಭಕ್ತರನ್ನು ಹರಸುತ್ತಾರೆ. ಇದು ಪ್ರತಿನಿತ್ಯ ನಡೆಯುವ ಸ್ವಾಮಿಯ ಆಸ್ಥಾನ.

ಆದರೆ ಪ್ರತಿ ನಿತ್ಯ ಜರಗುವ ಈ ಕೈಂಕರ್ಯಕ್ಕಿಂತಲೂ ದಕ್ಷಿಣಾಯನ ಪುಣ್ಯಕಾಲವಾದ ಜುಲೈ 17 ರಂದು ಜರಗುವ ಆಣಿವರ ಆಸ್ಥಾನ ಮಹೋತ್ಸವವು ಅತ್ಯಂತ ವಿಶಿಷ್ಟವಾದುದು. ತಿರುಮಲೆ ಆಲಯದ ಚರಿತ್ರೆಯಲ್ಲೇ ಅತಿ ಪ್ರಾಮುಖ್ಯತೆಯನ್ನು ಪಡೆದುದಾಗಿದೆ.

ಪ್ರತಿ ದಿನದಂತೆಯೇ ದಕ್ಷಿಣಾಯನ ಸಂಕ್ರಮಣದ ದಿನ (ಜುಲೈ17) ಬೆಳಗ್ಗೆ ಶ್ರೀ ಸ್ವಾಮಿಗೆ ಸುಪ್ರಭಾತ, ವಿಶ್ವರೂಪ ದರ್ಶನ,ತೋಮಾಲೆಸೇವೆ ಯಥಾಪ್ರಕಾರ ಜರಗುತ್ತವೆ. ಆದರೆ ದಿನವೂ ಜರಗುವ ಉತ್ಸವ ಶ್ರೀನಿವಾಸಮೂರ್ತಿಗೆ ಬಂಗಾರ ಸಿಂಹಾಸನದ ಪಲ್ಲಕ್ಕಿ ಸೇವೆ ಜರುಗುವುದಿಲ್ಲ. ತೋಮಾಲೆ ಸೇವೆ ತದನಂತರ ಶ್ರೀದೇವಿ ಭೂದೇವಿಯರೊಂದಿಗೆ ಶ್ರೀಮಲೆಯಪ್ಪನಿಗೆ (ಉತ್ಸವ ಮೂರ್ತಿ) ಶ್ರೀ ವಿಶ್ವಕ್ಸೇನ (ಶ್ರೀನಿವಾಸನ ಸೇನಾಧಿಪತಿ)ಯವರಿಗೆ ಆಲಯದಲ್ಲೇ ಏಕಾಂತದಲ್ಲಿ ತಿರುಮಜ್ಜನ (ಅಭಿಷೇಕ) ಜರುಗಿಸಲಾಗುತ್ತದೆ. ತದನಂತರ ಸಹಸ್ರ ನಾಮಾರ್ಚನೆ ನೈವೇದ್ಯಗಳನ್ನು (ಮೊದಲ ಗಂಟೆ) ಜರುಗಿಸಲಾಗುತ್ತದೆ.

ಬಳಿಕ ಸ್ವರ್ಣದ್ವಾರದ ಮುಂದಿರುವ ತಿರುಮಹಾಮಣಿ ಮಂಟಪ (ಘಂಟಾ ಮಂಟಪ) ದಲ್ಲಿ ಸರ್ವಭೂಪಾಲವಾಹನದಲ್ಲಿ ಉಭಯದೇವತೆಯರೊಂದಿಗೆ ಕೂಡಿದ ಶ್ರೀ ಸ್ವಾಮಿಯನ್ನು ಬಂಗಾರದ್ವಾರದ ಮುಂಗಡೆ ಗರುಡನಿಗೆ ಅಭಿಮುಖವಾಗಿ ಪಲ್ಲಕ್ಕಿಯಲ್ಲಿ ಸ್ವಲ್ಪ ಹೊತ್ತು ಕೂರಿಸುತ್ತಾರೆ. ಸರ್ವಾಭರಣಗಳಿಂದಲೂ ಸುಗಂಧ ಪರಿಮಳಭರಿತವಾದ ಪುಷ್ಪಾಹಾರಗಳಿಂದಲೂ ಉತ್ಸವ ಮೂರ್ತಿಯನ್ನು ವಿಶೇಷವಾಗಿ ಅಲಂಕರಿಸುತ್ತಾರೆ.

ಸ್ವಾಮಿಯ ಪಕ್ಕದಲ್ಲೇ ಪ್ರತ್ಯೇಕವಾದ ಪೀಠದ ಮೇಲೆ ದಕ್ಷಿಣಾಭಿಮುಖವಾಗಿ ಶ್ರೀವಿಶ್ವಕ್ಸೇನರನ್ನು ಸಹ ಕೂರಿಸಿ ಆಭರಣಗಳಿಂದ ಪುಷ್ಪಾಹಾರಗಳಿಂದ ಅಲಂಕರಿಸುತ್ತಾರೆ. ವಿಶೇಷವಾದ ಶಿರಸ್ತ್ರಾಣಗಳಿಂದ, ಖಡ್ಗಗಳಿಂದ ಅಲಂಕೃತನಾಗಿ ಅತ್ಯಂತ ಭಯಭಕ್ತಿಗಳಿಂದ ಶ್ರೀ ವೇಂಕಟೇಶ್ವರಸ್ವಾಮಿಯ ಆಜ್ಞೆಯನ್ನು ಶಿರಸಾವಹಿಸಲು ಸನ್ನದ್ಧನಾಗಿರುತ್ತಾನೆ ಸೇನಾಧಿಪತಿ.

ಆನಂತರ ಆನಂದನಿಲಯದ ಮೂಲದೈವವನ್ನು ಸ್ವರ್ಣದ್ವಾರದ ಬಳಿ ಕೂರಿಸಿದ ಶ್ರೀನಿವಾಸನ ಉತ್ಸವಮೂರ್ತಿಯನ್ನು ಸೇನಾಧಿಪತಿಯನ್ನು ಆಸ್ಥಾನರೂಢರನ್ನಾಗಿ ಮಾಡಿ ವಿಶೇಷ ಪ್ರಸಾದವನ್ನು ಈ ರೀತಿಯಲ್ಲಿ ನಿವೇದಿಸಲಾಗುತ್ತದೆ.

ಶ್ರೀಯುತ ದೊಡ್ಡಜಿಯ್ಯಂಗಾರರು,ಚಿಕ್ಕಜಿಯ್ಯಂಗಾರರು, ಏಕಾಂಗಿಗಳು, ಅರ್ಚಕರು, ಆಚಾರ್ಯಪುರುಷರು, ವೇದಪಂಡಿತರು, ದೇವಸ್ಥಾನ ಕಾರ್ಯಕರ್ತರು,ಇತರೆ ಅಧಿಕಾರಿಗಳು,ದೇವಾಲಯ ಸಹಾಯ ಕಾರ್ಯನಿರ್ವಹಣಾಧಿಕಾರಿಗಳು, ಪಾರುಪತ್ಯೆದಾರರು, ಛತ್ರ-ಚಾಮರಗಳಿಂದ, ಮಂಗಳವಾದ್ಯ ಸಮೇತರಾಗಿ ವೇದ ಪಾರಂಗತರು ವೇದ ಪಾರಾಯಣ ಮಾಡುತ್ತಿರಲು ಗಮೇಕರು (ಅಡೆಗೆ ಶಾಲೆಯಿಂದ ಪ್ರಸಾದವನ್ನು ನಿವೇದನೆಗಾಗಿ ತಂದು ಸಮರ್ಪಿಸುವವರು) ಸಿದ್ಧಗೊಂಡ ವಿಶೇಷವಾದ ಪಾಕಗಳನ್ನು (ಪೊಂಗಲ್, ಸಕ್ಕರೆ ಪೊಂಗಲ್, ಪುಳಿಯೋಗರೆ,ದಧ್ಯನ್ನ, ಪರಮಾನ್ನ, ಲಡ್ಡು, ವಡೆ, ಅಪ್ಪಂ, ದೋಸೆ ಮೊದಲಾದುವುಗಳು) ನಿವೇದನೆ ಮಾಡುತ್ತಾರೆ. ದೇವಾಲಯದ ಸುತ್ತಲಿರುವ ಪ್ರಾಂಗಣದಲ್ಲಿ ಸ್ವರ್ಣ ಬಾವಿಯ ಪಕ್ಕದಲ್ಲಿರುವ ಪಾಕಶಾಲೆಯಿಂದ ಮೊದಲುಗೊಂಡು ಈ ಪ್ರಸಾದಗಳೆಲ್ಲವನ್ನು ಆನಂದನಿಲಯದ ಸುತ್ತೂ ಪ್ರದಕ್ಷಿಣೆ ಮಾಡಿಸುತ್ತಾ, ಬೆಳ್ಳಿಬಾಗಿಲಿನ ಎದುರಾಗಿ ಹೊರಗಿರುವ ಧ್ವಜಸ್ತಂಭಕ್ಕೆ ಪ್ರದಕ್ಷಿಣೆ ಹಾಕುತ್ತಾ ಒಳನಡೆದು ಒಂದು ಆಲಯವನ್ನು ಪ್ರವೇಶಿಸಿ ಆಚೆಯ ಮೂಲ ಸನ್ನಿಧಿಯಲ್ಲೂ ಈಚೆ ಸ್ವರ್ಣದ್ವಾರದ ಹತ್ತಿರದ ಆಸ್ಥಾನದಲ್ಲಿ ನಿವೇದನೆ ಮಾಡುತ್ತಾರೆ. ಎರಡೂ ಕಡೆ ಗಂಟೆಯು ಬಾರಿಸುತ್ತಿರಲು ಈ ವಿಶೇಷ ನೈವೇದ್ಯ ಸಮರ್ಪಣೆ ಜರಗುತ್ತಿರುತ್ತದೆ.

ಈ ನೈವೇದ್ಯವಾದ ಬಳಿಕ ಯೋಗನಾರಸಿಂಹ ಸ್ವಾಮಿ ಆಲಯ ಪಕ್ಕದಲ್ಲಿರುವ ಪರಿಮಳಪುರದಿಂದ ಶ್ರೀಮಾನ್ ದೊಡ್ಡ ಜಿಯ್ಯಾಂಗಾರರು ದೊಡ್ಡ ಬೆಳ್ಳಿಹರಿವಾಣದಲ್ಲಿ ಮಡಿಸಿಟ್ಟು ಸುತ್ತಲಾದ ಆರು ದೊಡ್ಡ ರೇಷ್ಮೆ ವಸ್ತುಗಳನ್ನು ತಲೆಯ ಮೇಲಿಟ್ಟು ಕೊಂಡು ಛತ್ರ - ಚಾಮರ ಮಂಗಳ ವಾದ್ಯ ಸಮೇತವಾಗಿ ಮುಂದೆ ಪಂಚಮುಖ ದೀವಿಗೆಯ ಬೆಳಕಿನಲ್ಲಿ ನಾದಘೋಷಗಳೊಂದಿಗೆ,ಗಂಟನಾದದಲ್ಲಿ ವೇದಪಾರಾಯಣಗಳೊಂದಿಗೆ ದೇವಸ್ಥಾನದ ಚಿಕ್ಕಜಿಯ್ಯಂಗಾರರು, ಕಾರ್ಯನಿರ್ವಹಣಾಧಿಕಾರಿಗಳು,ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಉಪ

ಕಾರ್ಯನಿರ್ವಹಣಾಧಿಕಾರಿಗಳು,ಸಹಾಯಕಾರ್ಯನಿರ್ವಹಣಾಧಿಕಾರಿಗಳು,ಪಾರುಪತ್ತೆದಾರರು, ಮುಂದೆ ಆಲಯಾಧಿಕಾರಿಗಳು ಹಿಂಭಾಗದಲ್ಲೂ ದೇವಾಲಯದ ಬೆಳ್ಳಿಬಾಗಿಲ ಮುಂದಿರುವ ಧ್ವಜಸ್ತಂಭಕ್ಕೆ ಪ್ರದಕ್ಷಿಣಾಕಾರದಲ್ಲಿ ಬಂದು ನಂತರ ಆನಂದನಿಲಯದ ವಿಮಾನಕ್ಕೆ ಪ್ರದಕ್ಷಿಣೆ ಹಾಕುತ್ತಾ ನೇರವಾಗಿ ಆನಂದನಿಲಯದಲ್ಲಿರುವ ಸ್ವಾಮಿಯ ಮೂಲ ಮೂರ್ತಿಯ ಬಳಿ ಅವನ್ನೆಲ್ಲ ಸಮರ್ಪಿಸುತ್ತಾರೆ. ದೊಡ್ಡ ಜಿಯ್ಯಾಂಗಾರರು, ಚಿಕ್ಕಜಿಯ್ಯಂಗಾರರು. ಏಕಾಂಗಿಯರು ಮಾತ್ರವೇ ಆನಂದನಿಲಯವನ್ನು ಪ್ರವೇಶಿಸುತ್ತಾರೆ. ಅರ್ಚಕರು ಕೂಡಲೇ ಕುಲಶೇಖರ ಪಡಿ (ಸ್ವಾಮಿಯ ಮುಂದಿರುವ ಹೊಸ್ತಿಲು) ಹತ್ತಿರ ಶಾಲು ಹಾಕುತ್ತಾರೆ. ಒಳಗೆ ಅರ್ಚಕ ಪುರೋಹಿತರು ಶ್ರೀಜಿಯ್ಯಂಗಾರರು ಸಮರ್ಪಿಸಿದ ಆರು ರೇಷ್ಮೆ ವಸ್ತ್ರಗಳಲ್ಲಿ ನಾಲ್ಕುನ್ನು ಸ್ವಾಮಿಯ ಮೂಲ ಮೂರ್ತಿಗೆ, ಅಲಂಕರಿಸುತ್ತಾರೆ. ಒಂದು ಕಿರೀಟಕ್ಕೆ, ಎರಡನೇಯದು ನಂದಕ ಖಡ್ಗಕ್ಕೆ ಮೂರನೆಯದನ್ನು ಪಂಚೆಗಾಗಿ, ನಾಲ್ಕನೆಯದನ್ನು ಅಂಗವಸ್ತ್ರವನ್ನಾಗಿ ಅಲಂಕರಿಸುತ್ತಾರೆ. ತೆರೆ ಸರಿಸಿದ ನಂತರ, ಅರ್ಚಕ ಪುರೋಹಿತರು ಶ್ರೀ ವೇಂಕಟೇಶ್ವರ ಸ್ವಾಮಿ ಮೂಲಮೂರ್ತಿಯ ಶಿರಸ್ಸಿಗೆ ರುಮಾಲನ್ನು ಕಟ್ಟಿ (ಪೇಟ) ಪೂಜಾವಿಧಿಗಳನ್ನು ಪೂರ್ಯೈಸುತ್ತಾರೆ. ಆರತಿಯಾದ ನಂತರ ಪ್ರಧಾನಾರ್ಚಕರು ಮೊಟ್ಟಮೊದಲಿಗೆ ತೀರ್ಥ ಸ್ವೀಕರಿಸಿ ಶಠಾರಿ ಮರ್ಯಾದೆಯನ್ನು ಸ್ವೀಕರಿಸುತ್ತಾರೆ.

ಆ ಬಳಿಕ, ಶ್ರೀ ಜಿಯ್ಯಂಗಾರರು ಕುಲಶೇಖರ ಪಡಿಯ ಈಚೆ ಬದಿಗೆ ಬಂದು ತೀರ್ಥವನ್ನು ಸ್ವೀಕರಿಸಿ ಮರಳಿ ಪಡಿಯ ಒಳಗೆ ಹೊರತು ಶಠಾರಿ ಮರ್ಯಾದೆಯನ್ನು ಸ್ವೀಕರಿಸುತ್ತಾರೆ. ಹಾಗೆಯೇ ಚಿಕ್ಕ ಜಿಯ್ಯಾಂಗಾರರು ಯೋಗಿಗಳು (ಆನಂದ ನಿಲಯದ ಅರ್ಚಕರನ್ನು ಹೊರತು ಪಡಿಸಿ ಯಾರೂ ತೀರ್ಥವನ್ನು ಸ್ವೀಕರಿಸುವಂತಿಲ್ಲ) ಸ್ವೀಕರಿಸುತ್ತಾರೆ. ತದ ನಂತರ ತೀರ್ಥಾರತೀ ಶಠಾರಿ ಮರ್ಯಾದೆಗಳು ದೇವಸ್ಥಾನದ ಕಾರ್ಯನಿರ್ವಾಹಕರಿಗೆ, ಆಲಯದ ಅಧಿಕಾರಿಗಳಿಗೆ ಆಶೀರ್ವಚನಗಳು ಜರಗುತ್ತವೆ. ಎಲ್ಲರಿಗೂ ತೀರ್ಥ, ಗಂಧ, ಶಠಾರಿ, ತಾಂಬೂಲ ಮರ್ಯಾದೆಗಳಾದ ನಂತರ ಶ್ರೀ ಜಿಯ್ಯಂಗಾರರು ಉಳಿದೆರಡು ರೇಷ್ಮೆವಸ್ತ್ರಗಳನ್ನು ತಲೆಯ ಮೇಲಿಟ್ಟುಕೊಂಡು ಸ್ವರ್ಣದ್ವಾರದ ಬಳಿ ಸ್ಥಿತಗೊಂಡ ಉತ್ಸವ ಮೂರ್ತಿಗಳಿಗೆ ಸಮರ್ಪಿಸುತ್ತಾರೆ. ಅರ್ಚಕರು ಈ ಎರಡು ರೇಷ್ಮೆ ಬಟ್ಟೆಗಳಲ್ಲಿ ಒಂದನ್ನು ಶ್ರೀಮಲೆಯಪ್ಪಸ್ವಾಮಿಗೆ ಎರಡನೇಯದನ್ನು ವಿಶ್ವಕ್ಸೇನರಿಗೆ ಸಮರ್ಪಿಸಿ ಅಲಂಕರಿಸುತ್ತಾರೆ.

ಇದಾದ ಬಳಿಕ ಪ್ರಧಾನಾರ್ಚಕರು ತಮ್ಮ ತಲೆಗೆ ಸ್ವಾಮಿಯ ಹಳೆಯ ವಸ್ತ್ರಗಳನ್ನು ರುಮಾಲಿನಂತೆ ಕಟ್ಟಿಕೊಂಡು ಶ್ರೀನಿವಾಸ, ವಿಶ್ವಕ್ಸೇನರ ಮೇಲೆ ಕುಂಕುಮಾಕ್ಷತೆಗಳನ್ನು ಹಾಕುತ್ತಾರೆ. ಅನಂತರ ಸೇನಾಧಿಪತಿಗೆ ಸ್ವಾಮಿಯ ಹಳೆ ಬಟ್ಟೆಯಿಂದ ರುಮಾಲನ್ನು ಕಟ್ಟಿ ಸ್ವಾಮಿಗೆ ಏರಿಸಿದ ಕುಂಕುಮಾಕ್ಷತೆಗಳನ್ನು ಹಾಕಿ ಶಠಾರಿಮರ್ಯಾದೆಗಳನ್ನು ಜರುಗಿಸಲಾಗುತ್ತದೆ.

ನಂತರ ಗಮೇಕಾರರು, ಮಹಂತರು, ಮೈಸೂರು ರಾಜ, ತಾಳ್ಳಪಾಕ , ತರಿಗೊಂಡರ ವಂಶಸ್ಥರಿಗೆ ಮರ್ಯಾದೆಗಳನ್ನು ಸಲ್ಲಿಸಲಾಗುತ್ತದೆ. ಆನಂತರ ಅಲ್ಲಿಗೆ ಬಂದ ಭಕ್ತರೆಲ್ಲರಿಂದ ಒಂದೊಂದು ರೂಪಾಯಿಯನ್ನು ಸಂಗ್ರಹಿಸಿ, ಕಲಿಸಿ, ‘ರೂಪಾಯಾರತಿ’ಯನ್ನು ಮಾಡಲಾಗುತ್ತದೆ. ಈ ಆರತಿಗಾಗಿ ವಸೂಲಿ ಮಾಡಿದ ರೂಪಾಯಿಗಳನ್ನು ಕೂಡಲೇ ಕಾರ್ಯನಿರ್ವಾಹಕರ ಸಮಕ್ಷಮದಲ್ಲಿ ಖಜಾನೆಗೆ ಜಮಾ ಮಾಡಲಾಗುತ್ತದೆ.

ಮತ್ತೆ ಕಡೆಯಲ್ಲಿ ಶ್ರೀ ಜಿಯ್ಯಂಗಾರರಿಗೆ, ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾತ್ರವೇ ರುಮಾಲನ್ನು ಕಟ್ಟಿ ಶಠಾರಿ ಮರ್ಯಾದೆಯನ್ನು ನೀಡಲಾಗುತ್ತದೆ.

ಅನಂತರ ಶ್ರೀನಿವಾಸ ಸ್ವಾಮಿಗೆ ನಿವೇದಿಸಿದ ಪ್ರಸಾದಗಳನ್ನು ಭಕ್ತರಿಗೆ ಪ್ರಸಾದ ವಿತರಣೆ ನಡೆಯುತ್ತದೆ. ಈ ಅಣಿವಾರ ಆಸ್ಥಾನದಲ್ಲಿ ಪ್ರತಿನಿತ್ಯ ಜರುಗುವ ಉತ್ಸವಗಳು ಜರಗುವುದಿಲ್ಲ.

ತದನಂತರ ಸ್ವಾಮಿಯ ಪಟ್ಟದರಸಿಯರನ್ನು ಕೂಡಿ ಆ ಮಂಟಪದಲ್ಲೇ (ಎರಡನೇ ಗಂಟೆ) ಮಧ್ಯಾಹ್ನದ ನೈವೇದ್ಯ ಆಗುವವರೆಗೆ ಇಡುತ್ತಾರೆ. ಬಳಿಕ ಅಂದು ಸಾಯಂಕಾಲ ತಿರುಮಲೆಯ ರಥಬೀಧಿಗಳಲ್ಲಿ ಸ್ವಾಮಿ ರಮಣೀಯವಾಗಿ ಅಲಂಕರಿಸಲ್ಪಟ್ಟ “ಪುಷ್ಪಪಲ್ಲಕ್ಕಿ”ಯಲ್ಲಿ ಮೆರವಣಿಗೆ ಹೊರಡುತ್ತಾರೆ. ಉತ್ಸವಾನಂತರ ಈ ಸ್ವಾಮಿಯು ಪಟ್ಟದರಸಿಯರೊಂದಿಗೆ ದೇವಾಲಯವನ್ನು ಪ್ರವೇಶಿಸುತ್ತಾರೆ.

ಯಾರು ಈ ಪುಣ್ಯಕಾಲದಲ್ಲಿ ಸ್ವಾಮಿಗೆ ವಿಶೇಷ ಪೂಜೆ ಆಚರಿಸಿ ಧನ್ಯರಾಗುತ್ತಾರೋ ಅವರಿಗೆ ಕೀರ್ತಿ, ವಿಜಯ, ಇಷ್ಟಾರ್ಥ ಸಿದ್ಧಿ, ವಿಷ್ಣು ಲೋಕಪ್ರಾಪ್ತಿಗೆ ಪಾತ್ರರಾಗುತ್ತಾರೆನ್ನುತ್ತದೆ ಆಗಮಶಾಸ್ತ್ರ. ಆದ್ದರಿಂದ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು “ರೂಪಾಯಾರತಿ”ಯಲ್ಲಿ ಕಾಣಿಕೆಗಳನ್ನು ಸಮರ್ಪಿಸಿ ಸ್ವಾಮಿಯ ಆಶೀರ್ವಾದಗಳನ್ನು ಹೊಂದೋಣ.

(ದಿ|| ಪಂಡಿತ ವೇದಾಂತ ಜಗನ್ನಾಥಾಚಾರ್ಯರವರ ‘ಶ್ರೀವೇಂಕಟೇಶ್ವರ ವೈಭವ’ ಮತ್ತು ಶ್ರೀ ಜೆ. ಬಾಲಸುಬ್ರಹ್ಮಣ್ಯರವರ “ಶ್ರೀನಿವಾಸವೈಭವ ” ಎಂಬ ಗ್ರಂಥಾಧಾರಿತ)

# ಪೆರಿಯಾಳ್ವಾರ್ ಅವರ ಶ್ರೀನಿವಾಸನ ದಿವ್ಯಾನುಭವ

- ಶ್ರೀಮತಿ. ಎ. ಗೀತ ವೀರ ರಾಘವನ್



ಆಳ್ವಾರುಗಳು ಈ ಪುಣ್ಯ ಭೂಮಿಯಲ್ಲಿ ೫೦೦೦ ವರುಷಗಳ ಹಿಂದೆ ಅವತರಿಸಿದ ಸಂತಶ್ರೇಷ್ಠರು. ಭಗವಂತನು ಈ ದಿವ್ಯ ಸೂರಿಗಳಿಗೆ ತನ್ನ ಅನುಭವವನ್ನು ಪುಷ್ಕಳವಾಗಿ ನೀಡಿ ಅವರು ಆ ಆನಂದದಲ್ಲಿ ಮತ್ತರಾಗುವಂತೆ ಮಾಡಿದನು. ಶ್ರೀ ವೈಷ್ಣವ ದಿವ್ಯ ಕ್ಷೇತ್ರಗಳೆಂದು ಪ್ರಸಿದ್ಧವಾಗಿರುವ ೧೦೮ ದಿವ್ಯ ದೇಶಗಳಲ್ಲಿ ಆಳ್ವಾರುಗಳು ಭಗವಂತನಿಗೆ ಮಂಗಳಾ ಶಾಸನ ಮಾಡಿ ಆ ಪರಬ್ರಹ್ಮನ ಪಾದಕಮಲಗಳಲ್ಲಿ ಶರಣಾಗಿ ಅಲ್ಲಿ ತಾವು ಅನುಭವಿಸಿದ ಆನಂದವನ್ನು ಮೈಮರೆತು ಹಾಡಿದರು.

ಪೆರಿಯಾಳ್ವಾರ್ ಅವರು ತಿರುಮಲೆಯಲ್ಲಿ ನಿತ್ಯವಾಸ ಮಾಡುತ್ತಿರುವ ಶ್ರೀನಿವಾಸನನ್ನು ಅನನ್ಯ ಭಾವದಿಂದ ಆರಾಧಿಸಿ ಧನ್ಯರಾಗಿದ್ದಾರೆ. ಅವರ ಪ್ರಬಂಧದಲ್ಲಿ ಅನೇಕ ಸಂದರ್ಭಗಳಲ್ಲಿ ಶ್ರೀನಿವಾಸನನ್ನು ಕೊಂಡಾಡಿದ್ದಾರೆ. ಅವರ ದಿವ್ಯ ಪ್ರಬಂಧದ ಮಕರಂದವಾಗಿ ಕೊನೆಯ ದಶಕದಲ್ಲಿ ಶ್ರೀ ಶ್ರೀನಿವಾಸನು ಮೂಡಿ ಮೆರೆದಿದ್ದಾನೆ. ಅವರು ತಾವು ಅನುಭವಿಸಿದ ಶ್ರೀನಿವಾಸನ ದಿವ್ಯಾನುಭವವನ್ನೂ ಆ ಪರಬ್ರಹ್ಮನ ಸಾಕ್ಷಾತ್ಕಾರವಾದುದನ್ನೂ ಮೈಮರೆತು ಹಾಡಿ ನಲಿದಿದ್ದಾರೆ.

ಶುತ್ತುಂ ಒಳಿವಟ್ಟಂ...........

........ಅಂಬುಲೀ! ಕಡಿದೋಡಿವಾ ॥ (ಪೆ.ತಿ.೧-೫-೩)

ಯಶೋದಾಭಾವದಲ್ಲಿ ಆಳ್ವಾರ್ ಅವರು ಶ್ರೀ ಕೃಷ್ಣನ ಬಾಲಲೀಲೆಗಳನ್ನು ಅನುಭವಿಸಿ ಆನಂದಿಸಿದ್ದಾರೆ. ಪುಟ್ಟ ಕೃಷ್ಣನು ಚಂದ್ರನನ್ನು ತನ್ನೊಡನೆ ಆಡಲು ಬರಲು ಕೈ ನೀಡಿ ಕರೆಯುತ್ತಿದ್ದಾನೆ. ಅಲ್ಲಿ ಆಳ್ವಾರ್ ಅವರು ಚಂದ್ರನಿಗೆ "ನಿನ್ನ ಮುಖ ಮಂಡಲ ನನ್ನ ಮಗನ ಮುಖಕ್ಕೆ ಸದೃಶವಾಗಿದೆ. ನನ್ನ ತಿರುಮಲೆಯಲ್ಲಿ ನಿತ್ಯವಾಸ ಮಾಡುತ್ತಿರುವ ಸ್ವಾಮಿಯ ಪುಟ್ಟ ಕೈಗಳು ನೋಯದಂತೆ ಎಲೈ ಚಂದ್ರನೇ, ನೀನು ಓಡಿ ಬಾ" ಎಂದು ಹಾಡಿದ್ದಾರೆ.

ಎನ್ಇದುಮಾಯಂ.,........

.......... ವೇಂಗಡವಾಣನೇ ಅಚ್ಚೋವಚ್ಚೋ ॥ (ಪೆ.ತಿ.೧-೯-೮)

ವಾಮನ ರೂಪಿಯಾದ ಸ್ವಾಮಿ ಬಲಿ ಚಕ್ರವರ್ತಿಯ ದಾನತೀರ್ಥ ಕೈಯಲ್ಲಿ ಬಿದ್ದೊಡನೆ ತ್ರಿವಿಕ್ರಮನಾಗಿ ಅತಿ ದೊಡ್ಡ ಶ್ರೀ ಪಾದದಿಂದ ಅಳೆಯತೊಡಗಿದನು. ಬಲಿ ಚಕ್ರವರ್ತಿಗೆ ಅದು ತಿಳಿದಿರಲಿಲ್ಲವೆಂದು ಅವನ ಮಗ ನಮುಚಿ ವಾಮನ ರೂಪದಲ್ಲಿ ಅಳೆಯಬೇಕೆಂದಾಗ ಸ್ವಾಮಿ ಅವನನ್ನು ಆಕಾಶಕ್ಕೆ ಬಿಸುಟ. ಉಜ್ವಲ ಕಿರೀಟವನ್ನು ಧರಿಸಿ ತಿರುಮಲೆಯ ನಾಯಕನಾಗಿರುವ ಆ ಸ್ವಾಮಿ ತಮ್ಮನ್ನು ಸಂಶ್ಲೇಷಿಸಬೇಕೆಂದು ಆಳ್ವಾರವರು ಪ್ರಾರ್ಥಿಸುತ್ತಾರೆ.

(ಪೆ.ತಿ.೨-೯-೬) ಆಳ್ವಾರವರು ಸ್ವಾಮಿಗೆ "ಗೋ ವರ್ಧನ ಪರ್ವತವನ್ನೆತ್ತಿ, ಕುಂಭವರ್ತನ ಮಾಡಿ ವೇದ ಪ್ರತಿ ಪಾದ್ಯನಾಗಿ

ಭೂಲೋಕ ದೇವಲೋಕದವರೆಲ್ಲಾ ಅನುಭವಿಸುವುದಕ್ಕಾಗುವಂತೆ ತಿರುಮಲೆಯಲ್ಲಿ ನಿಂತಿರುವೆ. ನೀನು ಬೇರೆಯವರ ಮನೆಗೆ ಹೋಗಿ ತುಂಟತನ ಮಾಡದೆ ಇಲ್ಲಿ ಬಾ" ಎಂದು ಪ್ರೀತಿಯಿಂದ ಕರೆಯುತ್ತಾರೆ.

ಭಗವಂತನು ತನ್ನಲ್ಲಿ ಶರಣಾದವರಿಗೆ ನಿತ್ಯ ಕೈಂಕರ್ಯ ಕರುಣಿಸಿ ಅನುಗ್ರಹಿಸುತ್ತಾನೆ. ಈ ಚೇತನೋದ್ಧಾರ ಕಂಡು ಬರುವುದು ಶ್ರೀ ವೇಂಕಟಾಚಲದಲ್ಲಿ. ಪೆರಿಯಾಳ್ವಾರ್ ಅವರು ಅವರ "ಶೆನ್ನಿಯೋಂಗು" (೫-೪) ಎನ್ನುವ ದಶಕದಲ್ಲಿ ತಿರುಮಲೆಯಲ್ಲಿ ಶ್ರೀವೇಂಕಟರಮಣನ ಕಿವಿಗೆ ಕೇಳುವಂತೆ ಮನಮುಟ್ಟುವಂತೆ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿ ಅವನ ದಿವ್ಯಾನುಭವವನ್ನು ಪಡೆದಿದ್ದಾರೆ.

ಶೆನ್ನಿಯೋಂಗು ತಣ್‌ತಿರುವೇಂಗಡಮುಡೈಯಾಯ್.....
.......................... ಇನಿಯನ್ನಿರುಕ್ಕುರಿಪ್ಪೇ ॥ (ಪೆ.ತಿ.೫-೪)

ಆಳ್ವಾರವರು ತಮ್ಮ ಆತ್ಮಕ್ಕೂ ಶರೀರಕ್ಕೂ ಶ್ರೀನಿವಾಸನದಾದ ಸುದರ್ಶನ ಚಿಹ್ನೆಯನ್ನು ತಾವು ಒತ್ತಿಕೊಂಡು ಅವನ ಕೃಪೆಯನ್ನೇ ನಂಬಿ ಇರುತ್ತಿರುವುದಾಗಿ ತಿಳಿಸಿ, ಆಕಾಶವನ್ನು ಮುಟ್ಟುವಂತಿರುವ ಶಿಖರಗನ್ನುಳ್ಳ ತಂಪಾದ ತಿರುಮಲೆ ಯಲ್ಲಿರುವ ಸ್ವಾಮಿ ಲೋಕವನ್ನೆಲ್ಲಾ ಉದ್ಧರಿಸುವವನು, ಕರುಣಾಸಾಗರನು, ಆಶ್ರಿತರ ದೋಷವನ್ನು ಕಾಣದಿರುವವನು, ಯಶೋದೆಯ ಪ್ರೀತಿಯಲ್ಲಿ ಸಿಲುಕಿ ಕಟ್ಟಿಗೊಳಗಾದವನು. ಅಂತಹ ಸ್ವಾಮಿಯ ಮನದಾಸೆ ಏನೆಂದು ತಿಳಿಯಲು ಆಳ್ವಾರ್ ಇಚ್ಛಿಸುತ್ತಾರೆ.

ಪರವೈಯೇರು ಪರಮ್ಬುರುಡಾ........
........ತಲೈಪ್ಪತ್ತಿ ವಾಯ್ ಕ್ಕೊಂಡದೇ ॥ (ಪೆ.ತಿ.೫-೪-೨)

ಆಳ್ವಾರವರು ಗರುಡವಾಹನವಾದ ಸರ್ವರಕ್ಷಕ. ಪುರುಶೋತ್ತಮನು ಅನನ್ಯ ಗತಿಕರಾದ ತಮ್ಮನ್ನು ಸ್ವೀಕರಿಸಿದ ಮೇಲೆ ತಮಗಾದ ಉತ್ಕಟ ಲಾಭವನ್ನು ವರ್ಣಿಸುತ್ತಾರೆ. ಸಂಸಾರವೆಂಬಸಾಗರ ಬತ್ತಿ ಹೋಯಿತು. ಪರಮಪದ ದೊರಕಿತು. ತಮ್ಮ ಪಾಪಕೋಟಿ ಸುಟ್ಟು ಭಸ್ಮವಾಯಿತು. ಜ್ಞಾನವೆಂಬ ಅಮೃತ ನದಿಯ ಪ್ರವಾಹ ತಲೆಯ ಮೇಲೆ ಹರಿಯಲಾರಂಭಿಸಿತು.

ಎಮ್ಮನಾ। ಎನ್ಕುಲದೈವಮೇ।.............
............ ಕೈವಿಟ್ಟೋಡಿ ತ್ತೂರುಹಳ್ ಪಾಯ್ ನ್ದನವೇ ॥ (ಪೆ.ತಿ.೫-೪-೩)



ಆಳ್ವಾರವರು ಶ್ರೀವೆಂಕಟರಮಣನು ಅವರಿಗೆ ನಾಯಕರಾಗಿ ಅರಸನಾಗಿ ಅವರ ಕುಲಕ್ಕೆ ಪರದೈವವಾದಾಗ ಆ ಸ್ವಾಮಿಯ ಅಭಿಮಾನದಲ್ಲಿ ಮುಳುಗಿ ತಾವು ಪಡೆದ ಮಹತ್ತರ ಲಾಭವನ್ನು ಬೇರೆಯಾರು ತಾನೇ ಪಡೆಯಲು ಸಾಧ್ಯ ಎಂದು ಹೇಳಿ ಹಿಗ್ಗಿದ್ದಾರೆ. ಮಾನವರನ್ನು ಭೂತ ಪ್ರೇತದಂತೆ ಕಾಡುವ ಪಾಪರಾಶಿ ಉಸಿರೆತ್ತದೆ ತಮ್ಮನ್ನು ಬಿಟ್ಟು ಓಡಿ ಹೋಯಿತು ಎನ್ನುತ್ತಾರೆ. ಆಳ್ವಾರವರು ಯಾವ ಪಾಪವನ್ನೂ ಮಾಡದ ಮಹಾತ್ಮರು. ಶ್ರೀ ವೆಂಕಟರಮಣನಲ್ಲಿ ಶರಣಾದವರಿಗೆ ಅಂತಹ ಅಲಭ್ಯ ಲಾಭವಾಗುವುದು ಎನ್ನುವುದು ತತ್ವ.

ಕಡಲ್‌ಕಡೈನ್ದಮುದಮ್.............
...........ಶಾಂರ್ಗವಿಲ್ ಶೇವಹನೇ ॥ (ಪೆ.ತಿ.೫-೪-೪)

ಸೌಂದರ್ಯ ನಿಧಿಯಾದ ಹಿರಿಯ ಬೆಟ್ಟದಂತಿರುವ ತೋಳುಗಳುಳ್ಳ ವೀರನು, ಸುದರ್ಶನಚಕ್ರ, ಶಾರ್ಙ್ಗಧನುಸ್ಸಿನಿಂದ ಅಲಂಕೃತವಾದ ಶ್ರೀಹಸ್ತದಿಂದ ಕ್ಷೀರಸಾಗರವನ್ನು ಮಥಿಸಿ ಅಮೃತವನ್ನು ಕಲಶಕ್ಕೆ ಸ್ವಾಮಿ ತುಂಬಿದಂತೆ ಆಳ್ವಾರವರು ಎರಡೂ ಕೈ ನೀಡಿ ಬಿಟ್ಟ ಬಾಯಿಯಿಂದ ಆ ಅಮೃತನನ್ನು ತಮ್ಮ ಮೈಮನಗಳಲ್ಲಿ ತುಂಬಿಸಿಕೊಂಡರು. ಇಂತಹ ಭಾಗ್ಯವಂತರಾದ ಆಳ್ವಾರವರು ತಾವು ಅರಸಾಳುವ ಜಾಗದ ಬಳಿ ಕ್ರೂರವಾಗಿ ದಂಡಿಸುವ ಯಮನಿಗೆ ಬರಲು ಸಾಧ್ಯವೇ ಆಗುವುದಿಲ್ಲವೆಂದು ಘೋಷಿಸುತ್ತಾರೆ.

ಪೊನ್ನೈಕ್ಕೊಂಡುರೈ ಕಲ್ಲೀದೇ.....................
......................... ಎನ್ನುಯಿರ್ ಕ್ಕಾವಲನೇ। (ಪೆ.ತಿ.೫-೪-೫)

ಚಿನ್ನವನ್ನು ಒರೆಗಲ್ಲಿನ ಮೇಲುಜ್ಜಿ ಬಣ್ಣವನ್ನು ನೋಡುವಂತೆ ಆಳ್ವಾರವರು ಆ ಸ್ವಾಮಿಯ ಶ್ರೀನಾಮವನ್ನು ತಮ್ಮ ನಾಲಿಗೆಯ ಮೇಲಿಟ್ಟು ಸದಾ ಉಚ್ಚರಿಸುತ್ತಾರೆ. ಅವನ ಅನುಗ್ರಹದಿಂದ ಅವನನ್ನು ಸದಾಸರ್ವದಾ ಅನುಭವಿಸುವ ವಿಷಯವನ್ನಾಗಿ ಮಾಡಿಕೊಂಡಿದ್ದಾರೆ. ಅವನ ಪಾದಪದ್ಮಗಳಲ್ಲಿ ಶರಣಾಗಿದ್ದಾರೆ. ಅಂತಹ ಆಳ್ವಾರವರು ಎಂದೆಂದಿಗೂ ಇತರರಿಗೆ ಶೇಷರಾಗುವುದಿಲ್ಲವೆಂದು ನಿರ್ಭಯವಾಗಿ ಸಾರಿದ್ದಾರೆ.

ಉನ್ನುಡೈ ವಿಕ್ಕಿರಮಮ್......................

.......................... ಇನಿಯೆಂಗು ಪ್ಪೋಹಿನ್ರದೇ ॥   (ಪೆ.ತಿ. ೫-೪ -೭)

ಆಳ್ವಾರವರು ಸ್ವಾಮಿಯ ಭಕ್ತ ಪರಾಧೀನನೆಂದು ಕೊಂಡಾಡಿದ್ದಾರೆ. ಭಗವಂತನ ಎಲ್ಲಾ ಚೇಷ್ಟಿತಗಳನ್ನು ತಮ್ಮ ಮನಸ್ಸಿನಲ್ಲಿ ಉಜ್ವಲವಾಗಿ ಚಿತ್ರ ಕೆತ್ತಿದಂತೆ ಬರೆದಿಟ್ಟುಕೊಂಡಿದ್ದಾರೆ. ದುಷ್ಟ ಕ್ಷತ್ರಿಯರನ್ನು  ನಿರ್ಮೂಲ ಮಾಡಲು ಪರಶುರಾಮನಾಗಿ ಅವತರಿಸಿದ ಶ್ರೀನಿವಾಸನು ಅತ್ಯಂತ ಶೇಷಭೂತರಾದ ತಮ್ಮಲ್ಲಿಗೆ ಬಂದಿದ್ದಾನೆ. ಇಲ್ಲಿಂದ ಅವನು ಬೇರೆಲ್ಲಿಗೂ ಹೋಗುವುದಿಲ್ಲವೆಂದು  ಧೃಢವಾಗಿ ಹೇಳುತ್ತಾರೆ.

ಪರಪ್ಪದತ್ತು ಕ್ಕಯಲ್ ಪೊರಿತ್ತ...........

..........ಉನಕ್ಕುರಿತ್ತಾಕಿನ್ನೆಯೇ ॥ (ಪೆ.ತಿ.೫-೪-೭)

ಭಗವಂತನು ಕುವಲಯಾ ಪೀಡದ ಕೊಂಬನ್ನು ಮುರಿದು ಚಾಣೂರ ಮುಷ್ಟಿಕರೆಂಬ ಮಲ್ಲರನ್ನು ಧ್ವಂಸ ಮಾಡಿದನು. ಆ ಸ್ವಾಮಿ ತನ್ನ ಕೆಂಪು ಬಣ್ಣವುಳ್ಳ ಅತ್ಯಂತ ಸುಂದರವಾದ ಶ್ರೀ ಪಾದದಿಂದ ಆಳ್ವಾರವರ ಶಿರಸ್ಸನ್ನು ಅಲಂಕರಿಸಿದ್ದಾನೆ. ತಾವು ಸದಾ ಸರ್ವದಾ ಆ ಸ್ವಾಮಿಯ ಶ್ರೀನಾಮಗಳನ್ನು ಹೇಳುವುದರಿಂದ ತಮ್ಮನ್ನು ಅವನಿಗೆ ತಕ್ಕವನಾಗಿ ಮಾಡಿಕೊಂಡು ಬಿಟ್ಟಿದ್ದಾನೆ ಎಂದು ಆಳ್ವಾರವರು ಆಶ್ಚರ್ಯದಿಂದ ಹೇಳುತ್ತಾರೆ.

ಅನಂತನ್ಬಾಲುಮ್..............................

.....................ತೀರ್ನ್ದೇನ್ ನೇಮಿನೆಡಿಯುವನೇ॥ (ಪೆ.ತಿ.೫-೪-೮)

ಆಳ್ವಾರವರು ಭಗವಂತನಲ್ಲಿ ತಮಗಿರುವ ಉತ್ಕಟ ಪ್ರೀತಿ, ಪ್ರೀತಿ ಪರಾಕಾಷ್ಠೆಯನ್ನು ತೋರಿದ್ದಾರೆ. ಶ್ರೀಸುದರ್ಶನವನ್ನು ಹಿಡಿದಿರುವ ಆ ಸಾರ್ವಭೌಮನು ಅನಂತ, ಗರುಡ ಮುಂತಾದವರ ಸ್ನೇಹವನ್ನು ಲೆಕ್ಕಿಸದೆ ಆಳ್ವಾರವರ ಮನಸ್ಸಿನಲ್ಲಿ ಒಂದು ಕಾರಣವೂ ಇಲ್ಲದೆ ಬಂದು ನೆಲೆಸಿ ಅವರು ಉಜ್ಜೀವಿಸುವಂತೆ  ಮಾಡಿದ್ದಾನೆ. ಇವರು ಅವನನ್ನು ಅದಾಸ್ಮರಿಸಿ ಮನಸ್ಸು ಅವನನ್ನು ಆವರಿಸಿ ಕಣ್ಣಿನಲ್ಲಿ ಆನಂದಬಾಷ್ಪ ಹರಿಯುವಂತೆ ಮಾಡಿ ಇವರ ಸಂಸಾರ ತಾಪಶ್ರಮವನ್ನೆಲ್ಲಾ ಪರಿಹರಿಸಿ ಬಿಟ್ಟಿದ್ದಾನೆ ಎಂದು ಸಂತೋಷಿಸುತ್ತಾರೆ.

ಪನಿಕ್ಕಡಲಿಲ್ ಪಳ್ಳಿಕೋಳ್ಳೈ....................

.................. ಉನ್ನ್ಯ ಉರಿತ್ತಾಕ್ಕಿನ್ನೈಯ್ಯೈ ॥    (ಪೆ.ತಿ. ೫-೪-೯)

ಆಳ್ವಾರವರು ಪರಮಾತ್ಮನ ಪರಮ ಸೌಲಭ್ಯವನ್ನು ಕೊಂಡಾಡಿದ್ದಾರೆ. ಸದಾ ತಂಪಾಗಿರುವ ಕ್ಷೀರ ಸಾಗರದಲ್ಲಿ ಶಯನಿಸುವುದನ್ನು ಮರೆತು ಬಿಟ್ಟು ಓಡಿ ಬಂದ ಆಳ್ವಾರವರ ಮನಸ್ಸೆಂಬ ಕಡಲಿನಲ್ಲಿ ನೆಲೆಸಿದ್ದಾರೆ. ಆಶ್ಚರ್ಯಚೇಷ್ಟಿತನಾದ, ಕಲ್ಯಾಣ ಗುಣಾಕರನಾದ ಶ್ರೀಯಃಪತಿ ಅವನಿಗೆ ಅದ್ವಿತೀಯವಾದ ಕ್ಷೀರಸಾಗರ,ಆದಿತ್ಯ ಮಂಡಲ,ಪರಮಪದವೆಲ್ಲಾ ವಾಸಸ್ಥಾನವಾಗಿದ್ದರೂ ತಮ್ಮನ್ನು ಅತ್ಯಂತ ಪ್ರೀತಿಯಿಂದ ಶೇಷಭೂತನಾಗಿ ಮಾಡಿಕೊಂಡಿದ್ದಾನೆಂದು ತಮ್ಮ ಸೌಭಾಗ್ಯವನ್ನು ಕೊಂಡಾಡಿದ್ದಾರೆ.

ತಡವರೈವಾಯ್ ಮಿಳಿನ್ದು ೯ಮಿನ್ನುಮ್..............

.......................... ಇಡವಹೈಕೊಂಡನ್ನೈಯೇ (ಪೆ.ತಿ. ೫-೪-೧೦)

ಆಳ್ವಾರವರು ವೆಂಕಟರಮಣನ ಸಾಕ್ಷಾತ್ಕಾರವನ್ನು ಎಲ್ಲರೊಡನೆ ಹಂಚಿಕೊಂಡು ನಲಿದಿದ್ದಾರೆ.ಆ ಸ್ವಾಮಿ ಅತ್ಯಂತ ಪ್ರಕಾಶಯುಕ್ತವಾದ ನಿರವಧಿಕ ತೇಜಸ್ಸಾಗಿ ಶ್ವೇತ ವರ್ಣದ ಧ್ವಜದಂತೆ ಆಳ್ವಾರವರ ಹೃದಯ ಕಮಲದಲ್ಲಿ ಪ್ರಕಾಶಿಸುವ ಜ್ಯೋತಿಯಾಗಿದ್ದಾನೆ. ಶ್ರೀವೈಕುಂಠ, ದ್ವಾರಕೆ ಮುಂತಾದ ಶ್ರೇಷ್ಠ ಸ್ಥಾನಗಳನ್ನು ಉಪೇಕ್ಷಿಸಿ ಆ ಸ್ಥಳಗಳಿಗೆ ತೋರುವ ಆದರವನ್ನೆಲ್ಲಾ ಆಳ್ವಾರವರ ಬಳಿ ತೋರಿದ್ದಾನೆ ಎಂದು ಸಂಭ್ರಮ ಸಂತೋಷಗಳಿಂದ ತಮಗಾದ ಸಾಕ್ಷಾತ್ಕಾರವನ್ನು ಮೈ ಮರೆತು ಹಾಡಿ ನಲಿದಿದ್ದಾರೆ.

ಕೊನೆಯಲ್ಲಿ  ಆಳ್ವಾರವರು, ವಿಷ್ಣುಚಿತ್ತರ (ಪೆರಿಯಾಳ್ವಾರ್ ಅವರ ಹೆಸರು) ಮನಸ್ಸನ್ನು ಸೂರೆಗೊಂಡು ಅಲ್ಲಿ ನೆಲೆಸಿದ ಸ್ವಾಮಿಯನ್ನು ಪ್ರೀತಿ ಪೂರ್ವಕವಾಗಿ ಸ್ತುತಿಸಿ ಹಾಡಬಲ್ಲವರು ಆ ಸ್ವಾಮಿಗೆ ನೆರಳಿನಂತೆ ಅಂತರಂಗರಾಗುವರೆಂದು ತಿಳಿಸಿದ್ದಾರೆ.

ಹೀಗೆ ಪೆರಿಯಾಳ್ವಾರ್ ಅವರು ಶ್ರೀವೇಂಕಟನಾಯಕನ ದಿವ್ಯಾನುಭವದ ಅಮೃತ ಸಾಗರದಲ್ಲಿ ಮೈಮರೆತು ನಲಿದಿದ್ದಾರೆ.

# ಪೂರಿ ಜಗನ್ನಾಥ ಯಾತ್ರೆಗೆ ಹೋಗೋಣ ಬನ್ನಿ



- ಡಾ।। ಗುರುರಾಜ ಪೋಶೆಟ್ಟಿಹಳ್ಳಿ

ಇಡೀ ಸೃಷ್ಟಿಯ ಜಗತ್ತಿನ ಒಡೆಯನೆನಿಸಿಕೊಂಡವನೇ ಜಗನ್ನಾಥ. ಜಗನ್ನಾಥನು ವಿಷ್ಣುವಿನ ಪುರುಷೋತ್ತಮ ಸ್ವರೂಪ. ಪುರುಷರಲ್ಲಿ ಉತ್ತಮನಾದವನು ಎಂಬುದು ಪದದ ಅರ್ಥ ಎಲ್ಲರಿಗಿಂತ ಉತ್ತಮ ಆದರ್ಶಪ್ರಾಯ ಸ್ವರೂಪ ಎನ್ನಬಹುದು. ಶ್ರೀನಿವಾಸನಂತೆ ಜಗನ್ನಾಥನದು ಏಕಮೂರ್ತಿ ಸ್ವರೂಪ. ಈಗಿನ ಒರಿಸ್ಸಾ ರಾಜ್ಯದ'ಪುರಿ'ಯಲ್ಲಿರುವ 'ಶ್ರೀಮಂದಿರ'ವೊಂದೇ ವಿಷ್ಣುವಿನ ವಿಶೇಷವಾದ ಅಪೂರ್ವವಾದ ದೇವಸ್ಥಾನ.ಆ ಸ್ಥಳವನ್ನು ಜಗನ್ನಾಥಪುರಿ ಅಥವಾ ಪುರುಷೋತ್ತಮ ಧಾಮ ಎಂದು ಕರೆಯುತ್ತಾರೆ. ನೀಲಾಚಲ ಅಥವಾ ನೀಲಪರ್ವತ (ನೀಲಿಯ ಬಣ್ಣದ ಪರ್ವತ) ಎಂದು ಕರೆಯಲ್ಪಡುವ ಬೆಟ್ಟದ ಇಳಿಜಾರಿನಲ್ಲಿ ಪುರಿ ದೇವಸ್ಥಾನವನ್ನು ನಿರ್ಮಿಸಲಾಗಿದೆ. ಒರಿಸ್ಸಾದ ಪೂರ್ವ ಕರಾವಳಿಯಲ್ಲಿ ಪುರಿ ನಗರವಿದೆ. 58 ಅಡಿ ಎತ್ತರದ ಭವ್ಯ ಗೋಪುರವನ್ನು ಹೊಂದಿರುವ ಹೆಗ್ಗಳಿಕೆಗೆ ಈ ದೇವಾಲಯ ಪಾತ್ರವಾಗಿದೆ. ದೇವಸ್ಥಾನದ ಪ್ರಾಕಾರದಲ್ಲಿ ಶಿವ, ದೇವಿ, ಸೂರ್ಯ ಮುಂತಾದ ಪರಿವಾರ ದೇವತೆಗಳಿಗಾಗಿ ಸುಮಾರು 120 ಸಣ್ಣ ಸಣ್ಣ ಗುಡಿಗಳನ್ನು ಕಟ್ಟಲಾಗಿದೆ. ಜಗನ್ನಾಥನ ವಿಗ್ರಹವು ವಿಷ್ಣುವಿನ ಇತರ ಎಲ್ಲ ಸ್ವರೂಪಗಳಿಗಿಂತ ತೀರ ಭಿನ್ನವಾಗಿದೆ.

ವಿಷ್ಣುವಿನ ಅತ್ಯಂತ ಪ್ರಮಾಣಬದ್ಧ ಆಕರ್ಷಕ ಭಂಗಿಯಲ್ಲಿರುವ ಮಾನವ ರೂಪವನ್ನು ಕಾಣಬಹುದು ಅದೆಲ್ಲದಕ್ಕಿಂತ ಭಿನ್ನವಾಗಿ ಜಗನ್ನಾಥನ ರೂಪವನ್ನು ಮರದಲ್ಲಿ ಮಾಡಲಾಗಿದ್ದು, ಅಗಲವಾದ ಮುಖ, ದುಂಡನೇಯ ಎದೆಯ ಭಾಗವನ್ನು ಹೊಂದಿದ್ದು, ಎರಡು ಬಲವಾದ ಕೈಗಳನ್ನು ಹೊಂದಿದೆ ಪುರಿಯಲ್ಲಿನ ಶ್ರೀಮಂದಿರದಲ್ಲಿ ಪೂಜಿಸಲ್ಪಡುವ ಮೂರ್ತಿಯು ಧಾತು ಮೂರ್ತಿಯಾಗಿದ್ದು ಬೇವಿನ ಮರದ ತುಂಡಿನಲ್ಲಿ ಕೆತ್ತಲ್ಪಟ್ಟ ಬೃಹತ್ ವಿಗ್ರಹವಾಗಿದೆ. ಜಗನ್ನಾಥನ ಜೊತೆಯಲ್ಲಿ ಅವನ ಅಣ್ಣ ಬಲಭದ್ರ ಅಥವಾ ಬಲರಾಮ, ಅವನ ಸೋದರಿ ಸುಭದ್ರೆ ಹಾಗೂ ಅವನ ಸುದರ್ಶನ ಚಕ್ರವನ್ನು ಕಾಣಬಹುದು,

ಜಗನ್ನಾಥ,ಬಲಭದ್ರ ಮತ್ತು ಸುಭದ್ರೆಯರ ವಿಗ್ರಹ ಗಳನ್ನು ಬೇವಿನ ಮರದಿಂದ ಮಾಡಲಾಗಿದ್ದು,ಅಗಲವಾದ ಮುಖ, ಉಬ್ಬಿದ ಎದೆಯ ಭಾಗ ಹಾಗೂ ಚಾಚಿಕೊಂಡಿರುವ ಕೈಗಳನ್ನು ಹೊಂದಿದೆ. ಸುದರ್ಶನ ಚಕ್ರವನ್ನು ಸಹ ಬೇವಿನ ಮರದಲ್ಲಿ ಕೆತ್ತಲಾಗಿದ್ದು ಗಟ್ಟಿಯಾದ ಕೋಲು ಅಥವಾ ಕಂಬದ ಆಕಾರದಲ್ಲಿದೆ. ನೀಲ ಚಕ್ರವನ್ನು ಹೋಲುವ ಒಂದು ಚಕ್ರವನ್ನು ಚಿನ್ನದಲ್ಲಿ ತಯಾರಿಸಿ, ಅದನ್ನು ಮರದ ಚಕ್ರದೊಳಗೆ ಜೋಡಿಸಿ ಗೋಪುರದ ಮೇಲೆ ಇಡಲಾಗಿದೆ. ಜಗನ್ನಾಥ ಹಾಗೂ ಬಲಭದ್ರರ ವಿಗ್ರಹಗಳು ಒಂದೇ ಅಳತೆ ಹಾಗೂ ಪ್ರಮಾಣದ್ದಾದರೆ, ಸುಭದ್ರೆಯ ವಿಗ್ರಹವು ಚಿಕ್ಕ ಅಳತೆಯ ಹಾಗೂ ಕಡಿಮೆ ಎತ್ತರದ್ದಾಗಿದೆ. ವಿಗ್ರಹದಲ್ಲಿ ಸ್ವಾಭಾವಿಕವಾದ ಸ್ತ್ರೀ ಸಹಜ ಭಾವನೆಗಳು ವ್ಯಕ್ತವಾಗಿದೆ. ವಿಗ್ರಹಗಳನ್ನು ಕಂಡ ಕೂಡಲೇ ಕ್ಷಣಮಾತ್ರದಲ್ಲಿ ಗಮನ ಸೆಳೆಯುವುದು ಅವುಗಳ ಅಗಲವಾದ ದೊಡ್ಡದಾಗಿ ತೆರೆದ ಕಣ್ಣುಗಳು.ಜಗನ್ನಾಥನ ವಿಗ್ರಹಕ್ಕೆ ಕಪ್ಪು ಬಣ್ಣವನ್ನು, ಬಲಭದ್ರನ ವಿಗ್ರಹಕ್ಕೆ ಬಿಳಿಯ ಬಣ್ಣವನ್ನು ಹಾಗೂ ಸುಭದ್ರೆಯ ವಿಗ್ರಹಕ್ಕೆ ಹಳದಿಯ ಬಣ್ಣವನ್ನು ಹಚ್ಚಲಾಗಿದೆ. ತುಟಿಗಳು ತೆಳ್ಳಗಿದ್ದು ಸದಾಕಾಲ ನಗುತ್ತಿರುವಂತೆ ಅಗಲವಾಗಿದೆ.ಎಲ್ಲ ವಿಗ್ರಹಗಳು ದಪ್ಪಗಿದ್ದು ಬಹಳ ಭಾರ ವಾಗಿದೆ.

ನಾಲ್ಕು ವಿಗ್ರಹಗಳನ್ನು ಗರ್ಭಗುಡಿಯಲ್ಲಿ ಕಲ್ಲಿನ ಪೀಠದ ಮೇಲೆ ಇಡಲಾಗಿದೆ.ಆ ಪೀಠವನ್ನು ರತ್ನವೇದಿ ಅಂದರೆ ರತ್ನಗಳ ಪೀಠವೆಂದು ಕರೆಯುತ್ತಾರೆ. ಜಗನ್ನಾಥನನ್ನು ಹೋಲುವ ಒಂದು ಸಣ್ಣ ವಿಗ್ರಹವನ್ನು ಗರ್ಭಗುಡಿಯಲ್ಲಿ ಪೂಜಿಸಲಾಗು ತ್ತದೆ. ಅದು ಮೊದಲಿನಿಂದಲೂ ಪೂಜಿಸುತ್ತಿದ್ದ ಜಗನ್ನಾಥನ ಮೂಲ ವಿಗ್ರಹವಾಗಿದ್ದು ಅದನ್ನು 'ನೀಲಮಾಧವ' ಎನ್ನುತ್ತಾರೆ. 'ದಾರು ಬ್ರಹ್ಮ ಜಗನ್ನಾಥ'ನ ಎರಡು ಪಕ್ಕಗಳಲ್ಲಿರುವ ಲಕ್ಷ್ಮೀ ಮತ್ತು 'ವಿಶ್ವಧಾತ್ರಿ' ಅಥವಾ ಭೂದೇವಿಯರ ವಿಗ್ರಹಗಳು ಮಾತ್ರ ಲೋಹದ್ದಾಗಿವೆ.

ರಾಜ ಇಂದ್ರದ್ಯುಮ್ನನು ಶ್ರೀಮಂದಿರದ ರತ್ನವೇಧಿಯ ಪೀಠದ ಮೇಲೆ ಪ್ರಾರಂಭದಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯನ್ನೇ ಸಂಪೂರ್ಣವಾಗಿ ಹೋಲುವ ಮರದ ವಿಗ್ರಹಗಳನ್ನು ಮಾಡ ಲಾಗಿರುತ್ತದೆ. ವಿಗ್ರಹಗಳನ್ನು 'ನವಕಲೇವರ' (ಹೊಸ ದೇಹ) ಎಂಬ ಪದ್ಧತಿಯ ಮೂಲಕ ಬದಲಾಯಿಸಲಾಗುತ್ತದೆ.

ನವಕಲೇವರ ಪದವೇ ಸೂಚಿಸುವಂತೆ ಜಗನ್ನಾಥನ ವಿಗ್ರಹದೊಡನೆ ಗುಪ್ತವಾಗಿ ಇರಿಸಲಾಗಿದ್ದು 'ಬ್ರಹ್ಮ ಪದಾರ್ಥ' ಅಂದರೆ ರಹಸ್ಯ ಪದಾರ್ಥವನ್ನು ಹಳೆಯ ವಿಗ್ರಹದಿಂದ ಹೊಸ ವಿಗ್ರಹಕ್ಕೆ ವರ್ಗಾಯಿಸುವ ಕಾರ್ಯವಾಗಿದೆ.ಈ ರೀತಿ ಮರದ ವಿಗ್ರಹವನ್ನು ಬದಲಾಯಿಸುವ ಕಾರ್ಯವನ್ನು ಎರಡು ತಿಂಗಳು ಆಷಾಢ ಮಾಸವಿರುವ ಸಂವತ್ಸರದಲ್ಲಿ ನಡೆಸಲಾಗುತ್ತದೆ. ಇದು ಸಾಮಾನ್ಯವಾಗಿ ಸುಮಾರು ಹನ್ನೆರಡು ವರ್ಷಗಳಿಗೊಮ್ಮೆ ಸಂಭವಿಸುತ್ತದೆ.(ಇದು 8,10 ಅಥವಾ ಕೆಲವೊಮ್ಮೆ 19 ವರ್ಷಗಳಿಗೆ ಒಮ್ಮೆ ಸಂಭವಿಸಬಹುದು). ನೂತನ ವಿಗ್ರಹವು ಸಿದ್ಧವಾದ ಬಳಿಕ ದೇವಸ್ಥಾನದ ಪ್ರಧಾನ ಅರ್ಚಕರು ಬ್ರಹ್ಮ ಪದಾರ್ಥವನ್ನು ಹಳೆಯ ವಿಗ್ರಹದಿಂದ ಹೊಸ ವಿಗ್ರಹಕ್ಕೆ ವರ್ಗಾ ವಣೆ ಮಾಡುವ ಕಾರ್ಯವನ್ನು ನಿರ್ವಹಿಸುತ್ತಾರೆ. ಹಾಗೆ ಮಾಡುವಾಗ ಅವರ ಕಣ್ಣುಗಳನ್ನು ಸಂಪೂರ್ಣವಾಗಿ ಮುಚ್ಚು ವಂತೆ, ಕಟ್ಟಿ, ಕೈ ಕಾಲುಗಳನ್ನು ದಪ್ಪನಾದ ರೇಷ್ಮೆ ಪಟ್ಟಿಯಿಂದ ಸುತ್ತಿ, ಅವರು ಆ ಪದಾರ್ಥವನ್ನು ನೋಡುವುದಕ್ಕಾಗಲೀ, ಸ್ಪರ್ಶಿಸಿ ಅನುಭವಿಸುವುದಕ್ಕಾಗಲಿ ಸಾಧ್ಯವಾಗದಂತೆ ಮಾಡಿರುತ್ತಾರೆ, ನಿಗದಿತ ಶುಭ ದಿನದಂದು ಮಧ್ಯರಾತ್ರಿಯ ಗಾಢಾಂಧಕಾರದ ಸಮಯದಲ್ಲಿ ಬ್ರಹ್ಮ ಪದಾರ್ಥದ ವರ್ಗಾವಣೆಯನ್ನು ಮಾಡಿ ನಂತರ ಹಳೆಯ ವಿಗ್ರಹವನ್ನು ಭೂಮಿಯಲ್ಲಿ ಹೂಳುವ ಮೂಲಕ ವಿಸರ್ಜಿಸಲಾಗುತ್ತದೆ. ಬ್ರಹ್ಮ ಪದಾರ್ಥ ಅಥವಾ ರಹಸ್ಯ ಪದಾರ್ಥವು ಕೃಷ್ಣನ ಲೌಕಿಕ ಶರೀರದ ಹೊಕ್ಕಳು ಅಥವಾ ನಾಭಿಯ ಭಾಗ ಎಂಬ ನಂಬಿಕೆ ಯಿದೆ. ಕೃಷ್ಣಾವತಾರದ ಅಂತ್ಯದಲ್ಲಿ ವಿಷ್ಣು ತನ್ನ ಲೌಕಿಕ ಶರೀರ ವನ್ನು ತ್ಯಜಿಸಿ ಶಾಶ್ವತ ನಿವಾಸಕ್ಕೆ ತೆರಳಿದಾಗ ಅರ್ಜುನನು 'ಜರಾ' ಎಂಬ ಹೆಸರಿನ ಬೇಡನ ನೆರವಿನಿಂದ ದ್ವಾರಕೆಯ ಬಳಿಯಿರುವ ಸಮುದ್ರದ ಹತ್ತಿರ ಆ ದೇಹಕ್ಕೆ ಅಗ್ನಿಸಂಸ್ಕಾರ ಮಾಡುತ್ತದೆ. ಅವರು ಎಷ್ಟು ಕಷ್ಟಪಟ್ಟು ಪ್ರಯತ್ನಿಸಿದರೂ ಸಹ ನಾಭಿಯ ಭಾಗವು ಸುಡುವುದೇ ಇಲ್ಲ. ಕೃಷ್ಣನ ಈ ಕುರುಹೇ (ಭಗ್ನಾವಶೇಷ) ಬ್ರಹ್ಮ ಪದಾರ್ಥ ಎಂಬ ನಂಬಿಕೆಯಿದೆ.

ಇನ್ನೊಂದು ವಿವರಣೆಯು ಕೃಷ್ಣನ ಭೌತಿಕ ಶರೀರದ ದಹನ ಕ್ರಿಯೆಗೆ ಸಂಬಂಧಿಸಿದೆ. ಕೃಷ್ಣನ ದೇಹದ ದಹನ ಕ್ರಿಯೆಯ ನಂತರ ಆ ಬೂದಿಯಿಂದ ಒಂದು ಅರಳಿ ಮರವು ಹುಟ್ಟಿ, ಕಾಲಾಂತರದಲ್ಲಿ ಅದು ಬಿದ್ದು ಸಮುದ್ರವನ್ನು ಸೇರುತ್ತದೆ. ಅದರ ದಿಮ್ಮಿಯೊಂದು ಸಮುದ್ರದಲ್ಲಿ ತೇಲುತ್ತಾ, ಒಡಿಸ್ಸಾ ತೀರವನ್ನು ಸೇರುತ್ತದೆ.ಒಡಿಸ್ಸಾದ ರಾಜನಾದ ಇಂದ್ರದ್ಯುಮ್ನನು ಅದನ್ನು ಕಾಪಾಡಿ, ಅದರಲ್ಲಿ ದೇವರ ಶಿಲ್ಪಿಯಾದ ವಿಶ್ವಕರ್ಮನಿಂದ ಜಗನ್ನಾಥ, ಬಲಭದ್ರ, ಸುಭದ್ರೆ ಮತ್ತು ಸುದರ್ಶನ ಚಕ್ರಗಳನ್ನು ಕೆತ್ತಿಸುತ್ತಾನೆ. ಬ್ರಹ್ಮ ಪದಾರ್ಥವು ಮೂಲ ದಾರುಬ್ರಹ್ಮ ಮೂರ್ತಿಯ ಒಂದು ಭಾಗ ವೆಂಬ ನಂಬಿಕೆಯೂ ಇದೆ. ಇನ್ನು ಕೆಲವರು ಅದನ್ನು ಸಾಲಿ ಗ್ರಾಮ ಶಿಲೆ ಎಂದು ನಂಬಿದ್ದಾರೆ.

ನವಕಲೇವರ ಎನ್ನುವುದು ಅನೇಕ ದಿನಗಳ ಕಾಲ ನಡೆಯುವ ವಿಧಿವತ್ತಾದ ಪದ್ಧತಿಯಾಗಿದೆ. ಮೊದಲಿಗೆ ದೇವಸ್ಥಾನದ ಅರ್ಚಕರು, ಶ್ರೀಮಂದಿರದ ಸಿಬ್ಬಂದಿಗಳು ಹಾಗೂ ಬಡಗಿ ಎಲ್ಲರೂ ಸೂಕ್ತ ಮರಕ್ಕಾಗಿ ಹುಡುಕಾಟ ಪ್ರಾರಂಭಿಸುತ್ತಾರೆ. ಈ ಹುಡುಕಾಟವನ್ನು ಕಕತಾಪುರ ಎಂಬ ಸ್ಥಳದಲ್ಲಿಯೇ ಪ್ರಾರಂಭ ಮಾಡುತ್ತಾರೆ. ಅವರು ಮೊದಲು ಪ್ರಾಚಿನದಿಯಲ್ಲಿ ಸ್ನಾನ ಮಾಡಿ, ಮಂಗಳದೇವಿಯ ಗುಡಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ನಂತರ ಅರ್ಚಕರು ಮಂಗಳಾ ದೇವಿಯ ಮುಂದೆ ಮುಖ ಕೆಳಗೆ ಮಾಡಿ ಮಲಗುತ್ತಾರೆ. ಆಗ ಮಂಗಳಾದೇವಿಯು ಅವರ ಕನಸಿನಲ್ಲಿ ಬಂದು ವಿಗ್ರಹಕ್ಕೆ ಸೂಕ್ತವಾದ ಬೇವಿನ ಮರ ಎಲ್ಲಿರುವುದೆಂಬುದನ್ನು ತಿಳಿಸುತ್ತಾಳೆ. ನಂತರ ಹಾಗೆ ತಿಳಿಸಿದ ದೊಡ್ಡ ಮರವನ್ನು ಪತ್ತೆ ಮಾಡುತ್ತಾರೆ. ಜಗನ್ನಾಥನಿಗಾಗಿ ಆಯ್ಕೆ ಮಾಡಿದ ಮರದಲ್ಲಿ ಪವಿತ್ರವಾದ ಚಕ್ರ ಮತ್ತು ಗದೆಯ ಚಿಹ್ನೆಗಳಿರಬೇಕು. ಹಾಗೆಯೇ ಬಲಭದ್ರನನ್ನು ಮಾಡುವ ಮರದಲ್ಲಿ ನೇಗಿಲು ಅಥವಾ ಸರ್ಪದ ಚಿಹ್ನೆಯೂ, ಸುಭದ್ರೆಗಾಗಿ ಆಯ್ಕೆ ಮಾಡುವ ಮರವು ಹಳದಿ ತೊಗಟೆಯನ್ನು ಹೊಂದಿರಬೇಕು. ಅಷ್ಟೇ ಅಲ್ಲದೆ ಆ ಸುತ್ತಮುತ್ತಲಿನ ಪ್ರದೇಶದಲ್ಲಿ ನಾಗರಹಾವು ವಾಸ ವಾಗಿರಬೇಕೆಂದು ಸಹ ನಿಯಮವಿದೆ.

ಇವಲ್ಲದೆ ಮರದ ಆಯ್ಕೆಯಲ್ಲಿ ಇನ್ನೂ ಹಲವಾರು ಅಂಶಗಳನ್ನು ಪರಿಗಣಿಸಬೇಕಾಗುತ್ತದೆ. ಮರವನ್ನು ಆಯ್ಕೆ ಮಾಡಿದ ಪ್ರದೇಶದಲ್ಲಿ ಹುಣಸೆ ಮರ ಇರಬೇಕು. ಜೊತೆಗೆ ಮರವು ರುದ್ರಭೂಮಿಯ ಹತ್ತಿರದಲ್ಲಿದ್ದು, ಬುಡದಲ್ಲಿ 10 ಅಥವಾ 12 ಅಡಿ ಎತ್ತರದವರೆಗೆ ಗಟ್ಟಿಯಾದ ನೇರ ಕಾಂಡ ವಿದ್ದು, ನಾಲ್ಕರಿಂದ ಏಳು ಶಾಖೆಗಳನ್ನು ಹೊಂದಿರಬೇಕಾ ಗುತ್ತದೆ. ಅಲ್ಲದೆ ಮರದಲ್ಲಿ ಪಕ್ಷಿಗಳ ಗೂಡುಗಳಿರಬಾರದೆಂಬ ನಿಯಮವೂ ಇದೆ. ಜಗನ್ನಾಥನಿಗೆ ಆಯ್ಕೆ ಮಾಡಿದ ಮರದ ಬಣ್ಣವು ಮಂಜಿಷ್ಟ ಅಂದರೆ ದಟ್ಟ ಕೆಂಪು ಬಣ್ಣದ್ದಾಗಿರಬೇಕು. ಬಲಭದ್ರ ವಿಗ್ರಹಕ್ಕೆ ಆಯ್ಕೆ ಮಾಡುವ ಮರವು ಬಿಳಿ ಅಥವಾ ತೆಳು ಕಂದು ಅಥವಾ ಕಪಿಲ ವರ್ಣದ್ದಾಗಿದ್ದು, ಏಳು ಮುಖ್ಯ ಶಾಖೆಗಳನ್ನು ಹೊಂದಿರಬೇಕು. ಸುಭದ್ರೆಯ ವಿಗ್ರಹದ ಮರವು ಹಳದಿ ತೊಗಟೆಯ ಜೊತೆಗೆ ಐದು ದಳದ ಪದ್ಮದ ಚಿಹ್ನೆ ಯಿರಬೇಕು, ಐದು ಮುಖ್ಯ ಶಾಖೆಯಿರಬೇಕು. ದಟ್ಟ ಕೆಂಪು ಬಣ್ಣದಿಂದ ಕೂಡಿದ್ದು, ಚಕ್ರ ಚಿಹ್ನೆ ಹಾಗೂ ಮೂರು ಮುಖ್ಯ ಶಾಖೆಯಿರುವ ಮರವನ್ನು ಸುದರ್ಶನ ವಿಗ್ರಹಕ್ಕೆ ಆಯ್ಕೆ ಮಾಡಲಾಗುತ್ತದೆ. ಮರಗಳ ಆಯ್ಕೆ ಮುಗಿದ ನಂತರ ಆ ಪ್ರದೇಶದಲ್ಲಿ ಯಜ್ಞ ಯಾಗಾದಿಗಳನ್ನು ಮಾಡಿ ಮರಗಳನ್ನು ಕಡಿಯಲು ಶುಭ ಮುಹೂರ್ತವನ್ನು ನಿರ್ಧರಿಸಲಾಗುತ್ತದೆ. ಮರವನ್ನು ಮೊದಲು ಸುವರ್ಣದ ಕೊಡಲಿಯಿಂದಲು, ನಂತರ ಬೆಳ್ಳಿಯ ಕೊಡಲಿಯಿಂದಲೂ ಕಡಿದು ನಂತರ ಕಬ್ಬಿಣದ ಕೊಡಲಿಯಿಂದ ಆ ಕಾರ್ಯವನ್ನು ಪೂರ್ಣಗೊಳಿಸ ಲಾಗುತ್ತದೆ. ಮರದ ಶಾಖೆಗಳನ್ನು ಉಪಯೋಗಿಸಿ, ನಾಲ್ಕು ಚಕ್ರದ ಒಂದು ಗಾಡಿಯನ್ನು ತಯಾರಿಸಿ ಅದರಲ್ಲಿ ಸಂಗ್ರ ಹಿಸಿದ ಮರದ ದಿಮ್ಮಿಗಳನ್ನು ಶ್ರೀಮಂದಿರಕ್ಕೆ ಸಾಗಿಸ ಲಾಗುತ್ತದೆ. ಆಯ್ಕೆ ಮಾಡಿದ ನಿರ್ದಿಷ್ಟ ಬಡಗಿಗಳು ವಿಗ್ರಹಗಳನ್ನು ಕಡೆಯುವ ಕೆಲಸವನ್ನು ಮಾಡುತ್ತಾರೆ. ಸಾಲ ಮರದ 'ನಿರ್ಯಾಸ' ವೆಂದರೆ ಮರದ ಅಂಟನ್ನು ಪದರ ಪದರವಾಗಿ ವಿಗ್ರಹಕ್ಕೆ ಬಳಿಯುತ್ತಾರೆ. ಚಂದನ ಅಥವಾ ಶ್ರೀಗಂಧ, ಕರ್ಪೂರ, ಕಸ್ತೂರಿ ಮುಂತಾದವುಗಳಿಂದ ತಯಾರಿಸಿದ ಮಿಶ್ರಣವನ್ನು ವಿಗ್ರಹವನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಸುತ್ತಲೂ ಸವರಲಾಗುತ್ತದೆ. ವಿಗ್ರಹಕ್ಕೆ ಪ್ರಕಾಶಮಾನವಾದ ಬಣ್ಣವನ್ನು ಹಚ್ಚಿ, ವಿಗ್ರಹದ ಮುಖವನ್ನು ಬಿಟ್ಟು ಉಳಿದ ಭಾಗವನ್ನು ನೇತ್ರಿಪಥ ಎಂಬ ಕೆಂಪು ರೇಷ್ಮೆ ವಸ್ತ್ರದಿಂದ ಸುತ್ತ ಲಾಗುತ್ತದೆ. ಬಲಭದ್ರ ಮತ್ತು ಸುಭದ್ರೆಯರ ತಲೆಯು ವೃತ್ತಾಕಾರವಾಗಿದ್ದು, ಜಗನ್ನಾಥನ ತಲೆಯು ಚಪ್ಪಟೆಯಾಗಿ ರುತ್ತದೆ. ಜಗನ್ನಾಥ, ಬಲಭದ್ರ ಮತ್ತು ಸುದರ್ಶನ ಮೂರು ವಿಗ್ರಹಗಳು 84 ಯವಗಳಷ್ಟು ಅಂದರೆ ಸಮನಾದ ಎತ್ತರ ದ್ದಾಗಿರುತ್ತದೆ. ಒಂದು ಯವ ಎಂದರೆ ಸಾಮಾನ್ಯ ಮಾನವನ ಕೈಗಳಲ್ಲಿರುವ ಮಧ್ಯ ಬೆರಳಿನ ಉದ್ದ ಅಳತೆ. ಸುಭದ್ರೆಯ ವಿಗ್ರಹವು 52 ಯವದಷ್ಟು ಎತ್ತರವಾಗಿರುತ್ತದೆ. ಜಗನ್ನಾಥ ಮತ್ತು ಬಲಭದ್ರರ ವಿಗ್ರಹದಲ್ಲಿರುವಂತೆ ಸುಭದ್ರೆಯ ವಿಗ್ರಹಕ್ಕೆ ಕೈಗಳು ಇರುವುದಿಲ್ಲ. ಜಗನ್ನಾಥನ ಎತ್ತರ ಹಾಗೂ ಕೈಗಳ ಉದ್ದ ಸಮಾನವಾಗಿರುವುದರಿಂದ ಎರಡೂ ಸೇರಿ ಒಟ್ಟಾಗಿ ವಿಗ್ರಹವು ದುಂಡನೆಯ ಆಕಾರವನ್ನು ಕೊಡುತ್ತದೆ. ಆದ್ದ ರಿಂದಲೇ ಜಗನ್ನಾಥನು ಚಕ್ರಾಕೃತಿಯಲ್ಲಿದ್ದಾನೆ ಎಂದು ಹೇಳು ತ್ತಾರೆ. ಬಲಭದ್ರನ ಕೈಗಳ ಉದ್ದವು ವಿಗ್ರಹದ ಎತ್ತರಕ್ಕಿಂತ ಹೆಚ್ಚಾಗಿರುವುದರಿಂದ ವಿಗ್ರಹವು ಶಂಖದ ಆಕಾರಕ್ಕೆ ಸಮೀಪ ವಾಗಿದ್ದು, ಶಂಖಾಕೃತಿಯಲ್ಲಿದೆ ಎಂದು ಹೇಳುತ್ತಾರೆ. ಸುಭದ್ರೆಯು ಕಮಲದ ತೊಟ್ಟಿನ ಆಕಾರದಲ್ಲಿರುವುದರಿಂದ ಅದನ್ನು ಪದ್ಮಾಕೃತಿ ಎನ್ನುತ್ತಾರೆ.

ಜಗನ್ನಾಥನನ್ನು 'ನೀಲಮಾಧಭ' ಎಂದು ಪೂಜಿಸು ತ್ತಾರೆ. ನೀಲಮಾಧಭ ಎಂಬುದು ನೀಲವರ್ಣದ ಕೃಷ್ಣ, ಎನ್ನು ವುದರ ಅಪಭ್ರಂಶ ಎನ್ನಬಹುದು. ಅತ್ಯಂತ ಕುತೂಹಲಕರ ಹಾಗೂ ಆಶ್ಚರ್ಯಕರ ಸಂಗತಿಯೆಂದರೆ, ಮೊಟ್ಟಮೊದಲು ಸ್ಥಾಪಿಸಲಾದ ಜಗನ್ನಾಥನನ್ನು ನೀಲಮಾಧಭ ಎಂದು ಹೆಸರಿ ಸಲಾಗಿದೆ, ಯಾವ ಪರ್ವತದ ಇಳಿಜಾರಿನಲ್ಲಿ ಶ್ರೀಮಂದಿರ

ವನ್ನು ನಿರ್ಮಿಸಲಾಗಿದೆಯೋ ಅದನ್ನು ನೀಲ ಪರ್ವತ ಅಥವಾ ನೀಲಾಚಲ ಎಂದು, ಹಾಗೂ ಗರ್ಭಗುಡಿಯ ಗೋಪುರದ ಮೇಲೆ ಇರಿಸಲಾಗಿರುವ ಮತ್ತು ಮರದಲ್ಲಿ ಮಾಡಲಾಗಿರುವ ಸುದರ್ಶನ,ಎರಡನ್ನೂ ನೀಲಚಕ್ರಗಳು ಎಂದು ಕರೆಯಲಾಗಿದೆ.

ಈ ದೇವಾಲಯದ ಸ್ಥಾಪನೆಗೂ ಮೊದಲು ನೀಲ ಮಾಧವನನ್ನು ಬುಡಕಟ್ಟು ಜನಾಂಗದ ಮುಖಂಡನಾದ ವಿಶ್ವವಸು ಎಂಬುವವನು ದಟ್ಟವಾದ ಘೋರ ಅರಣ್ಯದೊಳಗೆ ಯಾರಿಗೂ ತಿಳಿಯದ ಒಂದು ಸ್ಥಳದಲ್ಲಿ ಪೂಜಿಸುತ್ತಿದ್ದನು. ಆ ಪ್ರದೇಶವನ್ನು ಆಳುತ್ತಿದ್ದ ಇಂದ್ರದ್ಯುಮ್ನನೆಂಬ ಮಹಾರಾಜನು, ಅವನ ಇಷ್ಟದೈವವಾದ ವಿಷ್ಣುವನ್ನು ಈಥಪ್ರದೇಶ (ಒರಿಸ್ಸಾ) ಬುಡಕಟ್ಟಿನ ಮುಖಂಡನೊಬ್ಬನು ನೀಲಮಾಧವ ಎಂಬ ಹೆಸರಿನಿಂದ ಪೂಜಿಸುತ್ತಿರುವುದನ್ನು ತಿಳಿದು, ನೀಲ ಮಾಧವನನ್ನು ಕಂಡು ಹಿಡಿಯಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗುವುದಿಲ್ಲ. ಆ ಬ್ರಾಹ್ಮಣನು ವಿಶ್ವವಸುವಿನ ವಿಶ್ವಾಸವನ್ನು ಗಳಿಸಲು ಯೋಚಿಸಿ, ಆ ಪ್ರಯತ್ನದಲ್ಲಿರುವಾಗ ಲಲಿತ ಎಂಬ ಹೆಸರಿನ ಅವನ ಮಗಳನ್ನು ಮದುವೆಯಾಗುತ್ತಾನೆ. ನಂತರ ವಿಶ್ವವಸು ನೀಲಮಾಧವನನ್ನು ನೋಡಬೇಕೆಂದು ಅಪೇಕ್ಷಿಸಿದ ತನ್ನ ಅಳಿಯನ ಆಸೆಯನ್ನು ಅಲ್ಲಗಳೆಯಲಾರದೆ, ನೀಲಮಾಧವನನ್ನು ತೋರಿಸಲು ಒಪ್ಪಿಕೊಳ್ಳುತ್ತಾನೆ. ಅವನು ವಿದ್ಯಾಪತಿಯ ಕಣ್ಣುಗಳನ್ನು ಕಟ್ಟಿ ದಟ್ಟ ಅರಣ್ಯದ ಒಳಗಿರುವ ಗುಹೆಯೊಳಗೆ ಕರೆದೊಯ್ಯುತ್ತಾನೆ. ವಿದ್ಯಾಪತಿಯು ಹೋಗುವಾಗ ದಾರಿ ಯುದ್ದಕ್ಕೂ ಸಾಸಿವೆ ಕಾಳುಗಳನ್ನು ಚೆಲ್ಲುತ್ತಾ ಹೋಗುತ್ತಾನೆ. ಅವನು ದೇವರ ದರ್ಶನವನ್ನು ಪಡೆದು ಅರಮನೆಗೆ ಹಿಂತಿರುಗಿ ಇಂದ್ರದ್ಯುಮ್ನ ಮಹಾರಾಜನಿಗೆ ತಾನು ಕಂಡದುದನ್ನು ತಿಳಿಸುತ್ತಾನೆ. ಇಂದ್ರದ್ಯುಮ್ನ ರಾಜ ಮತ್ತು ವಿದ್ಯಾಪತಿ ಕಾಡಿಗೆ ಬರುವ ವೇಳೆಗೆ ಸಾಸಿವೆ ಕಾಳುಗಳು ಮೊಳೆತು ಗುರುತಿಸಲು ಸಾಧ್ಯವಾಗುದ ಸಸಿಗಳಾಗಿ ಬೆಳೆದಿರುತ್ತವೆ. ಅವರು ಆ ಸಸಿಗಳನ್ನು ಅನುಸರಿಸುತ್ತಾ ಹೋಗಿ ಗುಹೆಯನ್ನು ತಲುಪುತ್ತಾರೆ. ಆದರೆ ಗುಹೆಯಲ್ಲಿ ನೀಲ ಮಾಧವನಿರುವುದಿಲ್ಲ. ಇದರಿಂದ ನೊಂದ ಇಂದ್ರದ್ಯುಮ್ನನು ವಿಷ್ಣುವಿನ ಪರಮ ಭಕ್ತನಾದುದರಿಂದ ತಪಸ್ಸಿಗೆ ತೊಡಗು ತ್ತಾನೆ.ಆಗ ಅವನಿಗೆ ಪುರುಷೋತ್ತ ಜಗನ್ನಾಥನ ದರ್ಶನವಾಗುತ್ತದೆ. ಭಗವಂತನು ರಾಜನಿಗೆ ಸಮುದ್ರದಲ್ಲಿ ತೇಲಿ ಬರುವ ಮರದ ತುಂಡನ್ನು ಸಂಗ್ರಹಿಸುವಂತೆ ಆದೇಶಿಸುತ್ತಾನೆ. ನೀಲಮಾಧವನನ್ನು ಕಾಣದೆ ದುಃಖಿಸುತ್ತಿದ್ದ ರಾಜನನ್ನು ಸಮಾಧಾನಪಡಿಸಿ ಭಗವಂತನು ಅವನ ಮುಂದೆ ಕಾಣಿಸಿ ಕೊಂಡ ರೂಪದ ವಿಗ್ರಹವನ್ನು ಆ ಮರದ ತುಂಡಿನಲ್ಲಿ ಕೆತ್ತಿಸುವಂತೆ ತಿಳಿಸುತ್ತಾನೆ.

ಸಮುದ್ರ ತೀರದಲ್ಲಿ ರಾಜನಿಗೆ ಕೆಂಪು ಬಣ್ಣದ ಸುಗಂಧದಿಂದ ಕೂಡಿದ ಬೃಹತ್ ಮರದ ತುಂಡು ಸಿಗುತ್ತದೆ. ಅದೇ ಸಮಯದಲ್ಲಿ ವಾರ್ಧಕಿ ಎಂಬ ಮರದ ಶಿಲ್ಪಿಯೊಬ್ಬ ಅವನ ಮುಂದೆ ಬಂದು ರಾಜನು ಕಂಡಂತೆಯೇ ಜಗನ್ನಾಥನ ವಿಗ್ರಹವನ್ನು ಕೆತ್ತಿಕೊಡುವುದಾಗಿ ಹೇಳುತ್ತಾನೆ. ಅವನು ಬೇರೆ ಯಾರೂ ಅಲ್ಲದೆ ದೇವಶಿಲ್ಪಿಯಾದ ವಿಶ್ವಕರ್ಮ.ಅವನು ಒಂದು ಕೋಣೆಯೊಳಗೆ ಬಾಗಿಲನ್ನು ಮುಚ್ಚಿಕೊಂಡು ಕೆತ್ತನೆಯ ಕೆಲಸದಲ್ಲಿ ತೊಡಗುತ್ತಾನೆ.ಅವನು ಕೆಲಸ ಮಾಡುತ್ತಿರುವ ಕೊಠಡಿಯೊಳಗೆ ಯಾರು ಬರಬಾರದೆಂದು ನಿರ್ಬಂಧ ಮಾಡಿರುತ್ತಾನೆ. ಅನೇಕ ದಿನಗಳಾದರೂ ಆ ಶಿಲ್ಪಿ ಹೊರಬರುವುದೇ ಇಲ್ಲ. ಇಪ್ಪತ್ತೊಂದು ದಿನಗಳ ನಂತರ ಒಳಗೆ ಕೆಲಸ ಮಾಡುತ್ತಿರುವ ಶಬ್ಧವೂ ಸಂಪೂರ್ಣ ನಿಂತಾಗ, ಇಂದ್ರದ್ಯುಮ್ನನ ರಾಣಿಗೆ ಕುತೂಹಲ ತಡೆಯಲು ಸಾಧ್ಯವಾಗುವುದಿಲ್ಲ. ಅವಳು ಆ ಕೋಣೆಯ ಬಾಗಿಲು ತೆರೆದು ಒಳಗೆ ಪ್ರವೇಶಿಸುತ್ತಾಳೆ.ಆ ವೇಳೆಗೆ ಶಿಲ್ಪಿ ಅಲ್ಲಿರುವುದಿಲ್ಲ. ವಿಗ್ರಹವು ನಾವು ನೋಡುತ್ತಿರುವ ಜಗನ್ನಾಥನ ರೂಪದಲ್ಲಿ ಇರುತ್ತದೆ. ಅಪೂರ್ವ ರೂಪದಲ್ಲಿದ್ದ ಆ ವಿಗ್ರಹವನ್ನು ಅದೇ ಸ್ಥಿತಿಯಲ್ಲಿ ಶ್ರೀಮಂದಿರದ ರತ್ನವೇಧಿ ಪೀಠದ ಮೇಲೆ ಪ್ರತಿಷ್ಠಾಪನೆ ಮಾಡಲಾಗುತ್ತದೆ.

ಇಂದ್ರದ್ಯುಮ್ನನು ಕಂಡಂತಹ ವಿಷ್ಣು ರೂಪವನ್ನು ವರ್ಣ ಚಿತ್ರಗಳಲ್ಲಿ ಕೆಲವು ಗ್ರಂಥಗಳಲ್ಲಿ ಕಾಣಬಹುದು. ಆ ವರ್ಣ ಚಿತ್ರಗಳಲ್ಲಿ ಜಗನ್ನಾಥನು ಸುಂದರವಾದ ಸಿಂಹಾಸನದ ಮೇಲೆ ಆಸೀನನಾಗಿರುತ್ತಾನೆ. ಅವನಿಗೆ ನಾಲ್ಕು ಕೈಗಳಿದ್ದು, ಅವುಗಳಲ್ಲಿ ಶಂಖ,ಚಕ್ರ,ಗದೆ ಹಾಗೂ ಪದ್ಮಗಳನ್ನು ಹಿಡಿದಿರುತ್ತಾನೆ. ಅವನು ಸರ್ಪದಂತೆ ಕಾಣುತ್ತಿದ್ದು, ಸರ್ಪದ ಏಳು ಹೆಡೆಗಳು ಜಗನ್ನಾಥನ ಶಿರದ ಮೇಲೆ ಛತ್ರಿಯಂತೆ ಹರಡಿದೆ. ಸುಭದ್ರೆಯು ಲಕ್ಷ್ಮಿಯೇ ಆಗಿದ್ದು ಜಗನ್ನಾಥನ ಮತ್ತು ಬಲಭದ್ರನ ಮಧ್ಯೆ ಕುಳಿತಿದ್ದಾಳೆ.ಅವಳ ಕೈಗಳ ವರ ನೀಡುವಂತೆ ವರದಮುದ್ರೆಯಲ್ಲಿಯೂ ಹಾಗೂ ಸಂರಕ್ಷಿಸುವಂತೆ ಅಭಯಮುದ್ರೆಯಲ್ಲಿಯೂ ಇರುವಂತೆ ಕಾಣುತ್ತದೆ. ಅವಳು ಪದ್ಮವನ್ನು ಹಿಡಿದಿರುತ್ತಾಳೆ.ಅವಳು ಸರ್ವಚೈತನ್ಯ ರೂಪಿಣಿ ಎಂದರೆ ಎಲ್ಲ ಜೀವಿಗಳ ಜೀವ ಚೈತನ್ಯವನ್ನು ನೀಡುವ ಸ್ತ್ರೀರೂಪದ ಪ್ರತಿಬಿಂಬವಾಗಿದ್ದಾಳೆ. ಸುದರ್ಶನನನ್ನು ಒಂದು ಕಂಬದ ಒಳಗೆ ಕೂಡಿಸಲಾಗಿದೆ.

ಭಾಗವತ ಕಥಾಸಾಗರ

# ಭಕ್ತ ಧ್ರುವ ಚರಿತ್ರೆ

## (ಎರಡನೇ ಭಾಗ)

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್



ಭಕ್ತಧ್ರುವನ ತಪಸ್ಸಿಗೆ ಪ್ರಸನ್ನಗೊಂಡ ಶ್ರೀಹರಿ ಗರುಢಾರೂಢನಾಗಿ ಬಂದು ದರ್ಶನವಿತ್ತಿದ್ದಾನೆ. ದೇವದೇವನ ಮುಖಾಮುಖಿ ದರ್ಶನವಾಗುತ್ತಲೇ ಧ್ರುವನು ಸಂಭ್ರಮಾಶ್ಚರ್ಯಗಳಿಂದ ಎದ್ದು ಸಾಷ್ಟಾಂಗ ನಮಸ್ಕಾರಗಳನ್ನು ಆಚರಿಸಿದ್ದಾನೆ.ಆ ದೇವದೇವನ ಕರುಣೆಯಿಂದ ಸಕಲ ವೇದ ಸಾರಗಳು ಆತನಲ್ಲಿ ಆವಾಹನೆಗೊಂಡು ಧ್ರುವನು ಭಕ್ತಿ ಭಾವಗಳಿಂದ ಸ್ತುತಿಸಿದ್ದಾನೆ.ಇದರಿಂದ ಸಂತುಷ್ಟನಾದ ಶ್ರೀಹರಿ “ಓ ಧ್ರುವಾ! ಕಲ್ಪಾಂತ್ಯದ ಪ್ರಳಯದ ನಂತರ ಕೂಡಾ ಅಚ್ಚಳಿಯದೆ ನಿಲ್ಲುವ ಧ್ರುವಲೋಕವನ್ನೇ ನಿನಗೆ ಕೊಡುತ್ತಿದ್ದೇನೆ. ಸಮಸ್ತ ಸೌರಮಂಡಲ, ಗ್ರಹಗಳು ನಕ್ಷತ್ರಗಳು ಸುತ್ತುವರೆದಿರುವ ಈ ಲೋಕವನ್ನು ಇದುವರೆಗೂ ಯಾರೂ ತಲುಪಿಲ್ಲ. ನಿನ್ನ ತಂದೆ ಅರಣ್ಯಕ್ಕೆ ಹೊರಟ ನಂತರ ನೀನು ನಿರಂತರ ಅವಿಚ್ಛಿನ್ನವಾಗಿ ಈ ಪ್ರಪಂಚವನ್ನು ಮೂವತ್ತಾರು ಸಾವಿರ ವರ್ಷಗಳ ಕಾಲ ಆಳುತ್ತೀಯೆ. ನೀನು ವೃದ್ಧನಾಗುವುದೇ ಇಲ್ಲ. ಈ ರೀತಿಯಾಗಿ ನೀನು ಈ ಜನ್ಮದಲ್ಲಿ ಸಕಲ ಸುಖಗಳನ್ನು ಅನುಭವಿಸಿ ಅಂತ್ಯದಲ್ಲಿ ನನ್ನನ್ನು ಸ್ಮರಿಸುತ್ತೀಯೆ.ಪ್ರಸ್ತುತ ಭೌತಿಕ ಸುಖಗಳನ್ನು ಅನುಭವಿಸಿ ಈ ಜೀವನವನ್ನು ಮುಗಿಸಿದ ನಂತರ ನೀವು ನನ್ನ ಲೋಕವನ್ನು ಸೇರುತ್ತೀಯೆ” ಈ ವಿಧವಾಗಿ ಶ್ರೀಹರಿ ಮುಂದೆ ಘಟಿಸುವುದನ್ನೆಲ್ಲಾ ಮುಂದಾಗೇ ಹೇಳಿ ಧ್ರುವನು ಮಾಡಬೇಕಾದ್ದನ್ನೆಲ್ಲಾ ಬೋಧಿಸಿ ಹಿಂತಿರುಗಿ ತನ್ನ ಧಾಮಕ್ಕೆ ತೆರಳಿದ್ದಾನೆ. ಆ ಬಳಿಕ ಧ್ರುವನು ವೈಭವೋಪೇತವಾದ ತನ್ನ ತಂದೆಯ ಆಶ್ರಯದಲ್ಲಿ ಸುಖದಿಂದಿರುತ್ತಾ ಯುಕ್ತವಯಸ್ಕನಾಗಿದ್ದಾನೆ.

ಧ್ರುವನು ರಾಜ್ಯಭಾರವನ್ನು ವಹಿಸಿಕೊಳ್ಳಲು ತಕ್ಕದಾದ ವಯಸ್ಕನಾಗಿರುವನೆಂದೂ,ಆತನು ರಾಜನಾಗಲು ಮಂತ್ರಿಗಳು ಸಮ್ಮತಿಯನ್ನು ಸೂಚಿಸಿದ್ದಾರೆಂದೂ ಪ್ರಜೆಗಳೂ ಅದನ್ನೇ ಅನುಮೋದಿಸಿದ್ದಾರೆಂದೂ ತಿಳಿದುಕೊಂಡ ಉತ್ತಾನಪಾದನು ಒಂದು ಶುಭ ಮುಹೂರ್ತದಲ್ಲಿ ಆತನನ್ನು ಈ ಭೂ ಮಂಡಲಕ್ಕೇ ಚಕ್ರವರ್ತಿಯನ್ನಾಗಿ ರಾಜಾಭಿಷೇಕ ಮಾಡಿದ್ದಾನೆ. ಬಳಿಕ ತನ್ನ ವೃದ್ಧಾಪ್ಯವನ್ನು ಗಮನಿಸಿದವನಾಗಿ ಆ ರಾಜನು ಆತ್ಮೋದ್ಧಾರಕ್ಕೋಸ್ಕರ ವನಕ್ಕೆ ತೆರಳಿದ್ದಾನೆ. ಈ ವಿಷಯದಲ್ಲಿ ಆತನು ತನ್ನ ಪುತ್ರನಿಂದಲೇ ಪ್ರೇರಿತನಾದವನಾಗಿ ಭಗವದ್ದರ್ಶನಾಭಿಲಾಷಿಯಾಗಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿದ್ದಾನೆ. ತದನಂತರ ಧ್ರುವನು ಶಿಶುಮಾರ ಪ್ರಜಾಪತಿ ಪುತ್ರಿಯಾದ ಭ್ರಮೆಯನ್ನು ವರಿಸಿ ಕಲ್ಪ, ವತ್ಸರ ಎಂಬಿಬ್ಬರ ಪುತ್ರರನ್ನು ಪಡೆದಿದ್ದಾನೆ. ವಾಯುದೇವನ ಮಗಳಾದ ಇಳೆಯನ್ನು ಸಹಾ ವಿವಾಹವಾಗಿ ಉತ್ಕಲನೆಂಬ ಮಗನನ್ನು , ಸೌಂದರ್ಯವತಿಯೆಂಬ ಮಗಳನ್ನು ಪಡೆದಿದ್ದಾನೆ.

ಈ ರೀತಿ ಕಾಲ ಮುಂಸಾಗುತ್ತಿರಲು ಧ್ರುವನ ಸೋದರನಾದ ಉತ್ತಮನು ಹಿಮಾಲಯ ಪ್ರಾಂತ್ಯಕ್ಕೆ ಹೋಗಿ ಅಲ್ಲಿ ಒಬ್ಬ ಯಕ್ಷನಿಂದ ಹತನಾಗಿದ್ದಾನೆ. ಅದನ್ನು ಕೇಳಿ ದುಃಖಿತಳಾದ ಆತನ ತಾಯಿ ಸುರುಚಿ ಅರಣ್ಯದಲ್ಲಿ ಹೋಗಿ ಅಲ್ಲಿ ಸುಳಿಯಲ್ಲಿ ಸಿಕ್ಕು ಮರಣಿಸಿದ್ದಾಳೆ. ತನ್ನ ಸೋದರನು ಯಕ್ಷನ

ಕೈಯಲ್ಲಿ ಹತನಾಗಿದುದನ್ನು ಕೇಳಿದ ಧ್ರುವನಿಗೆ ಕೋಪವುಕ್ಕಿ ಬಂದಿದೆ. ಕೂಡಲೇ ಆತನು ರಥವನ್ನು ಹತ್ತಿ ಅಲಕಾಪುರಿಯ ಮೇಲೆ ದಂಡೆತ್ತಿ ಹೋಗಿದ್ದಾನೆ. ಅಲಕಾಪುರಿ ಸೇರಿದ ಧ್ರುವನು ಭೀಕರವಾದ ಶಂಕನಾದವನ್ನು ಮಾಡಲು ಅದು ಸಮಸ್ತ ದಿಕ್ಕು ಗಳಿಂದಲೂ ಪ್ರತಿಧ್ವನಿಸಿದೆ.ಇದರಿಂದ ಯಕ್ಷ ಪತ್ನಿಯರಿಗೆ ಭಯಭೀತರಾಗಿದ್ದಾರೆ.ಬಲಶಾಲಿಗಳಾದ ಯಕ್ಷ ವೀರರು ಮಾತ್ರ ಆಯುಧಗಳನ್ನು ಹಿಡಿದು ದ್ವಾರಕ್ಕೆ ಬಂದು ಧ್ರುವನೊಂದಿಗೆ ಯುದ್ಧ ಆರಂಭಿಸಿದ್ದಾರೆ. ಅದರಲ್ಲಿ ತಟಾಪ ಯಕ್ಷರು ಸೋಲ ನ್ನಪ್ಪಿದ್ದಾರೆ.ವಾಸ್ತವದಲ್ಲಿ ನಿರಪರಾದಿಗಳಾದ ಯಕ್ಷರು ಹತರಾಗುತ್ತಿರುವುದನ್ನು ಕಂಡ ಸ್ವಾಯಂಭುವ ಮನು ಮಹರ್ಷಿಗಳಿಂದೊಡಗೂಡಿ ಬಂದು ಧ್ರುವನಿಗೆ ಯುದ್ಧವನ್ನು ನಿಲ್ಲಿಸಬೇಕೆಂದು ಹಿತೋಪದೇಶ ಮಾಡಿದ್ದಾರೆ.

ಸ್ವಾಯಂಭು ಮನು ಈ ರೀತಿ ಧ್ರುವನಿಗೆ ಉಪದೇಶ ಮಾಡಿ ಆತನಿಂದ ನಮಸ್ಕಾರಗಳನ್ನು ಸ್ವೀಕರಿಸಿ ಮಹರ್ಷಿ ಸಮೇತನಾಗಿ ಹೊರಟು ಹೋಗಿದ್ದಾನೆ.ಧ್ರುವನು ಯಕ್ಷ ಸಂಹಾರವನ್ನು ನಿಲ್ಲಿಸಿದ ವಿಷಯವನ್ನು ಕೇಳಿದ ಕುಬೇರನು ಆತನ ಮುಂದೆ ಬಂದು ಪ್ರತ್ಯಕ್ಷಗೊಂಡು ಇಷ್ಟವಾದ ಕೋರಿಕೆ ಯನ್ನು ಕೋರಿಕೊಳ್ಳಬೇಕೆಂದು ಆರುಹಿದ್ದಾನೆ.

ಕುಬೇರನು ಪ್ರಸನ್ನನಾದ ವಿಷಯವನ್ನು ತಿಳಿದು ಕೊಂಡ ಧ್ರುವನು ಸಂತೋಷಗೊಂಡು, ಭಗವಂತನಲ್ಲಿ ಅಚಂಚಲವಾದ ವಿಶ್ವಾಸವನ್ನು ಸ್ಥಿರವಾದ ಸ್ಮರಣೆಯನ್ನು ತನಗೆ ಪ್ರಾಸಾದಿಸಬೇಕೆಂದು ಕುಬೇರನಲ್ಲಿ ಕೇಳಿಕೊಂಡಿ ದ್ದಾನೆ.ದುಸ್ತರವಾದ ಭವಸಾಗರವನ್ನು ದಾಟಲು ಇದೇ ಸುಲಭವಾದ ಮಾರ್ಗ. ಕುಬೇರನು ದೇವತೆಗಳ ಕೋಶಾಧಿ ಪತಿ ಸಮಸ್ತ ಸಂಪತ್ತುಗಳು ಆತನ ಆಧೀನದಲ್ಲಿರುತ್ತವೆ. ಎಂತಹ ಸಂಪತ್ತನ್ನಾದರೂ ಆತನು ವರವಾಗಿ ಕೊಡಬಲ್ಲ ಸಮರ್ಥನು. ಆದರೂ ಧ್ರುವನು ಆತನಿಂದ ಭಗದ್ಭುಕ್ತಿಯನ್ನೇ ಕೋರಿದ್ದಾನೆ ವಿನಃ ಐಹಿಕ ಸುಖಭೋಗಗಳನ್ನಲ್ಲ. ಧ್ರುವನ ಕೋರಿಕೆಯನ್ನು ತೀರಿಸಿದ ಕುಬೇರನು ಅನುಗ್ರಹಿಸಿ ಅಂತ ರ್ಧಾನನಾಗಿದ್ದಾನೆ.ಬಳಿಕ ಧ್ರುವನು ತನ್ನ ನಗರಿಗೆ ಹಿಂತಿರು ಗಿದ್ದಾನೆ. ಕುಬೇರನೊಬ್ಬ ದೇವತೆ. ಧ್ರುವನು ದೇವತೆಗಳಿಂದ ವರ ಪಡೆಯಬೇಕಾದ ಅಗತ್ಯವಾದರೂ ಏನಿತ್ತು. ಎಂಬ ಪ್ರಶ್ನೆ ಯಾರನ್ನಾದರೂ ಕಾಡಬಹುದು. ಕೃಷ್ಣಭಕ್ತಿಯಲ್ಲಿ ಪುರೋಗತಿ ಯನ್ನು ಹೊಂದಿದ ವೈಷ್ಣವನಿಗೆ ಯಾವುದೇ ದೇವತೆಯಿಂದ ವರವನ್ನು ಪಡೆಯುವುದು ಅಕ್ಷೇಪಣೆಗೆ ಎಡೆ ಮಾಡಿಕೊಡ ದೆಂದು ಈ ಪ್ರಶ್ನೆಗೆ ಉತ್ತರವನ್ನೀಯಬಹುದು.ಶ್ರೀ ಕೃಷ್ಣನನ್ನು ಪತಿಯನ್ನಾಗಿ ಪಡೆಯಲು ಗೋಪಿಕಾ ಸ್ತ್ರೀಯರು ಕಾತ್ಯಾಯಿನಿ ವ್ರತವನ್ನು ಮಾಡಿದರೆಂಬ ವಿಷಯ ನಮಗೆ ಭಾಗವತದಿಂದ ತಿಳಿದು ಬರುತ್ತದೆ. ಆಧ್ಯಾತ್ಮಿಕ ಲೋಕಕ್ಕೆ ಸೇರಿಸೆಂದು ಧ್ರುವನು ಕೋರಲಿಲ್ಲ.ತಾನೆಲ್ಲಿದ್ದರೂ ಸದಾ ತನಗೆ ಭಗತ್ಸ್ಮರಣೆ ವುಂಟಾಗಲೆಂದು ಆತನು ಬೇಡಿದ್ದಾನೆ. ಕುಬೇರನು ಅದನ್ನು ತಥಾಸ್ತೆನ್ನಲು ಧ್ರುವನು ಅದನ್ನು ಸ್ವೀಕರಿಸಿದ್ದಾನೆ.

ಮರಳಿ ತನ್ನ ರಾಜ್ಯಕ್ಕೆ ಬಂದ ಧ್ರುವನು ಯಜ್ಞ ಭೋಕ್ತ ನಾದ ಭಗವಂತನ ಪ್ರೀತ್ಯರ್ಥವಾಗಿ ಅದೆಷ್ಟೋ ಯಜ್ಞಗಳನ್ನು ಮಾಡಿದ್ದಾನೆ.ತನ್ನ ಭಕ್ತಿಯುತವಾದ ಸೇವೆಯನ್ನು ಸಹಾ ಮತ್ತಷ್ಟೂ ಹೆಚ್ಚಿಸಿದ್ದಾನೆ.ದೈವಗುಣ ಸಂಪನ್ನನಾಗಿ, ಭಗವದ್ಭ ಕ್ತದೆಡೆಗೆ ಪರಮಾದರವುಳ್ಳವನಾಗಿ ಆತನು ಪ್ರಜೆಗಳನ್ನು ಹೆತ್ತ ಮಕ್ಕಳಂತೆ ನೋಡಿಕೊಂಡಿದ್ದಾನೆ. ಈ ರೀತಿ ಆತನು ಇಡೀ ಭೂಮಂಡಲವನ್ನು ಮುವತ್ತಾರು ಸಾವಿರ ವರ್ಷಗಳ ಕಾಲ ಆಳಿದ್ದಾನೆ.ಪುಣ್ಯಫಲದ ಭೋಗಾನುಭವದ ಮೂಲಕ, ಪಾಪ ವನ್ನು ತಪಸ್ಸಿನ ದ್ವಾರ ಕ್ಷೀಣಿಸಿಕೊಂಡು ಆತನು ಕಡೆಗೆ ರಾಜ್ಯ ಸಿಂಹಾಸನವನ್ನು ತನ್ನ ಮಗನಿಗೆ ಒಪ್ಪಿಸಿದ್ದಾನೆ. ಈ ಭೌತಿಕ ಜಗತ್ತು ಮಾಯಾನಗರಿಯೆಂದೂ ಅದು ಜೀವಿ ಗಳನ್ನು ಮೋಹಿಸಬಲ್ಲ ಗಂಧರ್ವನಗರಿಯೆಂದು ಆತನಿಗೆ ಅರ್ಥವಾಗಿದೆ. ಮಡದಿ, ಮಕ್ಕಳು, ಬಂಧುಗಳು, ಸೈನ್ಯ, ಸಂಪ ದ್ಭರಿತವಾದ ಕೋಶವು, ಅಂತಃಪುರವು ಎಲ್ಲವೂ ಸಹಾ ಮಾಯಾಜನಿತವೆಂದು ತಿಳಿದುಕೊಂಡ ಧ್ರುವನು ಇವೆಲ್ಲ ವನ್ನು ತ್ಯಜಿಸಿ ಹಿಮಾಲಯದಲ್ಲಿರುವ ಬದರಿಕಾಶ್ರಮಕ್ಕೆ ಹೊರಟು ಹೋಗಿದ್ದಾನೆ. ಅಲ್ಲಿಯ ನಿರ್ಮಲ ಜಲಗಳಲ್ಲಿ ಸ್ನಾನ ಮಾಡುತ್ತಲೇ ಆತನ ಇಂದ್ರಿಯಗಳು ಪವಿತ್ರಗೊಂಡಿವೆ.

ಜಿತಾಸನನಾಗಿ ಆತನು ಪ್ರಾಣೇಂದ್ರಿಯಗಳನ್ನು ನಿರೋಧಿಸಿ ಮನಸ್ಸನ್ನು ಪೂರ್ತಿಯಾಗಿ ಭಗವಂತನ ಶ್ರೀ ಪ್ರತಿಮೆಯಲ್ಲಿ ಕೇಂದ್ರೀಕರಿಸಿದ್ದಾನೆ. ಈ ವಿಧವಾಗಿ ಆತನು ಧ್ಯಾನಮಗ್ನನಾಗಿದ್ದಾನೆ.ಆನಂದ ಪಾರವಶ್ಯತೆಯಿಂದ ಆತನಿಗೆ ರೋಮಾಂಚನವಾಗಿದೆ.ಆನಂದ ಬಾಷ್ಪಗಳು ದುರಿವೆ. ಆತನು ಮುಕ್ತ ಸಾಂಗತ್ಯನಾಗಿದ್ದಾನೆ. ಕೂಡಲೇ ಹತ್ತೂ ದಿಕ್ಕುಗಳನ್ನು ಪ್ರಕಾಶಮಾನವನ್ನಾಗಿಸುವ ಒಂದು ದಿವ್ಯವಾಹನ ಆಕಾಶದಿಂದ ಕೆಳಗೆ ಬಂದು ಆ ವಾಹನದಲ್ಲಿ ಇಬ್ಬರು ಭಗವತ್ಪಾದಾರ್ಷಿಗಳು ಇಳಿದಿದ್ದಾರೆ. ಚತುರ್ಭುಜ ಗಳಿಂದ, ಶ್ಯಾಮಲವರ್ಣದಿಂದ,ದಿವ್ಯಾಭರಣಭೂಷಿತರಾದ ಅವರೀರ್ವರು ಭಗವತ್ಕಿಂಕರರೆಂದು ತಿಳಿದುಕೊಂಡ ಧ್ರುವನು ಅವರಿಗೆ ನಮಸ್ಕಾರ ಮಾಡಿದ್ದಾನೆ. ಆಗ ಧ್ರುವನು

ಕೃಷ್ಣಗತ ಚಿತ್ತನಾಗಿದ್ದಾನೆಂಬ ವಿಷಯವು"ತಂ ಕೃಷ್ಣ ಪಾದಾಭಿನಿವಿಷ್ಟ ಚೇತಸಂ"ಎಂಬ ಭಾಗವತ ಪದ್ಯ ಪಾದ ವನ್ನು ನಮಗೆ ತೋರಿಸುತ್ತದೆ.

ಭಗವದಾರ್ಷಿಗಳಾದ ನಂದ- ಸುನಂದರು ಧ್ರುವ ನನ್ನು ಹಾಡಿ ಹೊಗಳಿ ಭಗವದ್ಧಾಮಕ್ಕೆ ಹೊರಡಲು ಸನ್ನದ್ಧ ನಾಗಲು ತಿಳಿಸಿದ್ದಾರೆ.ಉತ್ತಮಶ್ಲೋಕನಾದ ಭಗವಂತ ತಾನೇ ಸ್ವತಃ ಈ ವಾಹನವನ್ನು ಕಳಿಸಿದ್ದಾನೆಂದು ಈ ವಾಹನವನ್ನೇರಲು ಧ್ರುವನು ಅರ್ಹನೆಂದೂ ಅವರು ಅರುಹಿ ದ್ದಾರೆ.ಅವರ ಮಾತುಗಳನ್ನು ಕೇಳಿ ಧ್ರುವನು ಸ್ನಾನವನ್ನು ಮಾಡಿ,ಯುಕ್ತವಾದ ಆಭೂಷಣಗಳನ್ನು ಧರಿಸಿ,ನಿತ್ಯಾ ರಾಧನೆಗಳನ್ನು ಪೂರ್ಣಗೊಳಿಸಿ ಮಹರ್ಷಿಗಳಿಗೆ ವಂದಿಸಿ ವಿಮಾನವನ್ನೇರಲು ಸನ್ನದ್ಧನಾಗಿದ್ದಾನೆ. ಇಷ್ಟರಲ್ಲಿ ಮೂರ್ತೀ ಭವಿಸಿದ ಮೃತ್ಯುವು ತನ್ನೆಡೆಗೆ ಬರುತ್ತಿರುವುದು ಧ್ರುವನಿಗೆ ಕಂಡಿದೆ. ಆದರೆ ಆತನು ಆದರೆ ಇರುವನ್ನು ಆಲಕ್ಷಿಸಿ ಅದರ ತಲೆಯ ಮೇಲೆ ತನ್ನ ಪಾದಗಳನ್ನಿಟ್ಟು ವಿಮಾನವನ್ನೇರಿದ್ದಾನೆ. ವಿಮಾನವನ್ನೇರಿದ ಧ್ರುವನಿಗೆ ಹೊರಡಲನುವಾದ ವಿಮಾನ ದಲ್ಲಿ ಕೂರುತ್ತಲೇ ತನ್ನ ತಾಯಿ ಯಾದ ಸುನೀತಿಯ ನೆನಪು ಬಂದಿದೆ. "ಆಕೆಯನ್ನು ಬಿಟ್ಟು ನಾನೊಬ್ಬನೇ ವೈಕುಂಠಕ್ಕೆ ಹೊರಡುವುದಾದರೂ ಹೇಗೆ?" ಎಂದು ಆಲೋಚಿಸಿದ್ದಾನೆ. ಆತನ ಮನದಾಳವನ್ನರಿತ ನಂದಸುನಂದರು ಆತನ ತಾಯಿ ಈಗಾಗಲೇ ಬೇರೊಂದು ವಿಮಾನವನ್ನೇರಿ ಹೊರಟಿ ರುವುದನ್ನು ತೋರಿಸಿದ್ದಾರೆ. ಇದರಿಂದ ಸಂತೃಪ್ತನಾದ ಧ್ರುವನು ನಿಶ್ಚಿಂತನಾಗಿ ಭಗವ ದ್ಧಾಮಕ್ಕೆ ತನ್ನ ಪ್ರಯಾಣವನ್ನು ಬೆಳಸಿದ್ದಾನೆ. ಭಗವದ್ಧಾಮಕ್ಕೆ ಆಗಮಿಸುತ್ತಲೇ ಆತನಿಗೆ ಸೌರ ಮಂಡಲವೂ ಸಮಸ್ತ ಗ್ರಹಗಳೂ ಕಂಡಿವೆ, ದೇವತೆ ಗಳೆಲ್ಲರೂ ತನ್ನ ಮೇಲೆ ಪುಷ್ಪ ವೃಷ್ಟಿಯನ್ನು ಸುರಿಸುತ್ತಿರು ವುದು ಕಂಡು ಬಂದಿದೆ.ಈ ರೀತಿಯಾಗಿ ಧ್ರುವನು ಸಪ್ತರ್ಷಿ ಮಂಡಲವೆಂದು ಕರೆಯಲ್ಪಡುವ ಋಷಿಗಳ ಏಳು ಲೋಕ ಗಳನ್ನು ಕೂಡಾ ದಾಟಿ ವಿಷ್ಣುವು ನೆಲೆಸಿರುವ ಲೋಕದಲ್ಲಿ ದಿವ್ಯ ಸ್ಥಿತಿಯನ್ನು ಹೊಂದಿದ್ದಾನೆ. ಧ್ರುವನು ಕೃಷ್ಣಭಕ್ತ ಪರಾಯಣನೆಂದು ಭಾಗವತ ಶ್ಲೋಕಗಳಲ್ಲಿ "ಇತ್ಯುತ್ತಾನ ಪದಃ ಪುತ್ರೋ ಧ್ರುವಃ ಕೃಷ್ಣಪರಾ ಯಣಃ"ಎಂದು ಹೇಳಿದೇ ಈ ರೀತಿಯಾಗಿ ಆತನು ಮೂರು ಲೋಕಗಳಲ್ಲಿ ಚಿಂತಾ ಮಣಿಯೆಂಬ ಸ್ಥಾನವನ್ನು ಹೊಂದಿದ್ದಾನೆ. ಎತ್ತುಗಳು ಅತ್ತಿ ಮರದ ಬಲಕ್ಕೆ ಪ್ರದಕ್ಷಿಣೆ ಹಾಕುವಂತೆ ವಿಶ್ವಾಕಾಶಿ.ಸಕಲ ಲೋಕಗಳು ಪ್ರಚಂಡ ವೇಗದಿಂದ ಧ್ರುವ ಲೋಕವನ್ನು ಸುತ್ತು ತ್ತಿರುತ್ತವೆ.

ಈ ಧ್ರುವ ಮಹಿಮೆಯನ್ನು ದೇವರ್ಷಿ ನಾರದರು ವೀಣೆ ಯನ್ನು ಮೀಟುತ್ತಾ ಪ್ರಚೇತರ ಯಜ್ಞ ಸ್ಥಳದಲ್ಲಿ ಹಾಡಿದ್ದಾರೆ. ಮಹ ವಾನ್ವಿತವಾದ ಧ್ರುವ ಚರಿತ್ರೆಯನ್ನು ಕೇಳಲು, ಸಾಧುಗಳು,ಭಕ್ತರು ಅತ್ಯಂತ ಇಷ್ಟಪಟ್ಟಿದ್ದಾರೆ. ಇದರ ಶ್ರವಣದಿಂದ ಮನುಷ್ಯನಿಗೆ ಯಶಸ್ಸು, ಸಂಪತ್ತು ದೀರ್ಘಾಯುಷ್ಯಕ್ಕೆ ಸಂಬಂಧಿಸಿದ ಎಲ್ಲಾ ಕೋರಿಕೆಗಳು ತೀರುತ್ತವೆ.ಮಂಗಳ ಪ್ರದವಾದ ಈ ಚರಿತ್ರೆಯ ಶ್ರವಣ ಮಾತ್ರದಿಂದಲೇ ಸ್ವರ್ಗಪ್ರಾಪ್ತಿ ಯುಂಟಾಗುತ್ತದೆ. ಇದ ರಿಂದ ದೇವತೆಗಳು ಸಹ ಪ್ರಸನ್ನರಾಗುತ್ತಾರೆ. ಶಕ್ತಿಯುತವಾದ ಈ ಕಥಾಶ್ರವಣ ಸಮಸ್ತ ಪಾಪಗಳನ್ನು ನಾಶಗೊಳಿಸುತ್ತದೆ. ಧ್ರುವ ಚರಿತ್ರೆಯನ್ನು ಕೇಳುವವನು ಆತನ ಸ್ವಭಾವವನ್ನು ಅರಿತು ಕೊಳ್ಳುವವನು,ಪಾಲಿಸುವವನು ಭಕ್ತಿಯುತ ಸೇವೆಯಲ್ಲಿ ತೊಡಗುತ್ತಾನೆ. ಆತನ ತ್ರಿವಿಧ ಕ್ಲೇಶಗಳು ನಶಿಸುತ್ತವೆ. ಧ್ರುವ ಚರಿತ್ರೆಯನ್ನು ಕೇಳುವವನಿಗೆ ಧ್ರುವನ ಕೃಪೆಯಿಂದ ಮಹೋ ನ್ನತವಾದ ಗುಣಗಳು ಸಿದ್ಧಿಸುತ್ತವೆ. ಆಧಿಪತ್ಯವನ್ನು ತೇಜಸ್ಸನ್ನು, ಪ್ರತಿಭೆಯನ್ನು ಕೋರುವವರಿಗೆ ಧ್ರುವ ಕಥಾಶ್ರವಣವೇ ಉತ್ತಮ ವಾದ ಸಾಧನವು. ಸನ್ಮಾನಗಳನ್ನು ಬಯಸುವವರಿಗೆ ಇದೇ ಸೂಕ್ತವಾದ ವಿಧಾನ.

ಧ್ರುವ ಚರಿತ್ರೆಯನ್ನು ಮನುಷ್ಯನು ಬ್ರಾಹ್ಮಣರ ಸಂಗದಲ್ಲಿ ಬೆಳಗ್ಗೆ - ಸಂಜೆ ಸ್ಮರಿಸಬೇಕು. ದೇವದೇವೇಶನ ಪಾದಪದ್ಮಾ ಗಳನ್ನು ಆಶ್ರಯಿಸಿದವರು ಯಾವುದೇ ಪಾರಿತೋಷಕ್ಕೆ ಆಸೆ ಪಡದೆ ಈ ಧ್ರುವ ಚರಿತ್ರೆಯನ್ನು ಸ್ಮರಿಸಬೇಕು. ಮುಖ್ಯವಾಗಿ ಹುಣ್ಣಿಮೆ,ಅಮಾವಾಸ್ಯೆ ದಿನ, ದ್ವಾದಶಿಯಂದು, ಶ್ರವಣಾ ನಕ್ಷತ್ರ ದಂದು ಯಾವುದೇ ಪ್ರತ್ಯೇಕವಾದ ತಿಥಿಯ ಕಡೆಯಲ್ಲಿ, ಮಾಸಾಂತ್ಯದಲ್ಲಿ ಇಲ್ಲವೇ ಭಾನುವಾರಗಳಲ್ಲಿ ಸ್ತುತಿಸಬೇಕು. ಅಲ್ಲದೇ ಇದನ್ನು ಶ್ರದ್ಧಾವಂತ ವ್ಯಕ್ತಿಗಳ ಸಾನಿಧ್ಯದಲ್ಲೇ ಸ್ಮರಿಸ ಬೇಕು.ಯಾವುದೇ ತರಹದ ವ್ಯಾಪಾರ ಧೋರಣೆಯಿಲ್ಲದೇ ಸ್ಮರಿಸುವವರು. ಕೇಳುವವರೂ ಎಲ್ಲರೂ ಪರಮ ಪೂರ್ಣ ತ್ವವನ್ನು ಹೊಂದುತ್ತಾರೆ.ಅಮೃತ ತತ್ವಕ್ಕೆ ಈ ಧ್ರುವಚರಿತ್ರೆ ಎಷ್ಟೋ ಉದಾತ್ತಾವಾದುದು. ಇದರ ದ್ವಾರಾ ತನ್ನುಳಿದ ಜನ್ಮಗಳನ್ನು ಸತ್ಯಪಥದಲ್ಲಿ ನಡೆಸಬಹುದು. ಯಾರು ಈ ವಿಧವಾಗಿ ಅನುಸರಿ ಸುತ್ತಾರೋ ಅವರು ದೇವತೆಗಳ ಅನುಗ್ರಹವನ್ನು, ಆಶೀರ್ವಾದ ವನ್ನು ಅಪ್ರಯತ್ನವಾಗಿ ಪಡೆಯುತ್ತಾರೆ. ಬಾಲ್ಯದಲ್ಲಿ ಗೊಂಬೆ ಯಾಟವನ್ನು ಬಿಟ್ಟು, ತಾಯಿಯ ರಕ್ಷಣಾ ಹೊದಿಕೆಯನ್ನು ತ್ಯಜಿಸಿ ಶ್ರದ್ಧೆಯಿಂದ ವಿಷ್ಣುವನ್ನು ಆಶ್ರಯಿಸಿದ ಧ್ರುವನ ದಿವ್ಯಕಾರ್ಯಗಳು ಲೋಕವಿಖ್ಯಾತವಾದುವು - ಪರಮ ಪಾವಿತ್ರ್ಯವಾದವು.



# ಸುರಕ್ಷಿತ ಔಷಧೀಯ ಆಹಾರ ಜೀರಿಗೆ



ಮೂಲ. ಡಾ॥ ಸಿ. ಮಧುಸೂದನ ಶರ್ಮ

- ಅನುವಾದ : ಶ್ರೀಮತಿ.

"ಧರ್ಮಾರ್ಥ ಕಾಮಮೋಕ್ಷಾಣಾಂ ಆರೋಗ್ಯಂ ಮೂಲ - ಮುತ್ತಮಂ" - ಎನ್ನುತ್ತದೆ ಸನಾತನ ಭಾರತೀಯ ವಾಙ್ಮಯ, ಧರ್ಮ, ಅರ್ಥ, ಕಾಮ, ಮೋಕ್ಷಗಳ ಸಾಧನೆಗೆ ಆರೋಗ್ಯ ಅತ್ಯಂತ ಪ್ರಾಧಾನ್ಯತೆಯನ್ನು ಪಡೆದುಕೊಂಡಿದೆ. ಅಂತಹ ಆರೋಗ್ಯವನ್ನು ಕಾಪಾಡಿಕೊಳ್ಳಲು ಆಹಾರವು ಮುಖ್ಯವಾದ ಪಾತ್ರವನ್ನು ವಹಿಸಿಕೊಂಡಿದೆ. ಆಹಾರ ಪದಾರ್ಥಗಳು, ಅಡಿಗೆಯ ತಯಾರಿಕೆಗಳಲ್ಲಿ ಬಣ್ಣ, ರುಚಿ, ಸುಗಂಧಗಳಿಗಾಗಿ ವಿವಿಧ ಬಗೆಯ ಪಾಕಶಾಲೆ ಪರಿಕರಗಳನ್ನು ಬಳಸುತ್ತಾರೆ. ಅವುಗಳೆಲ್ಲೆವಿನಲ್ಲಿ ಭಗವಂತನು ಬಗೆ ಬಗೆಯ ಔಷಧ ಗುಣಗಳನ್ನು ಕ್ರೂಢೀಕರಿಸಿ ನಮಗೆ ಪ್ರಸಾದಿಸಿದ್ದಾನೆ.

ಅಂತಹ ಅಡುಗೆಮನೆಯ ದಿನಸಿಗಳಲ್ಲಿ ಪ್ರಸ್ತುತ ಜೀರಿಗೆಯ ಗುಣಗಳ ಕುರಿತು ತಿಳಿದುಕೊಳ್ಳೋಣ.

ಜೀರಿಗೆಯನ್ನು ಸಂಸ್ಕೃತದಲ್ಲಿ 'ಜೀರಕ' ಎಂದೂ, ಆಂಗ್ಲದಲ್ಲಿ Cumin Seeds ಎಂದು ಕರೆಯುತ್ತಾರೆ.

ಏಪಿಯೇಸಿ ಎಂಬ ಸಸ್ಯ ಕುಟುಂಬಕ್ಕೆ ಸೇರಿದ ಈ ಜೀರಿಗೆಯ ಶಾಸ್ತ್ರೀಯನಾಥೇಯ Cuminum Cyminum ಜೀರಿಗೆಯ ಪುಡಿಯನ್ನು ಔಷಧಿಗಳ ತಯಾರಿಕೆಯಲ್ಲಿ ಬಳಸುತ್ತಿದ್ದಲ್ಲಿ ಜೀರಿಕೆಯನ್ನು ಆರಿಸಿ, ಪುಡಿಮಾಡಿ ಬಳಸಬೇಕು.

### ಜೀರ್ಣಾಶಯ ವ್ಯಾಧಿಗಳು ತಲೆದೋರದಿರಲು

ಜೀರಿಗೆಯ ಪುಡಿ 50 ಗ್ರಾಂ, ದನಿಯ ಪುಡಿ 50 ಗ್ರಾಂ, ಉಪ್ಪು 25ಗ್ರಾಂ ಕಲಿಸಿಟ್ಟು ಕೊಂಡು ನಿತ್ಯ ಒಂದು ಬಾರಿಗೆ ಊಟದ ಮೊದಲ ತುತ್ತಿನಲ್ಲಿ ಒಂದು ಟೀಸ್ಪೂನ್ ಪುಡಿಯನ್ನು ಕಲಿಸಿ ಸೇವಿಸುತ್ತಿದ್ದರೆ, ಜೀರ್ಣಾಶಯ ಅನಾರೋಗ್ಯ ಸಮಸ್ಯೆಗಳು ಬಳಿಬಾರದಂತೆ ನೋಡಿಕೊಳ್ಳಬಹುದು.

### ಮುಖ ಸೌಂದರ್ಯಕ್ಕೆ

ಜೀರಿಗೆಯ ಪುಡಿ, ಅರಿಶಿನ ಪುಡಿ, ಒಂದೊಂದು 25 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ಪ್ರತಿನಿತ್ಯ ತಕ್ಕಷ್ಟು ನೀರು ಕಲಿಸಿ ಪೇಸ್ಟಿನಂತೆ ಮಾಡಿ ಮುಖಕ್ಕೆ ಲೇಪಿಸುತ್ತಿದ್ದರೆ, ಮೊಡವೆಗಳು, ಕಲೆಗಳು, ಗುಳ್ಳೆಗಳು ತಗ್ಗಿ ಮುಖ ಕಾಂತಿಯುತವಾಗುತ್ತದೆ.

### ಚೇಳು ಕಡಿತಕ್ಕೆ

ಜೀರಿಗೆ, ಉಪ್ಪು, ಜೇನು, ತುಪ್ಪ, ಸಮನಾಗಿ ಕಲಿಸಿ ಮೆತ್ತನೆ ಯಾಗಿ ರುಬ್ಬಿ ಕಡಿತದ ಮೇಲೆ ಲೇಪಿಸಿದಲ್ಲಿ ಉರಿ, ನೋವು ಸೆಳೆತ, ಕೂಡಲೇ ಮಾಯವಾಗುತ್ತವೆ. ಕಂಬಳಿ ಹುಳ, ಚೇಳಿನಂತಹ ಕೀಟಗಳು ಕಡಿದಲ್ಲಿ ಈ ಔಷಧವನ್ನು ಉಪಯೋಗಿಸಬಹುದು.

### ರಕ್ತಹೀನತೆಗೆ

ಜೀರಿಗೆಯ ಪುಡಿ, ಬೆಲ್ಲದ ಪುಡಿ, ಒಂದೊಂದು 100 ಗ್ರಾಂ ಹೇಳಿದಂತೆ ತೆಗೆದುಕೊಂಡು ನುಣ್ಣಗೆ ಬೀಸಿ ಸಂಗ್ರಹಿಸಿಟ್ಟು ಕೊಂಡು ಮೂರು ಹೊತ್ತು ಬಾರಿಗೊಮ್ಮೆ ಗುಲಗಂಜೀ ಪ್ರಮಾಣದಷ್ಟು ಚಪ್ಪರಿಸಿ ತಿನ್ನುತ್ತಿರಬೇಕು.

ಈ ಔಷಧಿಯನ್ನು ಹೀಗೆ ಬಳಸುತ್ತಿದ್ದಲ್ಲಿ ಬಿಟ್ಟು ಬಿಟ್ಟು ಬರುವ ಜ್ವರ, ಮೈತುರಿಕೆ, ದದ್ದುಗಳು ಸಹಾ ಹೊರಟು ಹೋಗುತ್ತವೆ.

**ದಂತಧಾವನ ಚೂರ್ಣ**

ಜೀರಿಗೆ ಪುಡಿ,ಕಾರ್ಜಿಕಾಯಿ ಪುಡಿ, ಹಿಪ್ಪಲಿ ಪುಡಿ, ಉಪ್ಪು ಒಂದೊಂದು 50 ಗ್ರಾಂ ಹೇಳಿದಂತೆ ಕಲಿಸಿಟ್ಟುಕೊಂಡು ದಿನವೂ ಒಂದೆರೆಡು ಬಾರಿ ದಂತಧಾವನ ಚೂರ್ಣವನ್ನಾಗಿ ಬಳಸುತ್ತಿದ್ದರೆ ವಸಡು ಬಾವು, ನೋವು, ವಸಡಿನಿಂದ ರಕ್ತ ಸೋರುವುದು, ಹಲ್ಲು ನೋವು ಕಡಿಮೆಯಾಗುತ್ತದೆ.

**ಮೂಲವ್ಯಾಧಿ (ಫೈಲ್ಸ್)**

10 ಗ್ರಾಂ ಜೀರಿಗೆ ಪುಡಿ, 20 ಗ್ರಾಂ ಸ್ಪಟಿಕ ಬೆಲ್ಲದ ಪುಡಿ,30 ಗ್ರಾಂ ಹರಳುಪ್ಪಿನ ಪುಡಿ, ಕಲಿಸಿಟ್ಟುಕೊಂಡು ಬೆಳಗ್ಗೆ,ರಾತ್ರಿ ಆಹಾರಸೇವನೆಯ ಅರ್ಧಗಂಟೆ ಮೊದಲು 100ಮಿ.ಲೀ. ನೀರಿನಲ್ಲಿ 2-3 ಗ್ರಾಂ ಪುಡಿ ಕಲಿಸಿ ಸೇವಿಸುತ್ತಾ ದಿನವೂ ಒಂದು ಬಾರಿ ನೀರಿನಲ್ಲಿ ಕಲಿಸಿ ಪೇಸ್ಟ್‌ನಂತೆ ಬಾವಿನ ಮೇಲೆ ಹಚ್ಚುತ್ತಿರಬೇಕು.

**ಗ್ಯಾಸ್ಟ್ರಿಕ್ ಟ್ರಬಲ್**

ಜೀರಿಗೆಪುಡಿ, ನೆಲ್ಲಿಕಾಯಿಪುಡಿ, ಒಣಗಿಸಿದ ಗುಲಾಬಿ ದಳಗಳಪುಡಿ, ಉಪ್ಪು ಒಂದೊಂದು 50 ಗ್ರಾಂ ನಂತೆ ತೆಗೆದುಕೊಂಡು ಎಲ್ಲವನ್ನು ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಊಟದ ನಂತರ ಅರ್ಧ ಟೀ ಸ್ಪೂನ್ ಪುಡಿಯನ್ನು 100 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಹೊಟ್ಟೆಯಲ್ಲಿ ತಿರುಗುವುದು, ಹೊಟ್ಟೆ ಭಾರ, ಮಲಬದ್ಧತೆ,ಹುಳಿ ತೇಗಿನಂತಹ ಸಮಸ್ಯೆಗಳು ತಗ್ಗಿ ಹೋಗುತ್ತವೆ.

**ಬಾಧಿಸುವ ಕೆಮ್ಮಿಗೆ**

ಜೀರಿಗೆಯ ಪುಡಿ 10 ಗ್ರಾಂ, ಉಪ್ಪು ಕಾಲು ಟೀ ಸ್ಪೂನ್, ಕಾಳೆಮೆಣಸಿನ ಪುಡಿ ಕಾಲು ಟೀ ಸ್ಪೂನ್, ಕಲಿಸಿಟ್ಟುಕೊಂಡು ದಿನಕ್ಕೆರಡು ಬಾರಿ ಬಾರಿಯೊಂದಕ್ಕೆ ಒಂದೆರಡು ಗ್ರಾಂ ಚೂರ್ಣವನ್ನು ಚಪ್ಪರಿಸಿ ನುಂಗುತ್ತಿರಬೇಕು.

**ಬಾಣಂತಿಯರಲ್ಲಿ ಹಾಲು ಉತ್ಪತ್ತಿ ವೃದ್ಧಿಸಲು**

ಹಸಿಜೀರಿಗೆಯ ಪುಡಿ 50 ಗ್ರಾಂ, ಜೀರಿಗೆಯನ್ನು ಒಣಗಿಸಿ ಮಾಡಿದ ಪುಡಿ 50 ಗ್ರಾಂ, ಸ್ಪಟಿಕ ಬೆಲ್ಲ 200 ಗ್ರಾಂ, ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿಯೊಂದಕ್ಕೆ100 ಮಿ.ಲೀ.ನೀರಿನಲ್ಲಿ ಅಥವಾ ಹಾಲಿನಲ್ಲಿ 2-3 ಗ್ರಾಂ ಪುಡಿ ಕಲಿಸಿ ಸೇವಿಸಬೇಕು.

ಇದೇ ಔಷಧಿಯನ್ನು ತಕ್ಕಷ್ಟು ತುಪ್ಪದಲ್ಲಿ ಕಲಿಸಿ ತೆಗೆದುಕೊಂಡರೆ ಅಧಿಕ ಉಷ್ಣತೆ ನಿವಾರಣೆಗೊಳ್ಳುತ್ತದೆ.

**ಸ್ಥೂಲಕಾಯಕ್ಕೆ**

ದಿನವೂ ಬೆಳಗ್ಗೆ 200 ಮಿ.ಲೀ. ನೀರಿನಲ್ಲಿ 5 ಗ್ರಾಂ ಜೀರಿಗೆ ಹಾಕಿ ಸ್ವಲ್ಪ ಹೊತ್ತು ನೆನೆಸಿ, ಮರಳಿಸಿ, ಇಳಿಸಿ, ಉಗುರು ಬೆಚ್ಚಗಿರುವಾಗಲೇ ಸೋಸಿ, ಅರ್ಧ ಹೋಳು ನಿಂಬೆರಸ ಒಂದು ಟೀ ಸ್ಪೂನ್ ಜೇನು ಕಲಿಸಿ ಸೇವಿಸುತ್ತಿದ್ದರೆ ಶರೀರದಲ್ಲಿನ ಅಧಿಕ ಕೊಬ್ಬು ಕರಗಿ ದೇಹ ತೂಕವಿಳಿದು ಸ್ಥೂಲಕಾಯ ಸಮಸ್ಯೆ ತಗ್ಗುತ್ತದೆ.

**ಪೈತ್ಯ ವಿಕಾರಕ್ಕೆ**

ಕಾಲು ಕಿಲೋ ಜೀರಿಗೆಯನ್ನು ಶುಭ್ರವಾಗಿ ಹುರಿದು ದರಿದರಿಯಾಗಿ ಪುಡಿಮಾಡಿ, ಕುದಿಸಿ ಬಿಸಿಯಾರಿದ ನಂತರ ಒಂದು ಪಾತ್ರೆಯಲ್ಲಿ ತೆಗೆದುಕೊಂಡು ಮುಳುಗುವಷ್ಟು ನಿಂಬೆ ರಸ ಹಾಕಿ ಬಿಸಿಮಾಡಬೇಕು.ಹೀಗೆ ಏಳುಬಾರಿ ನಿಂಬೆರಸ ಹಾಕಿ ಒಣಗಿಸಿ ಚೂರ್ಣ ಮಾಡಬೇಕು.ಇದೇ ಭಾವನ ಜೀರಿಗೆ. ಆಯುರ್ವೇದ ಔಷಧಾಲಯಗಳಲ್ಲಿ ಕೂಡಾ ದೊರಕುವ ಈ ಭಾವನ ಜೀರಿಗೆಯನ್ನು ಬೆಳಗ್ಗೆ ಮತ್ತು ಸಂಜೆ ಬಾರಿಯೊಂದಕ್ಕೆ ಒಂದೆರಡು ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ. ತಲೆ ತಿರುಗುವುದು, ವಾಂತಿ ಬಂದಂತಾಗುವುದು ಬಾಯಲ್ಲಿ ನೀರೂರುವುದು,ಪೈತ್ಯ ದೋಷಗಳು ಬಗೆಹರಿಯುತ್ತವೆ. ಬಾಯಿ, ಮೂಗು, ವಸಡುಗಳಿಂದ ರಕ್ತ ಸೋರುವುದರಿಂದ ಉಂಟಾಗುವ ರಕ್ತಸ್ರಾವವೂ ಕೂಡ ತಗ್ಗುತ್ತದೆ. ಗರ್ಭಿಣಿಯರಿಗೆ ವಾಂತಿಯ ಸಮಸ್ಯೆಗಳೂ ಸಹಾ ದೂರ ಸರಿಯುತ್ತವೆ.

ಹಲವು ವ್ಯಾಪಾರಿಗಳು ಜೀರಿಗೆಯೊಂದಿಗೆ ನಿಂಬೆ ಉಪ್ಪು ಕಲಿಸಿ ಭಾವನ ಜೀರಿಗೆಯ ಹೆಸರಲ್ಲಿ ಮಾರುವುದು ಗಮನಾರ್ಹ.

**ರಕ್ತಶುದ್ಧಿಗೆ**

ಜೀರಿಗೆಯ ಪುಡಿ, ಬೆಲ್ಲ ಪುಡಿ, ಆಯುರ್ವೇದ ಔಷಧಾಲಯಗಳಲ್ಲಿ ದೊರಕುವ ಅತಿ ಮಧುರ ಚೂರ್ಣ ಒಂದೊಂದನ್ನು 50 ಗ್ರಾಂ ನಂತೆ ತೆಗೆದುಕೊಂಡು ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಒಂದು ಬಾರಿಗೆ 100 ಮಿ.ಲೀ. ನೀರಿನಲ್ಲಿ ಅಥವಾ ಕಾಸಿದ ಹಾಲಿನಲ್ಲಿ ಅರ್ಧ ಟೀ ಸ್ಪೂನ್ ಪುಡಿ ಕಲಿಸಿ ಸೇವಿಸುತ್ತಿದ್ದರೆ ಚರ್ಮದೋಷಗಳೊಂದಿಗೆ ಹೊಟ್ಟೆಯುರಿ, ಬಾಯ ದುರ್ವಾಸನೆ, ಅಧಿಕ ಉಷ್ಣತೆ ತಗ್ಗಿ ಮಾನಸಿಕ ಪ್ರಶಾಂತತೆಯುಂಟಾಗುತ್ತದೆ. ಶಕ್ತಿಯುತವಾದ ಆಧುನಿಕ ರಸಾಯನಿಕ ಔಷಧಿಗಳಿಂದುಂಟಾಗುವ ಜೀರ್ಣಾಶಯ ಸಂಕಷ್ಟಗಳು ಶಮನಗೊಳ್ಳುತ್ತವೆ.

**ಮುಟ್ಟಿನ ನೋವಿಗೆ**

ಜೀರಿಗೆಯನ್ನು ತುಪ್ಪದಲ್ಲಿ ಹುರಿದು ಮಾಡಿದ ಚೂರ್ಣ 100 ಗ್ರಾಂ, ಉಪ್ಪು 50 ಗ್ರಾಂ ಕಲಿಸಿಟ್ಟುಕೊಂಡು, ಬೆಳಗ್ಗೆ

ಸಂಜೆ ಬಾರಿಗೆ ಎರಡು - ಮೂರು ಗ್ರಾಂನಂತೆ 100 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸಬೇಕು. ಕ್ರಮ ತಪ್ಪದೇ ಪ್ರತಿನಿತ್ಯ ಈ ಔಷಧಿಯನ್ನು ಸೇವಿಸುತ್ತಿದ್ದರೆ ಮುಟ್ಟು ಸರಾಗವಾಗಿ ನಡೆಯುತ್ತದೆ.

**ಗರ್ಭಿಣಿಯರ ಆರೋಗ್ಯಕ್ಕಾಗಿ**


ದಿನಕ್ಕೊಂದು ಬಾರಿ 200 ಮಿ.ಲೀ. ನೀರಿನಲ್ಲಿ ಒಂದು ಟೀ ಸ್ಪೂನ್ ಜೀರಿಗೆ ಹಾಕಿ ಸ್ವಲ್ಪ ಹೊತ್ತು ನೆನೆಸಿ 100 ಮಿ.ಲಿ. ನೀರು ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಸೋಸಿ 100 ಮಿ.ಲೀ. ಕಾಸಿದ ಹಾಲಿನಲ್ಲಿ ಒಂದೆರಡು ಚಿಟಿಕೆ ಜೇನು ಹಾಕಿ ಕಲಿಸಿ ಸೇವಿಸುತ್ತಿದ್ದರೆ ಗರ್ಭಿಣಿಯರು ಎಂತಹ ಅನಾರೋಗ್ಯಕ್ಕೆ ತುತ್ತಾಗದೇ ಜೊತೆಗೆ ಗರ್ಭಸ್ಥ ಶಿಶುವೂ ಸಹಾ ಚೆನ್ನಾಗಿ ಬೆಳೆದು ಸುಖ ಪ್ರಸವವಾಗುವುದಲ್ಲದೇ ಶಿಶುವಿಗೆ ಹಾಲು ಸಮೃದ್ಧವಾಗಿ ಲಭಿಸುತ್ತದೆ.

**ಬಾಯಿ ವಾಸನೆಗೆ**

ಜೀರಿಗೆ, ವೀಳ್ಯೆದೆಲೆ, ಸ್ಫಟಿಕ ಬೆಲ್ಲದ ಚೂರ್ಣವನ್ನು ಸಮಾನವಾಗಿ ಕಲಿಸಿಟ್ಟುಕೊಂಡು ಮುಂಜಾನೆ,ಸಂಜೆ ಬಾರಿಯೊಂದಕ್ಕೆ ಒಂದೆರಡು ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

ಜೀರಿಕಾದ್ಯಾರಿಷ್ಟ, ಜೀರಕಬಿಲ್ವಾದಿ ಲೇಹ್ಯ, ಹಿಂಗ್ವಾಷ್ಟಕ ಚೂರ್ಣ ಮೊದಲಾದ ಔಷಧಗಳ ತಯಾರಿಕೆಯಲ್ಲೂ ಸಹಾ ಜೀರಿಗೆಯನ್ನು ಉಪಯೋಗಿಸುತ್ತಾರೆ.

# ಅತ್ತಿವರದರಾಜ ಸ್ವಾಮಿ



- ತಮಿಳು ಮೂಲ. ಶಕ್ತಿ ವಿನಾಯಕಂ

- ಅನುವಾದ ಶ್ರೀಮತಿ. ಎಸ್. ಸುರೇಖ

**ಸ್ಥಳ ಪುರಾಣ** ಬ್ರಹ್ಮ ದೇವನು ಸತ್ಯವ್ರತ ಕ್ಷೇತ್ರದಲ್ಲಿ ಇರುವ ಕಾಂಚೀಪುರದಲ್ಲಿ ಅಶ್ವಮೇಧ ಯಾಗವನ್ನು ಮಾಡುತ್ತಿದ್ದರು.ಆ ಯಾಗಕ್ಕೆ ಅವರ ಧರ್ಮಪತ್ನಿಯಾದ ಸರಸ್ವತಿಯನ್ನು ಕರೆಯದೆ ಇನ್ನಿತರ ಇಬ್ಬರು ಪತ್ನಿಯರಾದ ಸಾವಿತ್ರಿ, ಗಾಯತ್ರಿಯರ ಜೊತೆ ಯಾಗವನ್ನು ಪ್ರಾರಂಭಿಸಿದರು. ಈ ವಿಷಯವನ್ನು ತಿಳಿದ ಸರಸ್ವತಿಯು ತುಂಬಾ ಕೋಪಗೊಂಡು ವೇಗವತಿ ಎನ್ನುವ ನದಿಯಾಗಿ ಪರಿವರ್ತನೆಗೊಂಡು ಯಾಗವನ್ನು ಮಾಡದಂತೆ ತಡೆದಳು. ಬ್ರಹ್ಮ ಕೋರಿಕೆಯ ಮೇರೆಗೆ ಶ್ರೀ ಮಹಾವಿಷ್ಣುವು 'ವೇಗವತಿ ನದಿ'ಗೆ ಅಡ್ಡವಾಗಿ ಶಯನಿಸಿದರು.ನದಿಯು ಕೂಡ ಹಾಗೆಯೇ ಹರಿಯದೆ ನಿಂತು ಹೋಯಿತು. ನಂತರ ಬ್ರಹ್ಮ ಯಾಗವು ಪೂರ್ತಿಯಾದ ಮೇಲೆ ಯಾಗಗುಂಡದಿಂದ ಪುಣ್ಯಕೋಟಿ ವಿಮಾನದಲ್ಲಿ ಭಗವಂತನು ಪ್ರತ್ಯಕ್ಷವಾದನು. ನಂತರ ಬ್ರಹ್ಮ ಕೋರಿಕೆಯ ಮೇರೆಗೆ ಅಲ್ಲಿಯೇ "ಶ್ರೀ ವರದರಾಜ" ಎನ್ನುವ ಹೆಸರಿನಿಂದ ನೆಲಸಿದನು. ಬ್ರಹ್ಮನು ಕೂಡ ಅತ್ತಿ ವೃಕ್ಷದಲ್ಲಿ ಒಂದು ಶಿಲೆಯನ್ನು ಕೆತ್ತಿ ಅಲ್ಲಿಯೇ ಪೂಜೆಯನ್ನು ಮಾಡಿದರು.

**ಅತ್ತಿವರದನು**

ಬ್ರಹ್ಮ ಯಾಗದಿಂದ ಆವಿರ್ಭವಿಸಿದ ಕಾರಣ ಸ್ವಲ್ಪ ರೂಪವನ್ನು ಬದಲಾಯಿಸಿದನು.(ಪರಿವರ್ತಿಸಿದನು.) ಅಶರೀರ ಮೂಲವಾಗಿ ತನ್ನನ್ನು ಅನಂತತೀರ್ಥದಲ್ಲಿಯೇ ಬಿಟ್ಟು "ಪಳೆಯ ಶೀವರತ್ತಿದಲ್ಲಿರುವ" ಮೂರ್ತಿಯನ್ನು ಕಾಂಚಿಪುರಂನಲ್ಲಿ ಪ್ರತಿಷ್ಠೆ ಮಾಡುವುದಕ್ಕೆ ಆಜ್ಞಾಪಿಸಿದರು.ಬೆಳ್ಳಿ ಹಲಗೆಯಲ್ಲಿ ಶಯನ ರೂಪವಾಗಿ "ಅಮೃತಸರಸ್ಸು" ಎನ್ನುವ ಪುಷ್ಕರಣಿಯಲ್ಲಿ ಶಯನಿಸಿದ್ದಾರೆ. 40 ವರ್ಷಗಳಿಗೊಮ್ಮೆ ಮೇಲೆ ತೆಗೆದು, ಶಯನ ಮತ್ತು ನಿಂತಿರುವ ರೂಪದಲ್ಲಿ ಇಟ್ಟು ಪೂಜಿಸಲಾಗುತ್ತದೆ.

ನೂರುಕಾಲುಗಳ ಮಂಡಪಕ್ಕೆ ಉತ್ತರವಾಗಿ ಇರುವ ಪುಷ್ಕರಣಿಯಲ್ಲಿ 2 ಮಂಡಪಗಳು ಇವೆ.ದಕ್ಷಿಣ ದಿಕ್ಕಿನಲ್ಲಿ ಇರುವ ಮಂಡಪದ ಕೆಳಗೆ ನೀರಿನೊಳಗೆ ಒಂದು ಮಂಟಪ ಇದೆ. ಅದರಲ್ಲಿ ತುಂಬಾ ದೊಡ್ಡದಾದ ಅತ್ತಿವೃಕ್ಷದಲ್ಲಿ ಮಾಡಲಾದ ಅತ್ತಿವರದನು ಶಯನ ಭಂಗಿಯಲ್ಲಿ ಸೇವೆ ಮಾಡುತ್ತಿದ್ದಾರೆ. ಈ ಪುಷ್ಕರಣಿ ಎಂದಿಗೂ ಒಣಗುವುದಿಲ್ಲ.ಹಾಗೆಯೇ ನೀರು ತುಂಬಿ ಇರುತ್ತದೆ.40 ವರ್ಷಗಳಿಗೂಮ್ಮೆ ಈ ಸ್ವಾಮಿಯನ್ನು ಹೊರಗೆ ತೆಗೆದುಕೊಂಡು ಬಂದು ಭಕ್ತರ ದರ್ಶನಕ್ಕೆ ಅನುಮತಿಸುತ್ತಾರೆ.

ಹಾಗೆಯೇ 1979 ರ ನಂತರ ಈ ವರ್ಷದಲ್ಲಿ ಅಂದರೆ ಜುಲೈ 1 ರಿಂದ ಆಗಸ್ಟ್ 17 ರ ವರೆಗೆ ಭಕ್ತರಿಗೆ ದರ್ಶನಕ್ಕಾಗಿ ಇಡುತ್ತಾರೆ. ಆ ಸಮಯದಲ್ಲಿ ಭಗವಂತನಿಗೆ ಆಗಮಶಾಸ್ತ್ರ ಪ್ರಕಾರ ದಿನಕ್ಕೆ 4 ವೇಳೆಯಲ್ಲಿ ಪೂಜಾ ಕೈಂಕರ್ಯಗಳು ಪಡೆದು ಭಕ್ತರಿಗೆ ದರ್ಶನವನ್ನು ನೀಡುತ್ತಾರೆ. ಈ ಪ್ರಸಿದ್ಧ ಪಡೆದ ದೇವಾಲಯವು ಕಂಚಿಯಿಂದ ಚೆಂಗಲ್ಪಟ್ಟುಗೆ ಹೋಗುವ ರಹದಾರಿಯಲ್ಲಿದೆ. ಪ್ರತಿದಿನ ಆಲಯದ ಸಂದರ್ಶನ ವೇಳೆ : ಬೆಳಗ್ಗೆ 6 ಗಂ|| ಯಿಂದ 12.30ಗಂ|| ವರೆಗೆ ಮತ್ತೆ ಮಧ್ಯಾಹ್ನ 3-30 ಗಂ||ಯಿಂದ ರಾತ್ರಿ 8.30 ನಿಮಿಷದವರೆಗೆ ಭಕ್ತರ ಸಂದರ್ಶನಾರ್ಥ ಇಡುತ್ತಾರೆ.

**ಭಕ್ತರೆಲ್ಲರೂ ಬಂದು ಸ್ವಾಮಿಯದರ್ಶನ ಪಡೆದು, ಪುನೀತರಾಗೋಣ**



# ಸಂಸ್ಕಾರ ಸಮನ್ವಿತ ಜೀವನವೃತ್ತಿ

ಆರ್.ಎಸ್.ಎನ್. ಮೂರ್ತಿ

ಮನುಷ್ಯನ ಜೀವನದಲ್ಲಿ ದಾನಕ್ಕೆ ಅತಿ ಹೆಚ್ಚು ಮಹತ್ವವನ್ನು ತಿಳಿಸಲಾಗಿದೆ. ಇದೊಂದು ರೀತಿಯ ನಿತ್ಯ ಕರ್ಮವಿದ್ದಂತೆ ಪ್ರತಿನಿತ್ಯವೂ ಏನಾದರೊಂದು ದಾನ ಮಾಡುವುದು ಅತ್ಯವಶ್ಯ.

ಶ್ರದ್ಧಯಾ ದೇಯಮ್, ಹ್ರಿಯಾದೇಯಮ್, ಭಿಯಾ ದೇಯಮ್ ದಾನವನ್ನು ಶ್ರದ್ಧೆಯಿಂದಾಗಲೇ, ಸಂಕೋಚದಿಂದಾಗಲೀ ಇಲ್ಲವೇ ಭಯದಿಂದಾಗಲೀ ಕೊಡಬೇಕು. ಮನುಷ್ಯ ವರ್ಗಕ್ಕೆ ದಾನ ಪರಮ ಅವಶ್ಯಕ ದಾನವಿಲ್ಲದೆ ಮನುಷ್ಯನ ಉನ್ನತಿ ಕುಂಠಿತವಾಗುತ್ತದೆ. ಈ ಪ್ರಸಂಗದಲ್ಲಿ ಒಂದು ಇದೆ.-ಒಮ್ಮೆ ದೇವತೆಗಳ, ಮನುಷ್ಯರ ಮತ್ತು ರಾಕ್ಷಸರ ಉನ್ನತಿಗೆ ಕಂಟಕ ಒದಗಿತು. ಹಾಗಾಗಿ ಅವೆಲ್ಲರೂ ಪ್ರಜಾಪತಿ ಪಿತಾಮಹ ಬ್ರಹ್ಮನ ಬಳಿ ಹೋದರು. ತಮ್ಮ ದುಃಖವನ್ನು ಹೋಗಲಾಡಿಸಲು ಪ್ರಾರ್ಥಿಸುತ್ತಾ ಹಲುಬಿದರು. ಅದಕ್ಕೆ ಬ್ರಹ್ಮ ಮೂವರ ಸಲುವಾಗಿ 'ದ' ಎಂಬ ಒಂದು ಅಕ್ಷರವನ್ನು ಉಪದೇಶ ಮಾಡಿದನು. ಸ್ವರ್ಗದಲ್ಲಿ ಭೋಗಗಳ ಬಾಹುಳ್ಯದಿಂದ ಭೋಗವೇ ದೇವಲೋಕದ ಸುಖವೆಂದು ತಿಳಿಯಲ್ಪಟ್ಟಿದೆ. ಆದ್ದರಿಂದ ದೇವಗಣವು ಎಂದಿಗೂ ವೃದ್ಧಾವಸ್ಥೆ ಹೊಂದದೆ ಸದಾ ಇಂದ್ರಿಯ ಭೋಗದಲ್ಲಿ ತೊಡಗಿರುತ್ತದೆ. ಅವರ ಈ ಸ್ಥಿತಿಯನ್ನು ಯೋಚಿಸಿದ ಪ್ರಜಾಪತಿ ದೇವತೆಗಳಿಗೆ 'ದ' ಮೂಲಕ 'ದಮನ'ಇಂದ್ರೀಯ ದಮನದ ಉಪದೇಶಕೊಟ್ಟ. ಬ್ರಹ್ಮನ ಈ ಉಪದೇಶದಿಂದ ದೇವತೆಗಳು ತಮ್ಮನ್ನು ಕೃತ ಕೃತ್ಯರಾದೆವೆಂದು ತಿಳಿದು ನಮಸ್ಕರಿಸಿ ಅಲ್ಲಿಂದ ಹೊರಟರು.

ರಾಕ್ಷಸರು ಸ್ವಭಾವತಃ ಹಿಂಸಾ ಪ್ರವೃತಿಯವರು. ಕ್ರೋಧ ಮತ್ತು ಹಿಂಸೆ ಅವರ ನಿತ್ಯಕಾಯಕ. ಹಾಗಾಗಿ ಪ್ರಜಾಪತಿ ಬ್ರಹ್ಮನು ಅವರಿಗೆ ಈ ಕೆಟ್ಟ ಕೆಲಸವನ್ನು ಬಿಡಲು ಬಿಡಿಸಲು 'ದ' ಅಕ್ಷರದ ಮೂಲಕ ಜೀವಿಗಳ ಮೇಲೆ 'ದಯೆ' ಹೊಂದಲು ಉಪದೇಶಿಸಿದ. ಅವರು ಬ್ರಹ್ಮನ ಈ ಉಪದೇಶವನ್ನು ಶಿರಸಾವಹಿಸಿ ಅನುಸರಿಸಲು ಒಪ್ಪಿ ಅಲ್ಲಿಂದ ಹೊರಟರು. ಮಾನವರಾದವರು ಕರ್ಮಯೋನಿಯವರಾದ್ದರಿಂದ ಯಾವಾಗಲೂ ಲೋಭಕ್ಕೊಳಗಾಗಿ ಕರ್ಮಮಾಡಲು ಮತ್ತು ಹಣ ಸಂಗ್ರಹದಲ್ಲಿಯೇ ತೊಡಗಿರುತ್ತಾರೆ. ಇದರಿಂದಾಗಿ ಪ್ರಜಾಪತಿಯು ಲೋಭಿ (ಮನುಷ್ಯರಿಗೆ)ಗಳಿಗೆ 'ದ' ಮೂಲಕ 'ದಾನ' ಮಾಡಲು ಉಪದೇಶಿಸಿದ. ಸಫಲ ಮನೋರಥರಾದ ಮಾನವರು ಪ್ರಜಾಪತಿಯ ಆಜ್ಞೆಯನ್ನು ಸ್ವೀಕರಿಸಿ, ನಮಸ್ಕರಿಸಿ ಹೊರಟರು. ಆದ್ದರಿಂದಲೇ ಮನುಷ್ಯ ವರ್ಗಕ್ಕೆ ತಮ್ಮ ಏಳಿಗೆಗಾಗಿ (ಅಭ್ಯುದಯ) ದಾನ ಮಾಡುವುದು ಅವಶ್ಯಕ ಎಂದು ತಿಳಿಯಲ್ಪಟ್ಟಿತು.

### 'ವಿಭವೋ ದಾನಶಕ್ತಿಶ್ಚ ಮಹತಾಂ ತಪಸಾಂಫಲಮ್'

ವಿಭವ ಮತ್ತು ದಾನ ಮಾಡುವ ಸಾಮರ್ಥ್ಯ ಅಂದರೆ ಮಾನಸಿಕ ಔದಾರ್ಯ - ಇವೆರಡೂ ಮಹಾನ್ ತಪಸ್ಸಿನ ಫಲಗಳು, ವಿಭವ ಹೊಂದುವುದು ಸಾಮಾನ್ಯ ವಿಷಯ. ಇದು ಎಲ್ಲಿಯಾದರೂ ಆಗಬಹುದು ಆದರೆ ಈ ವಿಭವವನ್ನು ಬೇರೊಬ್ಬರಿಗೆ ನೀಡುವುದು ಮನಸ್ಸಿನ ಔದಾರ್ಯತೆಯನ್ನು ಅವಲಂಬಿಸಿದೆ. ಇದು ಜನ್ಮ ಜನ್ಮಾಂತರದ ಪುಣ್ಯ ಪುಂಜದಿಂದ ಲಭಿಸಿರುವುದು.

ಮಹಾರಾಜ ಯುಧಿಷ್ಠಿರನ ಕಾಲದ ಒಂದು ಘಟನೆ ಒಬ್ಬ ಬ್ರಾಹ್ಮಣೋತ್ತಮನ ತಂದೆ ನಿಧನನಾದ, ತನ್ನ ತಂದೆಯ ದಹನ ಸಂಸ್ಕಾರವನ್ನು ಶ್ರೀ ಗಂಧದ ಮರದಿಂದ ಮಾಡಬೇಕೆಂದು ಭಾವನೆ ಅವನಿಗೆ ಬಂದಿತು. ಆದರೆ ಅವನಲ್ಲಿ ಸಾಕಷ್ಟು ಶ್ರೀ ಗಂಧದ ತುಂಡಿರಲಿಲ್ಲ. ಆತ ಯುಧಿಷ್ಠಿರ ಮಹಾರಾಜನ ಬಳಿ ಹೋಗಿ ತನ್ನ ತಂದೆಯ ದಹನ ಸಂಸ್ಕಾರಕ್ಕೆ ಶ್ರೀ ಗಂಧದ ಕೊರತೆಯಾಗಿದೆ ಎಂದು ವಿನಂತಿಸಿಕೊಂಡ. ರಾಜನಿಗಾದರೋ ಅದರ ಕೊರತೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಆ ಬ್ರಾಹ್ಮಣನಿಗೆ ಕೊಡುವ ಬಯಕೆಯೂ ಇತ್ತು. ಆದರೆ ಒಂದೇ ಸಮನೆ ಜಿಟಿಜಿಟಿ ಮಳೆಯ ಕಾರಣದಿಂದ ಶ್ರೀಗಂಧದ ತುಂಡುಗಳು ನೀರಿನಿಂದ ಒದ್ದೆಯಾಗಿದ್ದವು. ಒದ್ದೆ ತುಂಡುಗಳಿಂದ ದಹನ ಸಂಸ್ಕಾರ ಸಾಧ್ಯವಿರಲಿಲ್ಲ. ಹಾಗಾಗಿ ಆತ

ನಿರಾಸೆಯಿಂದ ಹಿಂತಿರುಗಬೇಕಾಯಿತು. ಇದಾದ ನಂತರ ಆತ ಇದೇ ಕೆಲಸದ ಸಲುವಾಗಿ ರಾಜ ಕರ್ಣನ ಬಳಿ ಹೋದ. ರಾಜ ಕರ್ಣನಲ್ಲಿಯು ಸಹ ಇದೇ ಪರಿಸ್ಥಿತಿ ಇತ್ತು. ಅವನಲ್ಲಿಯೂ ಈ ಗಂಧದ ತುಂಡುಗಳು ಮಳೆಯಿಂದ ತೊಪ್ಪೆಯಾಗಿದ್ದುವು. ಆ ಬ್ರಾಹ್ಮಣನಿಗೆ ಒಣಗಿದ ತುಂಡುಗಳು ಬೇಕಿದ್ದುವು, ಕೊನೆಗೆ ರಾಜ ಕರ್ಣ ಒಂದು ತೀರ್ಮಾನಕ್ಕೆ ಬಂದ ತನ್ನ ರಾಜ ಸಿಂಹಾಸನ ಶ್ರೀಗಂಧದಿಂದ ಮಾಡಲ್ಪಟ್ಟಿರು ವುದು. ಅದು ಚೆನ್ನಾಗಿ ಒಣಗಿರುವುದೇ ತನ್ನ ಸೇವಕರನ್ನು ತಕ್ಷಣ ಕರೆದು, ಸಿಂಹಾಸನದಿಂದ ಶ್ರೀಗಂಧದ ತುಂಡುಗಳನ್ನು ತೆಗೆದುಕೊಡಲು ಆಜ್ಞಾಪಿಸಿದ, ಈ ರೀತಿ ಮಾಡಿದ್ದರಿಂದ ಆ ಬ್ರಾಹ್ಮಣನ ತಂದೆಯ ಅಗ್ನಿ ಸಂಸ್ಕಾರ ಶ್ರೀಗಂಧದ ಮರದಿಂದಲೇ ನೆರವೇರಿತು. ಶ್ರೀ ಗಂಧದ ಮರದಿಂದ ಮಾಡಿದ ಸಿಂಹಾಸನ (ಧರ್ಮರಾಯನ) ರಾಜಯುಧಿಷ್ಠರನ ಬಳಿಯು ಇತ್ತು. ಆದರೆ ಆ ಸಂದರ್ಭದ ಜ್ಞಾನ,ಮನಸ್ಸಿನ ಔದಾರ್ಯದ ಕೊರತೆಯಿಂದ ಆ ಬ್ರಾಹ್ಮಣನಿಗೆ ಶ್ರೀ ಗಂಧ ದೊರಕಲಿಲ್ಲ. ಈ ರಾಜ ಆ ಮಹಾ ದಾನದಿಂದ ವಂಚಿತನಾದ, ಶ್ರೇಯಸ್ಸು ಕರ್ಣನ ಪಾಲಾಯಿತು. ಇದರಿಂದಾಗಿ ಕರ್ಣನಿಗೆ ದಾನವೀರ/ ದಾನಶೂರ ಎಂಬ ಪದವಿಯೂ ಸಹ ದೊರಕಿತು.

ಶಾಸ್ತ್ರಗಳಲ್ಲಿ ದಾನಕ್ಕಾಗಿ ಸ್ಥಳ, ಕಾಲ ಮತ್ತು ಪಾತ್ರದ ಬಗ್ಗೆಯೂ ವಿಸ್ತೃತವಾದ ವರ್ಣನೆ ವಿವರವಾಗಿದೆ. ದಾನವನ್ನು ಯಾವುದೇ ಶುಭಸ್ಥಳದಲ್ಲಿ ಅಂದರೆ ಪುಣ್ಯಕ್ಷೇತ್ರದಲ್ಲಿ, ಶುಭ ಕಾಲದಲ್ಲಿ, ಒಳ್ಳೆಯ ಮುಹೂರ್ತದಲ್ಲಿ ಸುಪಾತ್ರನಾದವನಿಗೆ ಕೊಡಬೇಕು. ಇದೊಂದು ಅತ್ಯಂತ ಅರ್ಹವಾದ ವಿಷಯ. ಆದರೆ ಸಂದರ್ಭ ಒದಗಿದಾಗ ಅದನ್ನೇ ಶುಭ ಘಳಿಗೆಯೆಂದು, ಇರುವುದನ್ನೇ ಪುಣ್ಯಕ್ಷೇತ್ರವೆಂದು,ಶುಭ ಮುಹೂರ್ತವೆಂದು, ಆತನೇ ಸುಪಾತ್ರನೆಂದು ತಿಳಿದು ದಾನಮಾಡಬೇಕು. ಇದಕ್ಕಾಗಿಯೇ ವಿಶೇಷ ಮಹತ್ವವಿದೆ. ವಿಶೇಷವಾಗಿ ಆಪತ್ಕಾಲದಲ್ಲಿ ಕೂಡಲೇ ನೊಂದಸಮುದಾಯಕ್ಕೆ ಆಹಾರ,ವಸತಿ, ಭೂಮಿ, ಔಷಧೋಪಚಾರ ಇನ್ನಿತರ ಸಹಾಯವನ್ನು ಮಾಡುತ್ತಾರೆ. ಈ ತೆರನ ದಾನ ವೈಯಕ್ತಿಕ ಹಾಗೂ ಸಾಮೂಹಿಕ ಎರಡು ರೀತಿಯಲ್ಲಿಯೂ ನಡೆಯುತ್ತದೆ. ಶಾಸ್ತ್ರ ಹಾಗೂ ಪುರಾಣಗಳಲ್ಲಿ ಅನೇಕ ರೀತಿಯ ದಾನಗಳ (ವಿಭಿನ್ನ) ಸ್ವರೂಪವನ್ನು ವರ್ಣಿಸಿದ್ದಾರೆ.

ದೈನಿಕ ಜೀವನದಲ್ಲಿ ಹೇಗೆ ವೈಯಕ್ತಿಕವಾಗಿ ಮತ್ತು ಸತ್ಕರ್ಮರೂಪದಲ್ಲಿ ಸಹಾಯವಾಗುತ್ತದೋ ಅದರಂತೆಯೇ ದಾನವೂ ಸಹ ನಿತ್ಯ ನಿಯಮಪೂರ್ವಕ ಮಾಡುವಂತದು. ಈ ರೀತಿಯ ದಾನಗಳಲ್ಲಿ ಅನ್ನದಾನವು ವಿಶೇಷ ಮಹತ್ವವನ್ನು ಪಡೆದುಕೊಂಡಿದೆ.ಬೇರೆ ಬೇರೆ ರೀತಿಯ ಹಾಗೂ ವಿಶೇಷ ಸಂದರ್ಭಗಳಲ್ಲಿ ಕೊಡಲ್ಪಡುವ ದಾನವನ್ನು ನೈಮಿತ್ತಿಕ ದಾನ ಎನ್ನುತ್ತಾರೆ. ಶಾಸ್ತ್ರ - ಪುರಾಣಗಳಲ್ಲಿ ಇದನ್ನು ವಿಸ್ತಾರವಾಗಿ ವ್ಯವಸ್ಥೆಯಿಂದ ತಿಳಿಸಿದ್ದಾರೆ. ಸೂರ್ಯ ಹಾಗೂ ಚಂದ್ರಗ್ರಹಣ ಸಂದರ್ಭಗಳಲ್ಲಿ ತಾವು ಇಲ್ಲವೇ ಬೆಳ್ಳಿ ಪಾತ್ರೆಗಳಲ್ಲಿ ಕಪ್ಪು ಎಳ್ಳು, ಚಿನ್ನದ ವಸ್ತು ಮತ್ತು ದ್ರವ್ಯ ಮುಂತಾದುವುಗಳನ್ನು ದಾನ ಮಾಡಬೇಕು. ಏಕಾದಶಿ, ಅಮಾವಾಸ್ಯೆ, ಪೂರ್ಣಿಮೆ, ಸಂಕ್ರಾಂತಿ ಹಾಗೂ ವ್ಯತೀಪಾತ ಮುಂತಾದ ಪುಣ್ಯ ಕಾಲಗಳಲ್ಲಿ ದಾನಕ್ಕೆ ವಿಶೇಷ ಮಹತ್ವ ಪ್ರತಿಪಾದಿತವಾಗಿದೆ. ಈ ಸಂದರ್ಭಗಳಲ್ಲಿ ಅನ್ನದಾನ, ದ್ರವ್ಯದಾನ, ಸ್ವರ್ಣದಾನ, ಭೂದಾನ ಹಾಗೂ ಗೋದಾನ ಮುಂತಾದವುಗಳಿಗೆ ವಿಶೇಷ ಮಹತ್ವವಿದೆ. ಮನುಷ್ಯನ ಆಶೋತ್ತರಗಳನ್ನು ಪೂರೈಸುವ ಕೆಲವು ದಾನಗಳ ವರ್ಣನೆಯೂ ಸಹ ವೇದ ಪುರಾಣಗಳಲ್ಲಿ ಕಾಣುತ್ತದೆ. ಇದರಲ್ಲಿ ತುಲಾದಾನ, ಗೋದಾನ, ಭೂಮಿ ದಾನ, ಸುವರ್ಣದಾನ ಘಟಾದಾನ ಮುಂತಾದವು. ಅಷ್ಟ, ದಶ ಹಾಗೂ ಷೋಡಶ ಮಹಾದಾನಗಳು ಎಂದು ಪರಿಗಣಿತವಾಗಿವೆ. ಇವೆಲ್ಲವೂ ಆಸೆ ಈಡೇರಿಕೆಗಳಿಗಾಗಿದ್ದರೂ ಸಹ ನಿಃಸ್ವಾರ್ಥಭಾವದಿಂದ ಭಗವಂತನನ್ನು ತೃಪ್ತಿಪಡಿಸಲು ಮಾಡಿದ್ದಾರೆ, ಭಗವರ್ಪಣ ಬುದ್ಧಿಯಿಂದ ಆಗಿದ್ದಾರೆ ಬ್ರಹ್ಮ ಸಮಾಧಿಯಲ್ಲಿ ಪರಿಣತವಾಗಿ ಭಗವತ್ಪ್ರಾಪ್ತಿಯನ್ನು ಹೊಂದಲು ವಿಶೇಷವಾಗಿ ಸಹಾಯಕವೆಂದು ಸಿದ್ಧಿಸಲ್ಪಟ್ಟಿವೆ.

ಇನ್ನು ಕೆಲವು ದಾನಗಳು ಬಹುಜನ ಹಿಸಾಯ - ಬಹುಜನ ಸುಖಾಯ' ಭಾವನೆಯಿಂದ ಸರ್ವ ಸಾಮಾನ್ಯರ ಹಿತಕ್ಕಾಗಿ ಮಾಡುವ ಪರಂಪರೆ ಉಳ್ಳವು. ದೇವಾಲಯ, ವಿದ್ಯಾಲಯ, ಔಷಧಾಲಯ ಭೋಜನಾಲಯ (ಅನ್ನಛತ್ರ.) ಅನಾಥಾಲಯ, ಗೋಶಾಲೆ, ಧರ್ಮಶಾಲೆ, ಕೆರೆಕಟ್ಟೆ ಬಾವಿ ಮುಂತಾದ ಸರ್ವಜನೋಪಯೋಗಿ ಸ್ಥಳಗಳ ನಿರ್ಮಾಣ ಮುಂತಾದ ಕಾರ್ಯಗಳು ನ್ಯಾಯವಾದ ರೀತಿಯ ಸಂಪಾದನೆಯಲ್ಲಿ, ಕೀರ್ತಿಯ ಆಸೆಯಿಲ್ಲದೆ ಭಗವತ್ಪ್ರತ್ಯರ್ಥ ಮಾಡಿದ್ದಾದರೆ ಪರಮ ಕಲ್ಯಾಣಕರವೆಂದು ನಿಶ್ಚಯಿಸಲ್ಪಟ್ಟಿದೆ. ಸಾಮಾನ್ಯವಾಗಿ ನ್ಯಾಯಯುತವಾಗಿ ಸಂಪಾದಿಸಿದ ಹಣದ 1/10 ಭಾಗವನ್ನು ಬುದ್ಧಿವಂತರು ದಾನಕಾರ್ಯಗಳಲ್ಲಿ ಭಗವಂತನ ಸಂತೃಪ್ತಿಗಾಗಿ ತೊಡಗಿಸಬೇಕು.

ನ್ಯಾಯೋಪಾರ್ಜಿತವಿತ್ತಸ್ಯ ದಶಮಾಂಶೇನ ಧೀಮತಾ ।
ಕರ್ತವ್ಯೋ ವಿನಿಯೋಗಶ್ಚ ಈಶಪ್ರೀತ್ಯರ್ಥಮೇವ ಚ ॥

ಅನ್ಯಾಯವಾಗಿ ಸಂಪಾದಿಸಿದ ಹಣವನ್ನು ದಾನ ಮಾಡುವುದರಿಂದ ಯಾವುದೇ ಪುಣ್ಯವಿಲ್ಲ. ಈ ಮಾತು 'ನ್ಯಾಯೋಪಾರ್ಜಿತವಿತ್ತಸ್ಯ, ಎಂಬ ವಚನದಿಂದ ಸ್ಪಷ್ಟವಾಗುತ್ತದೆ. ದಾನ ಕೊಡುವ ಹೆಮ್ಮೆ ಹಾಗೂ ತೆಗೆದುಕೊಳ್ಳುವವನಿಗೆ ಉಪಕಾರದ ಭಾವನೆ ಹುಟ್ಟಬಾರದು. ಹಾಗೂ ತೆಗೆದುಕೊಳ್ಳುವವನಿಗೆ ಉಪಕಾರದ ಭಾವನೆ ಹುಟ್ಟಬಾರದು ಹಾಗಾಗಿ ಈ ಶ್ಲೋಕದಲ್ಲಿ 'ಕರ್ತವ್ಯಃ ಪದ ಪ್ರಯೋಗವಾಗಿದೆ. ಅಂದರೆ, ಹಣದ ಇಂತಿಷ್ಟು ಭಾಗವನ್ನು ದಾನಮಾಡುವುದು ಮನುಷ್ಯನ ಕರ್ತವ್ಯ. ಮನುಷ್ಯನ ಮುಖ್ಯ ಗುರಿ, ದೇವರ ಸಂತೃಪ್ತಿಯನ್ನು ಪಡೆಯುವುದು. ಆದ್ದರಿಂದ ದಾನರೂಪದ ಕರ್ತವ್ಯವನ್ನು ಪಾಲಿಸುತ್ತಾ ಭಗವದ್ ಪ್ರೀತಿಯನ್ನು ಇರಿಸಿಕೊಳ್ಳುವುದೂ ಸಹ ಅವಶ್ಯಕ. ಅದರಿಂದ - ಕರ್ತವ್ಯೋ ವಿನಿಯೋಗಶ್ಚ ಈಶ ಪ್ರೀತ್ಯರ್ಥಮೋವಚ' ಎನ್ನುವ ಶಬ್ದ ಪ್ರಯೋಗವಾಗಿದೆ. ಒಬ್ಬನ ಬಳಿ ಒಂದು ಸಾವಿರ ರೂಪಾಯಿಗಳಿದ್ದರೆ, ಅದರಲ್ಲಿ ಒಂದು ನೂರು ರೂಪಾಯಿ ದಾನಮಾಡಿದರೆ ಉಳಿದ 900 ರೂ ಗಳಲ್ಲಿಯೇ ಅವನ ಮಮತೆ ಮತ್ತು ಆಸಕ್ತಿ ಇರುತ್ತದೆ. ಹೀಗೆ ದಾನ

ಮಮತೆ ಹಾಗೂ ಆಸಕ್ತಿಯನ್ನು ಕಡಿಮೆಗೊಳಿಸಿ ಅಂತಃ ಕರಣದ ಶುದ್ಧಿ ರೂಪದ ಪ್ರತ್ಯಕ್ಷ ಫಲವನ್ನು ನೀಡುತ್ತದೆ. ಶಾಸ್ತ್ರ ಪ್ರಮಾಣಾನುಸಾರ ವೈಕುಂಠಲೋಕದ ಪ್ರಾಪ್ತಿರೂಪದ ಅಪ್ರತ್ಯಕ್ಷ ಫಲವನ್ನೂ ಸಹ ಕರುಣಿಸುತ್ತದೆ.

ಸಂಪಾದಿಸಿದ ಹತ್ತರಲ್ಲಿ ಒಂದು ಭಾಗ ಹಣವನ್ನು ದಾನ ಮಾಡುವ ಈ ವಿಧಾನ ಸಾಮಾನ್ಯ ಜನಗಳ ಯಾದಿಯಲ್ಲಿ ಮಾಡಲ್ಪಟ್ಟಿದೆ. ಆದರೆ ವೈಭವಶಾಲಿಗಳಾದ, ಶ್ರೀಮಂತರಾದ ಮತ್ತು ಔದಾರ್ಯವುಳ್ಳ ಜನಗಳಿಗಾದರೋ, ತಾವು ಸಂಪಾದಿಸಿದ ಹಣವನ್ನು ಐದು ಭಾಗಗಳಾಗಿ ಹಂಚಬೇಕು.

"ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯ ಚ ।
ಪಶ್ಚಧಾ ವಿಭಜನ್ ವಿತ್ತಿಮಿಹಾಮುತ್ರ ಚ ಮೋದತೆ॥

ಧರ್ಮ ಯಶಸ್ಸು, ಅರ್ಥ (ವ್ಯಾಪಾರ ಮುಂತಾದ ಬದುಕು), ಕಾಮ (ಬದುಕಿನ ಉಪಯೋಗಕರ ಭೋಗ), ಸ್ವಜನ (ಕುಟುಂಬ) ಕ್ಕಾಗಿ ಹೀಗೆ ಐದು ರೀತಿಯಲ್ಲಿ ಹಣವನ್ನು ವಿಭಜಿಸುವವನು ಈ ಜಗತ್ತಿನಲ್ಲಿ ಮತ್ತು ಪರಲೋಕದಲ್ಲಿಯೂ ಸಹ ಆನಂದವನ್ನು ಪಡೆಯತ್ತಾನೆ. ಇಲ್ಲಿ ವ್ಯಾಪಾರ ಮುಂತಾದ ಆಜೀವಿಕೆಗಾಗಿ ಹಣವನ್ನು ವಿಭಜಿಸಿರುವುದು, ಬದುಕಿನ ಸಾಧನಗಳು ನಾಶವಾಗದಿರಲೆಂದು. ಭಾಗವತದಲ್ಲಿ ಒಂದು ವಿಷಯ ಸ್ಪಷ್ಟ ಪಡಿಸಿದೆ:- ಯಾವ ಸರ್ವಸ್ವ ದಾನದಿಂದ ಬದುಕೂ ನಾಶವಾಗುತ್ತದೋ ಅದನ್ನು ಬುದ್ಧಿವಂತನಾದವನು ಪ್ರಶಂಸೆಮಾಡಲಾರ, ಬದುಕಿನ ಸೌಕರ್ಯ ಸಲಕರಣೆಗಳಾದ ಮೇಲೆಯೇ ಮನುಷ್ಯ ದಾನ, ಯಜ್ಞ, ತಪಸ್ಸು ಮುಂತಾದ ಶುಭ ಕೆಲಸಗಳಿಗೆ ಸಮರ್ಥನಾಗುತ್ತಾನೆ.

ನ ತದ್ದಾನಂ ಪ್ರಶಂಸಂತಿ ಯೇನ ವೃತ್ತಿರ್ವಿಪದ್ಯತೇ।
ದಾನಂ ಯಜ್ಞಸ್ತಪಃ ಕರ್ಮ ಲೋಕೇ ವೃತ್ತಿಮತೋ ಯತಃ॥

ಯಾರು ಅತ್ಯಂತ ಬಡವನೋ, ಅನಾವಶ್ಯಕವಾಗಿ ಒಂದು ಪೈಸೆಯನ್ನೂ ಖರ್ಚುಮಾಡುವುದಿಲ್ಲವೋ, ಬಹಳ ಕಷ್ಟದಿಂದ ತನ್ನ ಕುಟುಂಬದ ಪೋಷಣೆ ಮಾಡುತ್ತಾನೋ ಅಂತವರಿಗೆ (ಅಂತವರು) ದಾನ ಮಾಡಲು ವಿಧಿಯನ್ನು ಶಾಸ್ತ್ರ ಮಾಡುವುದಿಲ್ಲ. ಅಷ್ಟೇ ಅಲ್ಲ. ಪುಣ್ಯ ಲೋಭದಿಂದ ಅವಶ್ಯವಾಗಿ ಕಾಪಾಡುವ ವೃದ್ಧ ತಂದೆತಾಯಿಗಳ ಹಾಗೂ ಸಾಧ್ವಿ ಪತ್ನಿ ಮತ್ತು ಚಿಕ್ಕ ಮಕ್ಕಳನ್ನು ಸಾಕದೆ, ಅವರನ್ನು ಉಪವಾಸ ಕೆಡವಿ ದಾನ ಮಾಡಿದ್ದಾದರೆ ಅಂತವರಿಗೆ ಪುಣ್ಯದ ಬದಲು ಪಾಪವೇ ಸುತ್ತಿ ಕೊಳ್ಳುತ್ತದೆ.

ಶಕ್ತಃ ಪರಜನೇ ದಾತಾ ಸ್ವಜನೇ ದುಃಖಜೀವಿನಿ।
ಮಧ್ವಾಪಾತೋ ವಿಷಾಸ್ವಾದ ಃ ಸ ಧರ್ಮ ಪ್ರತಿರೂಪಕಃ॥

ಶ್ರೀಮಂತನಾದವನು ತನ್ನ ಸ್ವಜನ - ಕುಟುಂಬದವರು ಕಷ್ಟದಿಂದ (ದುಃಖಿತರಾಗಿ) ಬದುಕುತ್ತಿರುವಾಗ ಅವರನ್ನು ಕಾಪಾಡಲು ಸಮರ್ಥನಾದರೂ ಸಹ, ಹಾಗೆ ಮಾಡದೆ ಬೇರೊಬ್ಬರಿಗೆ ದಾನ ಮಾಡಿದ್ದಾದರೆ ಆ ದಾನ ಮಧುಮಿಶ್ರಿತವಾದ ವಿಷದ ರುಚಿಯನ್ನು ನೀಡುತ್ತದೆ. ಧರ್ಮದ ರೂಪದಲ್ಲಿ ಅಧರ್ಮ.

ಶಾಸ್ತ್ರಗಳಲ್ಲಿ ದಾನದ ವಿಷಯವಾಗಿ ಹೇಳಿರುವುದು - ಎಷ್ಟರಲ್ಲಿ ಹೊಟ್ಟೆ ತುಂಬುತ್ತದೋ ಅಷ್ಟಕ್ಕೆ ಮಾತ್ರ ಮನುಷ್ಯ ಅಧಿಕಾರಯುತನಾಗಿರುತ್ತಾನೆ. ಅದಕ್ಕಿಂತಲೂ ಹೆಚ್ಚು ಅಧಿಕಾರ ಬಯಸುವವನು (ಹಕ್ಕು) ಕಳ್ಳನಿದ್ದಂತೆ, ಶಿಕ್ಷೆಗೆ ಅರ್ಹನಾದವನು.

ಯಾವದ್ ಭ್ರಿಯೇತ್ ಜಠರಂ ತಾವತ್ ಸ್ವತ್ವಂ ಹಿ ದೇಹಿನಾಮ್॥
ಅಧಿಕಂ ಯೋಽಭಿ ಮನೇತ ಸಸ್ತೇನೋ ದಂಡಮರ್ಹತಿ ॥

ಭಗವಂತ ಅವತರಿಸಿದ (ಪ್ರಾಕಟ್ಯ) ಸ್ಥಳ, ಬ್ರಹ್ಮನೇ ಮುಂತಾದ ವಿಶಿಷ್ಟ ದೇವತೆಗಳ ಯಜ್ಞ ಭೂಮಿಗಳು ಮತ್ತು ಕ್ಷೇತ್ರ, ವಿಶಿಷ್ಟ ನದಿಗಳ ಸಂಗಮ ಹಾಗೂ ಪವಿತ್ರವಾದ ವನ, ಪರ್ವತ, ದೇವಖಾತ, ಝರಿ, ನದಿ ಹಾಗೂ ಪ್ರಭಾವಶಾಲಿ ನಂತರ, ಭಕ್ತರ, ಋಷಿ -ಮುನಿಗಳ - ಮಹಾತ್ಮರ ತಪಃ ಸ್ಥಳಗಳು ಮತ್ತು ಸಾಧಕರ ಸಾಧನಾಕ್ಷೇತ್ರಗಳು ಮುಂತಾದವು ಪುಣ್ಯ ಕ್ಷೇತ್ರಗಳೆನಿಸಿಕೊಳ್ಳುತ್ತಾರೆ. ಪುಣ್ಯಸ್ಥಳಗಳಿಗೆ ಹೋಗುವುದರಿಂದ ಸತ್ಸಂಗದ ಜತೆಜತೆಗೇ ಅಲ್ಲಿಯ ಪೂರ್ವೋಕ್ತ ಎಲ್ಲ ತತ್ವಗಳ ಸೂಕ್ಷ್ಮ ತೇಜಸ್ವೀಸಂಸ್ಕಾರಗಳು ಕಾಣಸಿಗುತ್ತದೆ. ಇದರಿಂದ ಪಾಪ ಕಳೆದು ಪುಣ್ಯ ಸಂಚಯಗೊಳ್ಳುತ್ತದೆ.

ಪ್ರಭಾವಾದದ್ಭುತಾದ್ ಭೂಮೇಃ ಸಲಿಲಸ್ಯ ಚ ತೇಜಸಾ।
ಪರಿಗ್ರಹಾನ್ಮುನೀನಾಂ ಚ ತೀರ್ಥಾನಾಂ ಪುಣ್ಯತಾ ಸ್ಮೃತಾ ॥

ಶ್ರದ್ಧೆ ನಂಬಿಕೆಗಳಿಂದ ಪುಣ್ಯಕ್ಷೇತ್ರದ ಫಲ ಹೆಚ್ಚುತ್ತದೆ. ಪುಣ್ಯ ಸ್ಥಳಕ್ಕೆ ಹೋಗುವವರೆಗೆ ಹಾಗೂ ಅಲ್ಲಿ ವಾಸಿಸುವವರೆಗೆ ಪ್ರತಿಗ್ರಹ, ಕಾಮ, ಕ್ರೋಧ, ಲೋಭ, ಮೋಹ, ಮೋಸ, ಪರನಿಂದನೆ ಮತ್ತು ಈರ್ಷ್ಯ ದ್ವೇಷಗಳನ್ನು ಬಿಡಬೇಕು. ಇಂತಹ ಕ್ಷೇತ್ರಗಳಲ್ಲಿ ಪಾಪಮಾಡುವುದರಿಂದ (ಅಕೃತ್ಯ) ಪಾಪದಬುದ್ಧಿ ಹೆಚ್ಚುತ್ತದೆ. ಹಾಗಾಗಿ ಇದರಿಂದ ದೂರವಿರಬೇಕು.

ಭಾರತದ ನಾಲ್ಕು ಧಾಮಗಳು ಮತ್ತು ಏಳೂ ಪುರಿಗಳು (ಊರು) ಭಗವಾನ್ ಶ್ರೀರಾಮ ಮತ್ತು ಶ್ರೀ ಕೃಷ್ಣರ ಜನ್ಮ ಹಾಗೂ ವಾಸ ಸ್ಥಳಗಳಾದ್ದರಿಂದ ಮತ್ತು ಬದರೀಕಾಶ್ರಮ, ರಾಮೇಶ್ವರಮ್ ಮುಂತಾದ ಧಾಮಗಳು ನರನಾರಾಯಣರ ತಪಸ್ಸು ಮಾಡಿದ ಹಾಗೂ ಭಗವಾನ್ ಶ್ರೀರಾಮನೇ ಮುಂತಾದ ದೇವಮಂದಿರಗಳ ಸ್ಥಾಪನೆಯ ಕಾರಣ ಅತ್ಯಂತ ಮಹತ್ವವವನ್ನು ಪಡೆದಿವೆ. ಗಂಗೆ ಮುಂತಾದ ನದಿಗಳ ನಾಮಸ್ಮರಣೆಯಿಂದಲೇ ಸಾಧಕರಿಗೆ ಸಂದೇಶ ಸ್ಫುರಿಸುತ್ತದೆ. ಇದರಂತೆಯೇ ಪುಷ್ಕರ, ಮಾನಸ ಸರೋವರ ಮುಂತಾದವು ಬ್ರಹ್ಮನ ಮನಸ್ಸಿನಿಂದಲೇ ಹುಟ್ಟಿದುವು. ಅವುಗಳ ಮೂಲಕ ಯಜ್ಞ ಮುಂತಾದವುಗಳನ್ನು ಮಾಡುವುದರಿಂದ ಅವು ಮಹಾನ್ ಪುಣ್ಯತೀರ್ಥಗಳು. ಯಾರ ಶರೀರ ಮತ್ತು ಮನಸ್ಸು ಸಂಯಮದಿಂದಿರುತ್ತದೋ ಅಂತವರಿಗೆ ಈ ಪುಣ್ಯ ತೀರ್ಥಗಳು ವಿಶೇಷ ಫಲವನ್ನು ನೀಡುತ್ತವೆ. ಅಗ್ನಿ, ಇಂದ್ರ ಮುಂತಾದ ದೇವತೆಗಳ ಮೂಲಕ ಯಜ್ಞ ಮಾಡುವುದು, ಕುರುವಿನ ಮೂಲಕ ತಪಸ್ಸು ಮಾಡುವುದು ಮತ್ತು ಭಗವಾನ್ ಶ್ರೀಕೃಷ್ಣನ ಗೀತೋಪದೇಶದಿಂದ ಕುರುಕ್ಷೇತ್ರದ ವಿಶೇಷತೆ ಹೆಚ್ಚಿದೆ.

ಗಣಪತಿ ಮುಂತಾದ ದೇವತೆಗಳ ಹಾಗೂ ಋಷಿಮುನಿಗಳು ಪಿತರ, ಸಂತರ, ಬ್ರಾಹ್ಮಣರ ಸ್ಮರಣೆ, ಪೂಜೆ ಮಾಡಿ ಪುಣ್ಯ ಕ್ಷೇತ್ರಗಳ ಯಾತ್ರೆಯನ್ನು ಪ್ರಾರಂಭಿಸಬೇಕು. ವಾಹನ, ಅನುಕೂಲ ಇತ್ಯಾದಿಗಳ ಕಡೆ ಹೆಚ್ಚು ಗಮನಕೊಡದೆ ಶುದ್ಧ ಭಾವದಿಂದ ಧರ್ಮಾಚರಣೆಯನ್ನು ವೃದ್ಧಿಸಿಕೊಂಡು ಪುಣ್ಯ ಕ್ಷೇತ್ರಗಳಲ್ಲಿ ನೆಲಸಬೇಕು.ದೇವನದಿಗಳಾದ ಗಂಗೆ, ಯಮುನೆ, ಸರಸ್ವತಿ, ನರ್ಮದಾ,ಗೋದಾವರಿ, ಸರಯೂ, ಗೋಮತೀ, ಶಿಪ್ರಾ, ರಾಮಗಂಗಾ,ಸಿಂಧು, ಕಾವೇರಿ,ಪಯೋಷ್ಣೀ ಗಂಡಕೀ, ತಮಸಾ, ಕೃತಮಾಲಾ, ಸಾಬರ ಮತೀ, ಚಂದ್ರಭಾಶಾ, ಇರಾವತೀ ಮುಂತಾದ ಪುಣ್ಯತೀರ್ಥ ನದಿಗಳು ಶ್ರೇಯಸ್ಕರವಾದುವು. ಶಾಸ್ತ್ರಗಳಲ್ಲಿ ಇವುಗಳ ವಿಶೇಷತೆ ಮಹಿಮೆಯನ್ನು ತಿಳಿಸಿದೆ. ಯಥಾಶಕ್ತಿ ಯಥಾವಿಧಿ ಈ ತೀರ್ಥಗಳಲ್ಲಿ ಸ್ನಾನ - ಮಾರ್ಜನ ಮಾಡಿ ಪುಣ್ಯ ಸಂಪಾದಿಸ ಬೇಕು. ನಿತ್ಯ ದೈನಂದಿನ ಕ್ರಿಯೆಗಳ ಜತೆಗೇ ಸಂಸ್ಕಾರಗಳ ಸುಸಂಪನ್ನತೆಗಾಗಿ ನದೀ ರೂಪತೀರ್ಥಗಳ ವಿಶೇಷ ಮಹಿಮೆ ಇದೆ.

- ಸಶೇಷ

## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಅನ್ನದಾನ ಟ್ರಸ್ಟ್



ತಿರುಮಲೆ, ತಿರುಚಾನೂರಿನಲ್ಲಿ ಸಾವಿರಾರು ಭಕ್ತರಿಗೆ ನಿತ್ಯವೂ ಅನ್ನ ಪ್ರಸಾದ ವಿತರಣೆಯ ವಿಷಯವು ಭಕ್ತರಿಗೆ ತಿಳಿದಿದೆ! ಈಗ ತಿ.ತಿ.ದೇ. ಅನ್ನಪ್ರಸಾದ ಟ್ರಸ್ಟ್‌ಗೆ ಭಕ್ತರು, ದಾತರು ವಿರಾಳವನ್ನು ನೀಡಲು ಅವಕಾಶವನ್ನು ತಿ.ತಿ.ದೇ. ಕಲ್ಪಿಸುತ್ತಿದೆ. ಅದಕ್ಕೆ ಒಂದು ದಿನದ ವಿರಾಳ ಪಥಕ ಪ್ರವೇಶಿಸಲಾಗಿದೆ.



**ಅದು ಹೇಗೆಂದರೆ, ಒಂದು ದಿನಕ್ಕೆ ಆಗುವ ಖರ್ಚು**

| | | |
|---|---|---|
| 1) ಅಲ್ಪಾಹಾರ | - | 07 ಲಕ್ಷಗಳು |
| 2) ಮಧ್ಯಾಹ್ನ ಭೋಜನ | - | 11.50 ಲಕ್ಷಗಳು |
| 3) ರಾತ್ರಿ ಭೋಜನ | - | 11.50 ಲಕ್ಷಗಳು |
| ಮೊತ್ತ | - | 30 ಲಕ್ಷಗಳು |



ಈ ಮೊತ್ತವನ್ನು ದಾತರಿಂದ ಸಂಗ್ರಹಿಸಲು ಸಿದ್ಧವಾಗುತ್ತಿದೆ ತಿರುಮಲೆ ತಿರುಪತಿ ದೇವಸ್ಥಾನಗಳ ಅನ್ನಪ್ರಸಾದ ಟ್ರಸ್ಟ್.

ದಾತರು - ವ್ಯಕ್ತಿಗಳು / ಕಂಪನಿಗಳು/ ಸಂಸ್ಥೆಗಳು/ ಟ್ರಸ್ಟ್‌ಗಳು/ ಸಂಯುಕ್ತವಾಗಿಯೂ ಸಹ ಇರಬಹುದು.



ನೀವುಗಳು ಒಂದು ದಿನದ ಮೊತ್ತ ರೂ.30 ಲಕ್ಷಗಳಾಗಲಿ / ಅಲ್ಪಾಹಾರ- 07 ಲಕ್ಷಗಳಾಗಲಿ /ಮಧ್ಯಾಹ್ನ ಭೋಜನ - 11.50 ಲಕ್ಷಗಳಾಗಲಿ/ ರಾತ್ರಿ ಭೋಜನ- 11.50 ಲಕ್ಷಗಳಾಗಲಿ ನೀಡಬಹುದು.

**ಮತ್ತಷ್ಟು ವಿವರಗಳಿಗೆ ಸಂಪ್ರದಿಸಿ :-**

ಸ್ಪೆಷಲ್ ಆಫೀಸರ್, ಶ್ರೀ ವೇಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್,

ತಿ.ತಿ.ದೇ, ಆಡಳಿತ ಭವನ, ಕೆ.ಟಿ. ರೋಡ್, ತಿರುಪತಿ.



ದೂರವಾಣಿ ಸಂಖ್ಯೆ 0877-2264258,2264375,2264237

( **www.tirumala.org** ಈ ವೆಬ್‌ಸೈಟ್‌ನಲ್ಲಿ ಕೂಡ ವಿವರಗಳನ್ನು ಪಡೆಯಬಹುದು)

ಭಾರತ ದೇಶದ ಪ್ರಧಾನ ಮಂತ್ರಿ ಗೌ॥ ಶ್ರೀ ನರೇಂದ್ರ ಮೋದಿಯವರು 09-06-2019 ರಂದು
ತಿರುಮಲ ಸ್ವಾಮಿಯವರ ದರ್ಶನ ಪಡೆದರು. ಅವರೊಂದಿಗೆ ಉಭಯ ರಾಜ್ಯಗಳ
(ಆಂಧ್ರ, ತೆಲಂಗಾಣ) ರಾಜ್ಯಪಾಲರು ಗೌ॥ ಶ್ರೀ ಇ.ಎಸ್.ಎಲ್. ನರಸಿಂಹನ್ ರವರು, ಆಂಧ್ರಪ್ರದೇಶದ ಮುಖ್ಯಮಂತ್ರಿ
ಗೌ॥ ಶ್ರೀ ವೈ. ಎಸ್. ಜಗನ್ ಮೋಹನ್ ರೆಡ್ಡಿ ಯವರು ಪಾಲ್ಗೊಂಡರು.

ಗೌ॥ ಶ್ರೀ ನರೇಂದ್ರ ಮೋದಿಯವರಿಗೆ ಟಿ.ಟಿ.ಡಿ. ಜೀಯರ್ ಸ್ವಾಮಿಯವರಿಂದ
ಆಶೀರ್ವಚನ ಪಡೆದರು, ನಂತರ ತೀರ್ಥ ಪ್ರಸಾದಗಳನ್ನು, ಸ್ವಾಮಿಯವರ ಭಾವಚಿತ್ರವನ್ನು
ಟಿ.ಟಿ.ಡಿ., ಕಾರ್ಯ ನಿರ್ವಹಣಾಧಿಕಾರಿ ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ಮತ್ತು
ತಿರುಮಲ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಎಸ್. ಶ್ರೀನಿವಾಸರಾಜು ಐ.ಎ.ಎಸ್., ನೀಡಿದರು.












ಸ್ವಾಮಿಯವರ ಪ್ರಸಾದವನ್ನು ಸ್ವೀಕರಿಸುತ್ತಿರುವ
ಭಾರತ ದೇಶದ ಪ್ರಧಾನ ಮಂತ್ರಿ
ಗೌ॥ ಶ್ರೀ ನರೇಂದ್ರ ಮೋದಿಯವರು

## ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರಿಗೆ
## 17-05-2019 ರಿಂದ 19-05-2019 ರ ವರೆಗೆ ನಡೆಸಲಾದ
## ವಾರ್ಷಿಕ ವಸಂತೋತ್ಸವದ ದೃಶ್ಯಮಾಲಿಕೆ



## ಸಕಾಲದಲ್ಲಿ ಮಳೆ ಬರಬೇಕೆಂದು
## ದೇಶದಲ್ಲಿ ಸುಭಿಕ್ಷೆ ನೆರವೇರಬೇಕೆಂದು
## ತಿರುಮಲೆ ಪಾರ್ವೇಟು ಮಂಟಪದಲ್ಲಿ
## 2019 ಮೇ 14 ರಿಂದ 18 ರ ವರೆಗೆ
## ತಿ.ತಿ.ದೇ. ಶಾಸ್ತ್ರೋಕ್ತವಾಗಿ ನಿರ್ವಹಿಸಿದ
## ಕಾರೀರಿಷ್ಟಯಾಗ ದ ದೃಶ್ಯಮಾಲಿಕೆ











ಸಕಾಲದಲ್ಲಿ ಮಳೆ ಬರಬೇಕೆಂದು
ದೇಶದಲ್ಲಿ ಸುಭಿಕ್ಷೆ ನೆರವೇರಬೇಕೆಂದು
ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ
2019 ಮೇ 14 ರಿಂದ 18 ರ ವರೆಗೆ
ತಿ.ತಿ.ದೇ. ಶಾಸ್ತ್ರೋಕ್ತವಾಗಿ
ವರುಣ ಜಪವನ್ನು ನಿರ್ವಹಿಸಿದ ದೃಶ್ಯಗಳು









04-06-2019 ರಂದು ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನ ಪಡೆದ
ಭಾರತದೇಶದ ಉಪರಾಷ್ಟ್ರಪತಿ ಗೌ॥ ಶ್ರೀ ಎಮ್. ವೆಂಕಯ್ಯನಾಯುಡು ರವರು



ದಂಪತಿಯರು, ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ
ಶ್ರೀ. ಅನಿಲ್‌ಕುಮಾರ್‌ಸಿಂಘಾಲ್, ಐ.ಎ.ಎಸ್.,ರವರು
ತಿರುಮಲ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ.ಕೆ.ಎಸ್. ಶ್ರೀನಿವಾಸರಾಜು, ಐ.ಎ.ಎಸ್. ರವರು





05-06-2019 ರಂದು ಧರ್ಮಗಿರಿ ವೇದವಿಜ್ಞಾನಪೀಠ, ತಿರುಮಲ ಸಂದರ್ಶಿಸಿದ
ಭಾರತ ದೇಶದ ಉಪರಾಷ್ಟ್ರಪತಿ ಗೌ॥ ಶ್ರೀ. ಎಮ್. ವೆಂಕಯ್ಯನಾಯುಡು ರವರು



ಆಂಧ್ರ ಪ್ರದೇಶ ರಾಜ್ಯದ ನೂತನ ಮುಖ್ಯ ಮಂತ್ರಿಯಾಗಿ ಪ್ರಮಾಣ ಸ್ವೀಕಾರ ಮಾಡುವ ಮುಂಚೆ ದಿನ (29-05-2019)
ಶ್ರೀ ವೆಂಕಟೇಶ್ವರ ಸ್ವಾಮಿಯವರ ದರ್ಶನ ಪಡೆದ ಗೌ॥ ಶ್ರೀ. ವೈ.ಎಸ್. ಜಗನ್ ಮೋಹನ್‌ರೆಡ್ಡಿ



ಅವರಿಗೆ ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ
ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್. ರವರು ತಿರುಮಲ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ
ಶ್ರೀ.ಕೆ.ಎಸ್. ಶ್ರೀನಿವಾಸರಾಜು, ಐ.ಎ.ಎಸ್. ರವರು



# ಮಹಾತ್ಮ ಗೋಕರ್ಣ

- ಶ್ರೀಮತಿ. ಎಸ್. ಕಲ್ಯಾಣಿ

ಪೂರ್ವಕಾಲದಲ್ಲಿ ದಕ್ಷಿಣಭಾರತದ ತುಂಗಭದ್ರಾ ನದಿಯ ದಡದಲ್ಲಿ ಒಂದು ಸುಂದರ ನಗರವಿತ್ತು. ಅಲ್ಲಿ ಆತ್ಮ ದೇವ ಎಂಬ ಒಬ್ಬ ಸದಾಚಾರಿ ವಿದ್ವಾಂಸ ಹಾಗೂ ಶ್ರೀಮಂತ ಬ್ರಾಹ್ಮಣನಿದ್ದ.ಅವನ ಹೆಂಡತಿ ಧುಂಧುಲೀ. ಅವಳು ಬಹಳ ಜಗಳಗಂಟಿ.ಆ ಬ್ರಾಹ್ಮಣ ದಂಪತಿಗಳಿಗೆ ಎಲ್ಲ ರೀತಿಯ ಸಾಂಸಾರಿಕ ಸುಖ ಸಿಕ್ಕಿದ್ದರೂ ಸಹ, ಸಂತಾನವಿಲ್ಲದುದು ಬಹಳ ಬಾಧಿಸುತ್ತಿತ್ತು. ಸಂತಾನ ಪಡೆಯಲು ಬಹಳಷ್ಟು ಪ್ರಯತ್ನಿಸಿದರೂ ಏನೂ ಲಾಭವಾಗಲಿಲ್ಲ. ಒಂದು ದಿನ ಇದೇ ಚಿಂತೆಯಲ್ಲಿ ಬ್ರಾಹ್ಮಣ ಮನೆ ಬಿಟ್ಟು ಕಾಡಿಗೆ ಹೋಗಿ ಕೆರೆಯೊಂದರ ದಡದಲ್ಲಿ ಕುಳಿತು ಬಿಟ್ಟ. ಅಲ್ಲಿ ಅವನಿಗೆ ಒಬ್ಬ ಸನ್ಯಾಸಿ ಮಹಾತ್ಮರ ದರ್ಶನವಾಯಿತು. ಬ್ರಾಹ್ಮಣ ಅವರಿಗೆ ತನ್ನ ದುಃಖದ ವೃತ್ತಾಂತವನ್ನು ತಿಳಿಸಿದ. ಮಹಾತ್ಮರಿಗೆ ಬ್ರಾಹ್ಮಣನ ಮೇಲೆ ಬಹಳ ದಯೆ ಉಂಟಾಯಿತು. ಅವರು ಅವನ ಹಣೆಯ ಮೇಲೆ ಬ್ರಹ್ಮ ಬರೆದಿರುವ ಹಣೇಬರಹವನ್ನು ಪರೀಕ್ಷಿಸಿ: -"ಎಲೈ ಬ್ರಾಹ್ಮಣ! ನಿನ್ನ ಪ್ರಾರಬ್ಧದಲ್ಲಿ ಏಳು ಜನ್ಮದವರೆಗೆ ಸಂತತಿಯ ಯೋಗವಿಲ್ಲ. ಆದ್ದರಿಂದ ನೀನು ಸಂತಾನದ ಯೋಚನೆ, ಚಿಂತೆ ಬಿಟ್ಟು ಭಗವಂತನಲ್ಲಿ ಮನಸ್ಸನ್ನು ತೊಡಗಿಸಿಕೋ" ಎಂದರು.

ಆದರೆ ಬ್ರಾಹ್ಮಣನಿಗೆ ಮಹಾತ್ಮರ ಮಾತುಗಳಿಂದ ಸಂತೃಪ್ತಿಯಾಗಲಿಲ್ಲ. "ಮಹಾಸ್ವಾಮಿ! ನನಗೆ ನಿಮ್ಮ ಜ್ಞಾನ ಬೇಕಿಲ್ಲ.ನನಗೆ ಸಂತಾನವನ್ನು ಕರುಣಿಸಿ. ಇಲ್ಲವಾದರೆ ನಾನೀಗಲೇ ನಿಮ್ಮೆದುರಿಗೇ ಪ್ರಾಣತ್ಯಾಗ ಮಾಡಿಕೊಳ್ಳುತ್ತೇನೆ ಎಂದ." ಬ್ರಾಹ್ಮಣನ ಈ ಹಠವನ್ನು ಕಂಡು ಮಹಾತ್ಮರು - "ನೀನು ಈ ರೀತಿ ಹಠಮಾಡುವುದು ಸರಿಯಲ್ಲ. ಬ್ರಹ್ಮನ ಬರಹದ ವಿರುದ್ಧವಾಗಿಯೂ ನಿನಗೆ ಮಕ್ಕಳಾದರೆ ಸುಖವಿಲ್ಲ. ಆದರೂ ನೀನು ಒಪ್ಪದಿದ್ದರೆ ಈ ಹಣ್ಣನ್ನು ತೆಗೆದುಕೊಂಡು ಹೋಗು.ಮನೆಗೆ ತೆಗೆದುಕೊಂಡು ಹೋಗಿ ನಿನ್ನ ಪತ್ನಿಗೆ ತಿನ್ನಿಸು. ಇದರಿಂದ ನಿನಗೆ ಪುತ್ರ ಪ್ರಾಪ್ತಿಯಾಗುತ್ತದೆ. ಆದರೆ ಆ ಮಗು ಪ್ರಾಪ್ತವಾಗುವವರೆಗೆ ನಿನ್ನ ಪತ್ನಿ ಪವಿತ್ರಳಾಗಿರಬೇಕು. ಸತ್ಯವನ್ನು ಹೇಳಿ,ದಾನ ಮಾಡಿ ಮತ್ತು ಒಪ್ಪೊತ್ತು (ಒಂದು ಹೊತ್ತು) ಊಟಮಾಡಿ ಜೀವನ ನಡೆಸಿ ಇದರಿಂದ ನಿಮಗೆ ಒಳ್ಳೆಯ ಸಂತಾನವಾಗುತ್ತದೆ." ಎಂದು ಹೇಳಿದವರೇ ಆ ಬ್ರಾಹ್ಮಣನಿಗೆ ಒಂದು ಹಣ್ಣನ್ನು ಕೊಟ್ಟರು.

ಬ್ರಾಹ್ಮಣ ಆ ಹಣ್ಣು ತೆಗೆದುಕೊಂಡು ಹೋಗಿ ತನ್ನ ಪತ್ನಿಗೆ ಕೊಟ್ಟ. ಅವನ ಹೆಂಡತಿ; ಹಣ್ಣು ತಿನ್ನುವುದರಿಂದ ನಾನು ನಿಯಮಪೂರ್ವಕ ಇರಬೇಕು. ಇದು ಗರ್ಭಧಾರಣೆಗಿಂತಲೂ ಕಷ್ಟ ಮಗು ಹುಟ್ಟಿದ ಮೇಲೆ ಅದರ ಲಾಲನೆ - ಪಾಲನೆಯಲ್ಲಿ ಬಹಳ ತೊಡಕು ಎದುರಿಸಬೇಕು. ಇದಕ್ಕಿಂತ ಬಂಜೆಯಾಗಿರುವುದೇ ಮೇಲೆ ಎಂದು ಚಿಂತಿಸಿದಳು. ಹೀಗೆಂದು ಕೊಂಡವಳೇ ಆ ಹಣ್ಣನ್ನು ತನ್ನ ಹಸುವಿಗೆ



ಈ ಹಣ್ಣನ್ನು ತೆಗೆದುಕೊಂಡು ಹೋಗು.ಮನೆಗೆ ತೆಗೆದುಕೊಂಡು ಹೋಗಿ ನಿನ್ನ ಪತ್ನಿಗೆ ತಿನ್ನಿಸು. ಇದರಿಂದ ನಿನಗೆ ಪುತ್ರ ಪ್ರಾಪ್ತಿಯಾಗುತ್ತದೆ.ಆದರೆ ಆ ಮಗು ಪ್ರಾಪ್ತವಾಗುವವರೆಗೆ ನಿನ್ನ ಪತ್ನಿ ಪವಿತ್ರಳಾಗಿರಬೇಕು. ಸತ್ಯವನ್ನು ಹೇಳಿ,ದಾನ ಮಾಡಿ ಮತ್ತು ಒಪ್ಪೊತ್ತು (ಒಂದು ಹೊತ್ತು) ಊಟಮಾಡಿ ಜೀವನ ನಡೆಸಿ ಇದರಿಂದ ನಿಮಗೆ ಒಳ್ಳೆಯ ಸಂತಾನವಾಗುತ್ತದೆ." ಎಂದು ಹೇಳಿದವರೇ ಆ ಬ್ರಾಹ್ಮಣನಿಗೆ ಒಂದು ಹಣ್ಣನ್ನು ಕೊಟ್ಟರು.

ತಿನ್ನಿಸಿದಳು.ತಾನೇ ಹಣ್ಣು ತಿಂದೆ ಎಂದು ಪತಿಗೆ ಸುಳ್ಳು ಹೇಳಿದಳು.ಅದೇ ಸಮಯಕ್ಕೆ ಅವಳ ತಂಗಿ ಗರ್ಭವತಿಯಾದಳು. ಅವಳಿಗೆ ಹುಟ್ಟುವ ಮಗುವನ್ನು ತನ್ನಲ್ಲಿ ಬಿಟ್ಟು ಬಿಡಬೇಕೆಂದು ಧುಂಧುಲಿ ಈ ಮೊದಲೇ ಮಾತಾಡಿಕೊಂಡಿದ್ದಳು. ತಂಗಿಗೆ ಸಮಯಕ್ಕೆ ಸರಿಯಾಗಿ ಗಂಡು ಮಗು ಜನಿಸಿತು.ಅವಳು ತಂದು ಅಕ್ಕನ ಬಳಿ ಬಿಟ್ಟಳು.ಹೊರ ಜಗತ್ತಿಗೆ ಧುಂಧುಲಿಗೆ ಮಗ ಹುಟ್ಟಿದನೆಂದೂ, ಅದಕ್ಕೆ ಧುಂಧು ಕಾರಿ ಎಂದು ಹೆಸರಿಟ್ಟಿರುವುದಾಗಿ ಪ್ರಚಾರವಾಯಿತು.

ಮೂರು ತಿಂಗಳ ನಂತರ ಆ ಹಸುವಿಗೂ ಒಂದು ಮಗು ಹುಟ್ಟಿತು. ಅದರ ಅವಯವಗಳೆಲ್ಲ ಮನುಷ್ಯನಂತೆಯೇ ಇದ್ದವು. ಆದರೆ ಅದರ ಕಿವಿಗಳು ಮಾತ್ರ ಹಸುವಿನ ಕಿವಿಗಳಂತಿದ್ದ. ಹಾಗಾಗಿ ಆ ಮಗುವಿಗೆ ಗೋಕರ್ಣ ಎಂದು ನಾಮ ಕರಣವಾಯಿತು ಇವನೇ ನಮ್ಮ ಚರಿತ್ರೆಯ ನಾಯಕ, ಗೋಕರ್ಣ ನೋಡಲು ಬಹಳ ಸುಂದರ ತೇಜಸ್ವಿ ಮತ್ತು ಬುದ್ಧಿವಂತನಾಗಿದ್ದ. ಸಣ್ಣವಯಸ್ಸಿನಲ್ಲಿಯೇ ದೊಡ್ಡ ವಿದ್ವಾಂಸನೂ ಹಾಗೂ ಜ್ಞಾನಿಯೂ ಆದ. ಇತ್ತ ಧುಂಧುಕಾರಿ ಬಹಳ ದುಃಚ್ಚಾರಿತ್ರ್ಯ ಉಳ್ಳುವನೂ, ಆಚಾರ ಹೀನನೂ, ಕ್ರೋಧಿಯೂ, ಕಳ್ಳನೂ, ನಿರ್ದೆಯಿಯೂ ಮತ್ತು ಲಂಪಬನೂ ಆದ. ತಾಯಿ - ತಂದೆಗಳಿಗೆ ಬಹಳ ವ್ಯಸನಕ್ಕೆ ಕಾರಣನಾದ.ಮನೆಯಲ್ಲಿ ಹಣವನ್ನು ಕದ್ದು ಅನ್ಯಸ್ತ್ರೀಯರಿಗೆ ಕೊಟ್ಟು ಬಿಡುತ್ತಿದ್ದ. ಆತ್ಮದೇವ ಇವನ ವರ್ತನೆಯಿಂದ ದುಃಖಗೊಂಡು ಅಳತೊಡಗಿದ. ಆಗ ಗೋಕರ್ಣ ಅವರಿಗೆ ತಿಳುವಳಿಕೆ ಹೇಳಿ, ಜ್ಞಾನೋಪದೇಶಮಾಡಿದ ಮಗನ ಉಪದೇಶದಿಂದ ಪ್ರಭಾವಿತನಾದ ವೃದ್ಧ ಬ್ರಾಹ್ಮಣ ಮನೆಯಿಂದ ಹೊರಟು ಕಾಡಿಗೆ ಹೋಗಿ ಶ್ರೀ ಹರಿಯನ್ನು ಜಪಿಸುತ್ತಾ ಶರೀರ ತ್ಯಾಗ ಮಾಡಿದ.

ತಂದೆಯ ಸಾವಿನ ನಂತರ ಧುಂಧುಕಾರಿ ಅವರ ಸಂಪತ್ತನ್ನೆಲ್ಲ ಹಾಳು ಮಾಡಿದ.ತನ್ನ ತಾಯಿಯನ್ನು ಬಹಳ ಪೀಡಿಸತೊಡಗಿದ. ಇದರಿಂದ ದುಃಖಗೊಂಡ ತಾಯಿ ಹೋಗಿ ಬಾವಿಗೆ ಬಿದ್ದು ಸತ್ತಳು. ಗೋಕರ್ಣನೂ ಸಹ ಇನ್ನು ಮನೆಯಲ್ಲಿರ ಬಾರದೆಂದು ನಿರ್ಧರಿಸಿ ತೀರ್ಥ ಯಾತ್ರೆಯ ನಿಮಿತ್ತ ಮನೆಯಿಂದ ಹೊರಟ. ಅವನಿಗೆ ತಾಯಿಯ ಸಾವಾಗಲೀ, ತಂದೆ ಕಾಡಿಗೆ ಹೋಗಿ ಕಣ್ಮರೆಯಾಗಿದ್ದಾಗಲೀ ಮನೆಯ ಸಂಪತ್ತೆಲ್ಲಾ ನಾಶವಾಗಿದ್ದಾಗಲೀ ಸ್ವಲ್ಪವೂ ದುಃಖ ತರಲಿಲ್ಲ.ಏಕೆಂದರೆ, ಅವನಿಗೆ ಸರ್ವದಲ್ಲೂ ಸಮ ಬುದ್ಧಿ ಉಂಟಾಗಿತ್ತು. ಅವನ ದೃಷ್ಟಿಯಲ್ಲಿ ಯಾರೂ ಶತ್ರುಗಳಾಗಲೀ - ಮಿತ್ರರಾಗಲೀ ಇರಲಿಲ್ಲ. ಇತ್ತ ಧುಂಧುಕಾರಿ ಐದು ಮಂದಿ ವೈಶ್ಯೆಯರೊಂದಿಗೆ ಸ್ವಚ್ಛಂದ ಪೂರ್ವಕ ಮನೆಯಲ್ಲಿಯೇ ಇರ ತೊಡಗಿದ. ಒಂದು ಆ ವೈಶ್ಯೆಯರು ಅವನನ್ನು ನಿರ್ದಯೆ ಯಿಂದ ಬಡಿದು ಹಾಕಿದರು. ಅವನ ದೇಹವನ್ನು ಯಾವುದೋ ಒಂದು ಹಳ್ಳಕ್ಕೆ ಬಿಸಾಡಿದರು ಧುಂಧುಕಾರಿ ತನ್ನ ದೂಷಿತ ಕರ್ಮಗಳಿಂದ ಪ್ರೇತಯೋಗಿಯನ್ನು ಹೊಂದಿ ಅವಲ್ಲಿ ಅಂಡಲೆಯುತ್ತಾ ಬಹಳ ದುಃಖವನ್ನು ಅನುಭವಿಸುತ್ತಿದ್ದ. ಗೋಕರ್ಣನ ಕಿವಿಗೆ ಧುಂಧುಕಾರಿಯ ಸಾವಿನ ಸುದ್ಧಿ ಮುಟ್ಟಿದಾಗ ಅಲ್ಲಿಯೇ ಅವನ ಅಂತ್ಯಕ್ರಿಯೆ ಮಾಡಿದ. ಅವನು ಹೋದ ಪುಣ್ಯ ಕ್ಷೇತ್ರಗಳೆಲ್ಲಾ ಬಹಳ ಶ್ರದ್ಧಾ ಪೂರ್ವಕ ಪಿಂಡ ಪ್ರಧಾನ ಮಾಡಿದ.

ಗೋಕರ್ಣ ತೀರ್ಥಯಾತ್ರೆ ಮುಗಿಸಿ ಹಿಂತಿರುಗಿದ. ರಾತ್ರಿ ಮನೆಯಲ್ಲಿ ಮಲಗಲು ಪ್ರಯತ್ನಿಸಿದಾಗ ಪ್ರೇತವಾಗಿದ್ದ ಧುಂಧುಕಾರಿ ಅವನಿಗೆ ಅನೇಕ ರೀತಿಯ ಯಾತನೆ ಮಾಡಲಾರಂಭಿಸಿದ. ಇದು ನಿಜಕ್ಕೂ ಯಾವುದೋ ಪ್ರೇತವೆಂದು ತಿಳಿದ ಗೋಕರ್ಣ, ಬಹಳ ಧೈರ್ಯದಿಂದ ಅದನ್ನು ಕೇಳಿದ:- ನೀನು ಯಾರು? ಯಾಕಾಗಿ ನಿನ್ನ ಸ್ಥಿತಿ ಹೀಗಾಯಿತು. ಇದನ್ನು ಕೇಳಿದ ಧುಂಧಕಾರಿ ಜೋರಾಗಿ ಅಳತೊಡಗಿದ. ಆದರೆ ಎಷ್ಟೋ ಪ್ರಯತ್ನಿಸಿದರೂ ಏನು ಹೇಳಲಾಗಲಿಲ್ಲ. ಆಗ ಗೋಕರ್ಣ ತನ್ನ ಅಂಜಲಿಯಲ್ಲಿ ನೀರು

ತೆಗೆದು ಕೊಂಡು ಆ ಪ್ರೇತದ ಮೇಲೆ ಚಿಮುಕಿಸಿ ಮನಸ್ಸಿನಲ್ಲೇ ಮಂತ್ರ ಜಪಿಸಿದ. ಇದರಿಂದ ಅದು ಪಾಪ ಮುಕ್ತವಾಗಿ ಬಹಳ ನೊಂದ ಧ್ವನಿಯಲ್ಲಿ ತನ್ನ ವೃತ್ತಾಂತವನ್ನೆಲ್ಲಾ ಹೇಳಿ ಕೊಂಡಿತು. ಜತೆಗೆ ಈ ಭಯಂಕರ ಯಾತನೆಯಿಂದ ಬಿಡುಗಡೆಯ ಉಪಾಯವನ್ನೂ ಬೇಡಿತು. ಗಯಾಶ್ರಾದ್ಧದಿಂದಲೂ ಇದಕ್ಕೆ ಮುಕ್ತಿ ಸಿಗದಿದ್ದಾಗ ಬೇರೆ ಅಸಾಧಾರಣ ಉಪಾಯವನ್ನೇ ಯೋಚಿಸಬೇಕೆಂದು ಗೋಕರ್ಣ ಚಿಂತಿಸಿದ ಸಾಧಾರಣ ಉಪಾಯದಿಂದ ಕೆಲಸ ನಡೆಯುವುದಿಲ್ಲವೆಂದು ತಿಳಿದು ಆ ಪ್ರೇತದೊಂದಿಗೆ ಹೇಳಿದ : - ಒಳ್ಳೆಯದು, ಈಗ ನೀನು ಹೊರಟು ಹೋಗು. ನಿನಗಾಗಿ ಯಾವುದಾದರೂ ಬೇರೆ ಉಪಾಯ ಯೋಚಿಸೋಣ, ಭಯ ಬೇಡ ಮರುದಿನ ಗೋಕರ್ಣ ಇದರ ವಿಚಾರ ಹಲವು ವಿದ್ವಾಂಸರು ಹಾಗೂ ಬ್ರಹ್ಮವಾದಿಗಳೊಂದಿಗೆ ಪರಾಮರ್ಶೆ ಮಾಡಿದ. ಅವರೆಲ್ಲರ ಅಭಿಪ್ರಾಯವೆಂದರೆ, ಇದರ ವಿಚಾರವನ್ನು ಭಗವಾನ್ ಸೂರ್ಯ ನಾರಾಯಣನನ್ನು ಕೇಳಿ ತಿಳಿಯುವುದು. ಅವನು ಹೇಳಿದ ಉಪಾಯದಂತೆಯೇ ನಡೆಯುವುದು. ಗೋಕರ್ಣ ಆಗಲೇ ಎಲ್ಲರೆದುರು ಮಂತ್ರಬಲದಿಂದ ಭಗವಾನ್ ಸೂರ್ಯ ದೇವನನ್ನು ಜಪಿಸಿ ಅವನ ಗತಿಯನ್ನು ತಡೆದ. ಜತೆಗೆ ಸ್ತುತಿಯನ್ನು ಮಾಡಿದ. ಈ ವಿಚಾರವಾಗಿ ಪ್ರಶ್ನಿಸಿದ. ಸೂರ್ಯದೇವ ಇದಕ್ಕೆ ಸ್ಪಷ್ಟವಾಗಿ :- " ಇದಕ್ಕೆ ಶ್ರೀ ಮದ್ಭಾಗತವದಿಂದ ಮುಕ್ತಿ ಸಿಗುತ್ತದೆ. ಅದನ್ನು ಏಳು ದಿನಗಳಲ್ಲಿ ಪಠಿಸಬೇಕು." ಉತ್ತರಿಸಿದ. ಇದನ್ನು ಕೇಳಿದ ಗೋಕರ್ಣ ಶ್ರೀ ಮದ್ಭಾಗವತದ ಪಾರಾಯಣಕ್ಕೆ ತೊಡಗಿದ.

ಗೋಕರ್ಣದ ಮೂಲಕ ಶ್ರೀ ಮದ್ಭಾಗವತ ಪಠಣದ ವಿಷಯವನ್ನು ಕೇಳಿ, ಅಕ್ಕ ಪಕ್ಕದ ಹಳ್ಳಿಯ ಬಹಳಷ್ಟು ಜನ ಅಲ್ಲಿಗೆ ಒಂದು ಸೇರಿದರು. ವ್ಯಾಸ ಪೀಠದಲ್ಲಿ ಕುಳಿತು ಗೋಕರ್ಣ ಕಥೆಯನ್ನು ಪ್ರಾರಂಭಿಸಿದಾಗ ಧುಂಧುಕಾರಿ ಪ್ರೇತವೂ ಸಹ ಕಥಾ ಮಂಟಪಕ್ಕೆ ಬಂದಿತು. ಕುಳಿತು ಕೊಳ್ಳಲು ಅತ್ತಿತ್ತ ಜಾಗ ಹುಡುಕಾಡಿತು. ಅಲ್ಲಿ ಏಳು ಹಳ್ಳಿಯ ಒಂದು ಎತ್ತರದ ಬಿದಿರು ನಿಂತಿರುವುದನ್ನು ಕಂಡಿತು. ಆ ಪ್ರೇತ ವಾಯುರೂಪವನ್ನು ಹೊಂದಿ ಅದರ ಮೂಲದ ಒಂದು ಛಿದ್ರದಲ್ಲಿ ನುಗ್ಗಿ ಹೋಗಿ ಕುಳಿತು ಕೊಂಡಿತು. ಸಂಜೆಯಾಗುತ್ತಿದ್ದಂತೆ ಮೊದಲ ದಿನ ಕಥೆ ಮುಗಿಯುತ್ತಲೇ, ಬಿದಿರಿನ ಒಂದು ಗಂಟು ಬಹಳ ಜೋರಾಗಿ ಶಬ್ದ ಮಾಡುತ್ತಾ ಮುರಿದು ಹೋದದ್ದನ್ನು ಜನ ಕಂಡರು. ಎರಡನೆಯ ದಿನ ಎರಡನೆಯ ಗಂಟು, ಮೂರನೆಯ ದಿನ ಮೂರನೆಯ ಗಂಟು ಮುರಿಯಿತು. ಈ ರೀತಿ ಏಳು ದಿನಗಳಲ್ಲಿ ಆ ಬಿದಿರಿನ ಏಳು ಗಂಟುಗಳು ಒಡೆದು ಹೋದವು. ಕಥೆ ಮುಗಿಯುತ್ತಿದ್ದಂತೆಯೇ ಧುಂಧುಕಾರಿ ಪ್ರೇತ ಯೋನಿಯನ್ನು ಬಿಟ್ಟು ದಿವ್ಯರೂಪವನ್ನು ಹೊಂದಿತು. ಅದರ ಕುತ್ತಿಗೆಯಲ್ಲಿ ತುಲಸೀಹಾರ ಇದ್ದುದನ್ನು ಜನ ನೋಡಿದರು. ತಲೆಯಲ್ಲಿ ಕಿರೀಟ ಹೊಳೆಯುತ್ತಾ, ಕಿವಿಗಳಲ್ಲಿ ಕುಂಡಲಗಳು ಶೋಭಿತವಾಗಿದ್ದವು. ಶ್ಯಾಮವರ್ಣದಿಂದ ಕೂಡಿ ಪೀತಾಂಬರವನ್ನು ಧರಿಸಿದ್ದ. ಆತ ಗೋಕರ್ಣನ ಎದುರು ಬಂದು ಕೈಜೋಡಿಸಿ ನಿಂತು :- ಸಹೋದರ ಗೋಕರ್ಣ ! ನೀನು ನನ್ನ ಮೇಲೆ ಅಪಾರ ಕರುಣೆಯನ್ನು ತೋರಿದೆ. ನನ್ನನ್ನು ಈ ಪ್ರೇತಯೋನಿಯಿಂದ ಉಳಿಸಿದೆ. ನಾನೀಗ ಈ ದಿವ್ಯ ಶರೀರವನ್ನು ಹೊಂದಿ ಭಗವಂತನ ಪರಂಧಾಮಕ್ಕೆ ಹೋಗುತ್ತಿದ್ದೇನೆ. ನೋಡು, ನನಗಾಗಿ ಆ ವಿಮಾನ ನಿಂತಿದೆ. ಭಗವಾನ್ ವಿಷ್ಣುವಿನ ಸೇವಕರು ನನ್ನನ್ನು ಕರೆಯುತ್ತಿದ್ದಾರೆ" ಎಂದು ಎಲ್ಲ ಜನರೆದುರಿಗೆ ವಿಮಾನವೇರಿ ವಿಷ್ಣುವಿನ ಪರಂಧಾಮಕ್ಕೆ ಹೊರಟು ಹೋದ.

ಶ್ರಾವಣ ಮಾಸದಲ್ಲಿ ಗೋಕರ್ಣ ಮತ್ತೆ ಅದೇ ರೀತಿಯಲ್ಲಿ ಶ್ರೀ ಮದ್ಭಾಗವತದ ಕತೆಯನ್ನು ಹೇಳಿದ. ಕಥೆ ಸಮಾಪ್ತಿಯ ದಿನ ಸ್ವತಃ ಭಗವಂತ ತನ್ನ ಗಣಂಗಳೊಡನೆ ಅನೇಕ ವಿಮಾನಗಳೊಂದಿಗೆ ಅಲ್ಲಿಗೆ ಬಂದ. ಜಯ ಜಯಕಾರ ಧ್ವನಿ ಇಡೀ ಆಗಸದಲ್ಲಿ ಮೊಳಗಿತು. ಭಗವಂತ ಸ್ವತಃ ತನ್ನ ಪಾಂಚ ಜನ್ಯವನ್ನು ಊದಿದ. ಗೋಕರ್ಣನನ್ನು ಹೃದಯಾಲಿಂಗನ ಮಾಡಿಕೊಂಡು ತನ್ನ ಚತುರ್ಭುಜ ರೂಪ ತೋರಿದ. ನೋಡುತ್ತಿದ್ದಂತೆಯೇ ಮಂಟಪದಲ್ಲಿ ಸೇರಿದ್ದ ಶ್ರೋತೃಗಳ ಗುಂಪೂ ಸಹ ವಿಷ್ಣು ರೂಪವನ್ನು ತಾಳಿದರು. ಆ ಹಳ್ಳಿಯಲ್ಲಿದ್ದವರೆಲ್ಲಾ ಮಹಾತ್ಮ ಗೋಕರ್ಣನ ಕೃಪೆಯಿಂದ ವಿಮಾನದಲ್ಲಿ ಕುಳಿತು ಯೋಗಿಗಳಿಗೇ ದುರ್ಲಭವಾದ ವಿಷ್ಣು ಲೋಕವನ್ನು ಸೇರಿದರು. ಭಕ್ತವತ್ಸಲನಾದ ಭಗವಂತನೂ ಸಹ ತನ್ನ ಭಕ್ತನನ್ನು ಜತೆಯಲ್ಲಿ ಕರೆದುಕೊಂಡು ಗೋಲೋಕಕ್ಕೆ ಹೊರಟುಹೋದ. ಹೀಗೆ ಆ ಮಹಾನ್ ಸಂತ ತನ್ನ ಭಕ್ತಿಯ ಪ್ರಭಾವದಿಂದ ಇಡೀ ಗ್ರಾಮವನ್ನೇ ಉದ್ಧರಿಸಿದ. ಹೇಳಿ, ಭಕ್ತ ಮತ್ತು ಭಗವಂತನಿಗೆ ಜಯವಾಗಲಿ".

(ಆಧಾರ : - ಪದ್ಮಪುರಾಣದಿಂದ)



# ಜಯತೀರ್ಥರ ಹಿರಿಮೆ - ಸಂದೇಶ

- ಪ್ರಣವ

ಭಾರತೀಯ ದಾರ್ಶನಿಕ ಜಗತ್ತಿನ ಆಗಸದಲ್ಲಿ ಮಿನುಗುವ ತಾರೆಗಳು ಹಲವಾರು, ಕಪಿಲ, ಗೌತಮ, ಕಾಣಾದ, ಶಂಕರ, ರಾಮಾನುಜ, ಕುಮಾರಿಲಭಟ್ಟ. ಪ್ರಭಾಕರ, ಉದಯನಾಚಾರ್ಯ ಮೊದಲಾದವರು ವಿಭಿನ್ನ ದಾರ್ಶನಿಕ ಸಂಪ್ರದಾಯಗಳ ಪ್ರವರ್ತಕಾಚಾರ್ಯರೆನಿಸಿದರೆ, ಪ್ರಶಸ್ತ ಪಾದ, ವಾತ್ಸಾಯನ, ವಾಚಸ್ಪತಿಮಿತ್ರ, ಚಿತ್ಸುಖಾಚಾರ್ಯ, ಸುದರ್ಶನ ಸೂರಿ - ಮೊದಲಾದವರು ವಿಭಿನ್ನ ದರ್ಶನ ಪದ್ಧತಿಗಳ ವ್ಯಾಖ್ಯಾಕಾರರೆನಿಸಿ ಆಯಾಯ ದರ್ಶನಗಳ ಅಪೂರ್ವತೆಯನ್ನು ನೆಲೆಯೂರುವಂತೆ ಮಾಡಿದವರು.

ಇಂತಹ ದಾರ್ಶನಿಕ ಸಂಪ್ರದಾಯ ಪ್ರವರ್ತಕಾಚಾರ್ಯರಲ್ಲಿ ಶ್ರೀಮಧ್ವರು ಪ್ರಮುಖರಾಗಿ ಬೆಳಗುವ ಸೂರ್ಯನಂತಿದ್ದಾರೆ. ಅಂತೆಯೇ ದಾರ್ಶನಿಕ ವ್ಯಾಖ್ಯಾಕಾರರ ಮಧ್ಯೆ ಪ್ರಜ್ವಲಿಸುವ ತಾರೆ ಶ್ರೀಜಯತೀರ್ಥರು.ಶ್ರೀಮಧ್ವದರ್ಶನದ ಸೂಕ್ಷ್ಮಾತಿಸೂಕ್ಷ್ಮ ಪ್ರಮೇಯಗಳನ್ನು ಎಳೆ ಎಳೆಯಾಗಿ ಬಿಡಿಸಿ, ಪ್ರತಿವಾದಿಗಳು ಅವುಗಳ (ಅನುಭವ - ತರ್ಕ - ಶ್ರುತಿಗಳ ಸುಭದ್ರ ನೆಲೆಗಟ್ಟಿನಲ್ಲಿ) ಸಮಂಜಸತೆಯನ್ನು ಸ್ವತಃ ಒಪ್ಪುವಂತೆ ಮಾಡುವ ಅದ್ಭುತ ಕೌಶಲ ಶ್ರೀಜಯತೀರ್ಥರದು. ಅನುಭವ-ತರ್ಕ, ಶ್ರುತಿ ಸುಭದ್ರನೆಲೆಗಟ್ಟಾದ ಶ್ರೀಮಧ್ವದರ್ಶನವನ್ನು ಎಂದೆಂದೂ ಅಲ್ಲಾಡದಂತೆ ನಿಲ್ಲಿಸಿದ ವಿಶಿಷ್ಟ ಕೀರ್ತಿ ಅವರಿಗೆ ಸೇರಿದ್ದು.

ಅತಿಸರಳವೆಂದು ತೋರುವ ಶ್ರೀ ಮಧ್ವರ ವಾಕ್ಯಗಳಿಗೆ ಅರ್ಥಗಾಂಭೀರ್ಯವನ್ನೂ, ವಿವಿಧ ರೀತಿಯ ವಿಶಿಷ್ಟ ವ್ಯಾಖ್ಯಾನವನ್ನೂ ನೀಡಿ ಅವುಗಳ ಮಹತ್ವವನ್ನು ಎತ್ತಿ ತೋರಿದ ಶ್ರೀ ಜಯತೀರ್ಥರ ವ್ಯಾಖ್ಯಾನಕುಶಲತೆಯು ಅನು ಪಮ, ಅದ್ಭುತ, ಆದ್ದರಿಂದಲೇ ಅವರಿಗೆ ಟೀಕಾಕೃತ್ಪಾದರೆಂಬ ಹೆಸರು ಅನ್ವರ್ಥ.

ಶ್ರೀ ಜಯತೀರ್ಥರ ವ್ಯಾಖ್ಯೆಗಳಿಗೆ ಟಿಪ್ಪಣಿಗಳನ್ನು ರಚಿಸಿದ ಶ್ರೀ ವ್ಯಾಸರಾಜರು, ಶ್ರೀ ರಾಘವೇಂದ್ರಸ್ವಾಮಿಗಳೇ ಮೊದಲಾದವರು ಶ್ರೀ ಜಯತೀರ್ಥರನ್ನು ಸರ್ವಜ್ಞಕಲ್ಪರೆಂದು ಕರೆದರು. ಶ್ರೀಮಧ್ವರು ಸರ್ವಜ್ಞರು. ಅವರ ಜ್ಞಾನ ಮೇರು ಸದೃಶ್ಯ. ಅದನ್ನು ಹೋಲುವ ಮತ್ತು ಅದರ ಸನಿಹಕ್ಕೆ ಬರುವ ಅಪಾರಜ್ಞಾನವನ್ನು ಪಡೆದವರು ಸರ್ವಜ್ಞಕಲ್ಪರು.

ನದಿಯ ಪ್ರವಾಹವನ್ನು ಮೀರಿದ ಚೈತನ್ಯಪೂರ್ಣ ವಾಗ್ಗಂಗೆ ಶ್ರೀಜಯತೀರ್ಥರ ಮಾತುಗಳು. ನದಿಗೆ ಅಡೆತಡೆಯ ತರಂಗಗಳಿರುವುದುಂಟು. ಜಯತೀರ್ಥರ ಮಾತಿಗೆ ತಡೆಯೇ ಇಲ್ಲ, ಅದೊಂದು ಚೇತೋಹಾರಿ ಅನಂತ ಪ್ರವಾಹ. ಸಿದ್ಧಾಂತ, ಪ್ರಮಾಣಗಳ ಆವ್ಯಾಹತ ತೀರ್ಥಧಾರೆ.

ಶ್ರೀ ಜಯತೀರ್ಥರು ತಮ್ಮ ಪ್ರೌಢ - ಲಲಿತ ಶಾಸ್ತ್ರೀಯ ಶೈಲಿಯಿಂದ ಜಟಿಲವಾದ ಆಧ್ಯಾತ್ಮಿಕ ಸಮಸ್ಯೆ - ಪ್ರಮೇಯಗಳನ್ನು ಎಳೆಎಳೆಯಾಗಿ ಬಿಡಿಸಿ, ಜ್ಞಾನದ ಅಮೃತರಸಧಾರೆಯನ್ನು ಹರಿಸಿ, ಇಹ ಜಗತ್ತಿಗೆ ಅದರ ಪಾನ ಮಾಡಿಸಿದ್ದಾರೆ. ಸುಧಾ ಗ್ರಂಥವಂತೂ ಗಂಗಾ ಪ್ರವಾಹದಂತೆ ಭವ್ಯವಾಗಿ, ಆಕರ್ಷಿತವಾಗಿ, ಚೇತೋಹಾರಿಯಾಗಿ ಹರಿದಿದೆ.

ಶ್ರೀ ಮಜ್ಜಯತೀರ್ಥರ ವಾಣಿ ಕಾಮಧೇನು, ಕಲ್ಪತರುವಿನಂತೆ ಬೇಡಿದ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುವಂತಹುದು.ದುಷ್ಟಕಾಮವೆಂಬ ಮನ್ಮಥನ ಬಾಣವನ್ನು ಮುರಿದು ವೈರಾಗ್ಯಯೋಗ್ಯರನ್ನಾಗಿ ಮಾಡುವಂತಹುದು.

ಶ್ರೀಮದಾಚಾರ್ಯರ ಅವತಾರಕ್ಕಿಂತ ಪ್ರಾಚೀನರಾದ ಶ್ರೀ ಹರ್ಷ, ವಿದ್ಯಾಸಾಗರ, ವಾಚಸ್ಪತಿ, ಭಾಸರ್ವಜ್ಞ, ಉದಯನ-ಇವರೇ ಮೊದಲಾದ ನೂರಾರು ಗ್ರಂಥ ರಚನಕಾರರ ವಿಮರ್ಶೆಯನ್ನು ಟೀಕಾಕೃತ್‌ಪಾದರು ಮಾಡಿದ್ದಾರೆ. ತಮ್ಮ ಕಾಲದವರೆಗೆ ಉಪಲಬ್ಧವಾದ ಎಲ್ಲ ಗ್ರಂಥಗಳನ್ನೂ ವಿಮರ್ಶೆ ಮಾಡಿರುವುದು ಶ್ರೀ ಟೀಕಾಚಾರ್ಯರ ವೈಶಿಷ್ಟ್ಯ.

ಋಗ್ವೇದದಲ್ಲಿ ವೃಷಾಯಯಾನ್ ಎಂಬ ಮಾತು ಬರುತ್ತದೆ. ದೇವೇಂದ್ರನಿಗೆ ವೃಷಭಾಕೃತಿ ಉಂಟು ಎನ್ನುತ್ತದೆ ವೇದವಾಕ್ಯ,ಅಂತೆಯೇ ತ್ರಿಯುಗಹೂತಿಯಾದ ಪರ

ಮಾತ್ಮನು ಧರ್ಮ ಸಂಸ್ಥಾಪನೆ ಮತ್ತು ಸಿದ್ಧಾಂತ ಸ್ಥಾಪನೆಗಾಗಿ ತನ್ನ ಪ್ರಥಮಾಂಗ ಭೂತರಾದ ವಾಯುದೇವರಿಗೆ ಆಜ್ಞಾಪಿಸಿದ ಬಳಿಕ ಶ್ರೀಮನ್ಮಧ್ವರು ಅವತರಿಸಿದರೆಂಬುದು ಪುರಾಣ ಪ್ರಾಮಾಣಿತ, ವಾಯುದೇವರ ಮುಖದಿಂದ ಭಗವತ್ತತ್ವ ಶ್ರವಣ ಕೇಳಲು ದೇವತೆಗಳೇ ಭೂಮಿಗೆ ಬಂದಾಗ ಇಂದ್ರದೇವರು ಎತ್ತಿನ ರೂಪದಲ್ಲಿ ಆನಂದತೀರ್ಥರು ನಿತ್ಯ ಪಠಿಸುವ ಉದ್ಗ್ರಂಥಗಳನ್ನು ಹೊತ್ತರು ಮತ್ತು ಶ್ರವಣಾನಂದ ಪೂರ್ಣರಾದರು ಎಂದೇ ಪ್ರತೀತಿ.

**ಶ್ರೀಮದಾನಂದತೀರ್ಥರನ್ನು ಶಿಷ್ಯರು ಪ್ರಶ್ನಿಸಿದರಂತೆ**

"ಶೇಷದೇವರಿಗೂ ಅಗಮ್ಯ ಎನ್ನಬಹುದಾದ ನಿಮ್ಮ ಗ್ರಂಥ ಸರ್ವಸ್ವದ ಮೂಲಾರ್ಥವನ್ನು ಮುಂದೆ ವಿಶ್ಲೇಷಿಸಿ ಬರೆಯುವವರು ಯಾರು?" ಶ್ರೀ ಮದಾಚಾರ್ಯರು ಕೂಡಲೇ ಸಮೀಪದಲ್ಲಿಯೇ ಇದ್ದ ಎತ್ತನ್ನು ತೋರಿಸಿ ಈ ಎತ್ತು ವ್ಯಾಖ್ಯಾನಿಸುತ್ತದೆ ಎಂದು ಆದೇಶಿಸಿದರಂತೆ.

ಕಾಲಾನುಕ್ರಮದಲ್ಲಿ ದೇಶಪಾಂಡೆಯವರ ಘನರಾವುತ ಕೂಸಾದ ಧೊಂಡು ನರಸಿಂಹನಿಗೆ ಶ್ರೀಮದಕ್ಷೋಭ್ಯತೀರ್ಥ ಶ್ರೀಪಾದರು 'ಕಿಂ ಪಶು ಪೂರ್ವದೇಹೇ' ಎಂದು ಪ್ರಶ್ನಿಸಿದಾಗ ಜ್ಞಾನಸ್ಮೃತಿ ಪಡೆದ ಯತಿಯಾಗಿ ಜಯತೀರ್ಥರು ರೂಪ ತಾಳಿದರಂತೆ. ವಿಂದ್ಯಾವಳಿ ಪರ್ವತ ತಪ್ಪಲಿನಲ್ಲಿ ಹನ್ನೆರಡು ವರುಷಗಳ ಕಠಿಣ ತಪಶ್ಚರ್ಯ ನಡೆಸಿ, ಸಕಲ ವೇದ ವಾಙ್ಮಯನಿಯಾಮಕಳಾದ ದುರ್ಗದೇವಿಯ ಅನುಗ್ರಹ ಪಾತ್ರರಾದರು-ಜಯತೀರ್ಥರು. ಸಂಕ್ಷಿಪ್ತವಾಗಿ ಇದು ಜಯತೀರ್ಥರ ಪೂರ್ವಾಶ್ರಮದ ಹಿನ್ನೆಲೆ.

**ಹರಿದಾಸರು ಕಂಡಂತೆ ಶ್ರೀ ಜಯತೀರ್ಥರು**

ಶ್ರೀ ಜಯತೀರ್ಥರನ್ನು ಕನ್ನಡನಾಡಿನ ಅನೇಕ ಮಂದಿ ಹರಿದಾಸರು ತಮ್ಮ ಕೃತಿಗಳಲ್ಲಿ ಹಾಡಿ ಹೊಗಳಿದ್ದಾರೆ. ಭೋದಪ್ರದ ಮತ್ತು ಮಾರ್ಗಸೂಚಿಯಾದ ಶ್ರೀಜಯತೀರ್ಥರ ಪ್ರತಿಯೊಂದು ಕೃತಿಯೂ ಹರಿದಾಸರುಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಶ್ರೀಬಾದರಾಯಣರು ಆಧ್ಯಾತ್ಮ ಜಗತ್ತಿನಲ್ಲಿ ಹೊರತೆಗೆದ ಜ್ಞಾನೈಶ್ವರ್ಯಕ್ಕೆ ಕುಂದಣಕಾರರಾದವರು ಜಯತೀರ್ಥರು. ಕಾಂತಿಯ ಜ್ಞಾನದೇಗುಲದ ಮಣಿದೀಪವಾದ ಜಯತೀರ್ಥರ ಕೃತಿಗಳು ಕನ್ನಡ ಹರಿದಾಸರುಗಳ ಚಿಂತನೆಗೆ ಪ್ರೇರಕಶಕ್ತಿ.

ಹರಿದಾಸ ಪಂಥ ಕನ್ನಡ ನಾಡಿನಲ್ಲಿ ಶ್ರೀಮಧ್ವಾಚಾರ್ಯದಿಂದ ಆರಂಭವಾಯಿತು. ಭಗವಂತನಲ್ಲಿ ಮಾಡುವ ಅನನ್ಯಶರಣಾಗತಿಭಾವವೇ ಭಕ್ತಿ ವಸ್ತುನಿಷ್ಠ ಯಥಾರ್ಥಜ್ಞಾನ, ನಿರ್ಮಲ ಚಿತ್ತ, ಸದೃಢ ಪ್ರೇಮದಿಂದ ಆರಾಧಿಸುವವನೇ ಭಕ್ತ. ಶ್ರೀಹರಿ ಸದಾಕಾಲ ಭಕ್ತನನ್ನು ಉದ್ಧರಿಸುತ್ತಾನೆ. ಈ ದೃಷ್ಟಿಯಿಂದ ಶ್ರೀಮಧ್ವಾಚಾರ್ಯರು ಬರೆದ ದ್ವಾದಶ ಸ್ತೋತ್ರವನ್ನು ಭಕ್ತಿ ಪಂಥದ ಉಗಮಸ್ಥಾನ ಎಂದು ಹರಿದಾಸರುಗಳು ನಿರ್ಣಯಿಸಿ ಕೃತಿ ರಚಿಸಿರುವುದು ಯತಾರ್ಥವಾಗಿದೆ.

ಕನ್ನಡ ಹರಿದಾಸರುಗಳಿಗೆ ಶ್ರೀಜಯತೀರ್ಥರು ಜ್ಞಾನ ಸುಧೆ ಇದ್ದಂತೆ. ಟೀಕಾಕೃತ್ಪಾದರು ಟೀಕಾಚಾರ್ಯ , ನ್ಯಾಯ ಸುಧಾಕರ, ಸರ್ವಜ್ಞಕಲ್ಪ - ಹೀಗೆ ಕನ್ನಡ ಹರಿದಾಸರು ಜಯತೀರ್ಥರ ತತ್ವಜ್ಞಾನ ಪ್ರಖ್ಯಾತಿಯನ್ನು ಮುಕ್ತಕಂಠದಲ್ಲಿ ಹೊಗಳಿ ಹಾಡಿದ್ದಾರೆ. ಭಾಗವತೋತ್ತಮ ದಾಸಶ್ರೇಷ್ಠರುಗಳು ಜಯತೀರ್ಥರನ್ನು - ವರ್ಣಿಸಿದ ರೀತಿ ಹೀಗಿದೆ.

"ಎದುರಾರೈ ಗುರುವೇ ಸಮರಾರೈ ಮದನಗೋಪಾಲ ಪ್ರಿಯ ಜಯರಾಯ"- ಪರವಾದಿಗಳೆಂಬ ನರಿಗಳಿಗೆ ಸಿಂಹಾದೋಪಾದಿ ಗರ್ಜಿಸಿ ವಾದಿಸುವವರು, ಮಾಯವಾದದ ಕತ್ತಲೆ ಹರಿಸಿದ ಸೂರ್ಯರು ಸ್ವಮತರ ಹೃತ್ಸಂತಾಪ ಓಡಿಸಿ, ವಿಮತರ ಮುಖಕಮಲಗಳ ಬಾಡಿಸಿದ ಚಂದ್ರರು. ತತ್ವಭೋದೆ ಎಂಬ ಹಾಲನ್ನು ಶಿಷ್ಯರೆಂಬ ಕರುಗಳಿಗೆ ಕುಡಿಸಿದ ಕಾಮಧೇನು. ಅಂದು ಸುಧೆ ಪಡೆದ ಇಂದ್ರನಂತೆ ಇಂದು ನ್ಯಾಯ ಸುಧೆ ಪಡೆದವರು. ವನಜನಾಭನ ಗುಣಮಣಿಗಳನ್ನು ತೋರಲು ಟೀಕಾಂಜನ ಹಚ್ಚಿದವರು. ಶ್ರೀಕೃಷ್ಣ ಪಾದಂಬಜಲೋಲರು ನಿಮಗೆ ಎದುರಾರೈ?

ನಮ್ಮ ದೇಶ ಸ್ವತಂತ್ರವಾದ ದಶಕದಲ್ಲಿ Energy is power ಎಂಬ ಮಾತು ಕೇಳಿಬರುತ್ತಿತ್ತು. ಅನಂತರದ ದಶಕದಲ್ಲಿ Education is power ಎಂದು ಕೇಳಿ ಬಂತು. ಈಗ Knowledge is power ಅಥವಾ Information is power ಎಂಬ ಮಾತು ವಿಶ್ವವಿದಿತವಾಗಿದೆ. ಹೇಗೆಂದರೆ 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎಂದು ಗೀತಾ ಸಂದೇಶದ ಮಾತು.

ಜಗತ್ತಿನ ಲಕ್ಷಾವಧಿ ಜನರಿಗೆ, ಅನಾದಿ ಕಾಲದಿಂದ ವಿವಿಧಕ್ಷೇತ್ರಗಳಲ್ಲಿ ವಿಶಿಷ್ಟ ಪರಿಣಿತ ಹೊಂದಿದ ಕವಿಗಳಿಗೆ, ಪಂಡಿತರಿಗೆ, ಸಂಗೀತಗಾರರಿಗೆ,ವಾಗ್ಮಿಗಳಿಗೆ ಗೌರವ ಸಂದಿದೆ. ಅಂತೆಯೇ ಯುಕ್ತಿ ಮತ್ತು ತತ್ವ ಬದ್ಧ ಭಕ್ತಿ ನಿರೂಪಣೆಯ ವಿಮರ್ಶೆಗೆ ಒಬ್ಬ ವಿಮರ್ಶಕನಿಗೆ ಸಕಲ ಗೌರವ ಸಲ್ಲಬಹುದು ಎಂದು ಸಿದ್ಧವಾದದ್ದು ಪವಿತ್ರ ಕ್ಷೇತ್ರ ಯರಗೋಳದಲ್ಲಿರುವ ಶ್ರೀಮಜ್ಜಯತೀರ್ಥರಿಗೆ ಮತ್ತು ಅವರ ಶ್ರೀಮನ್ನ್ಯಾಯ ಸುಧಾ ಗ್ರಂಥಕ್ಕೆ. ಟೀಕಾಚಾರ್ಯರೆಂಬ ಅನ್ವರ್ಥಕ ನಾಮವೇ ಇದೆಲ್ಲವನ್ನು ತಿಳಿಸುತ್ತದೆ. ಸಂಸ್ಕೃತ ತಿಳಿಯದ ಮತ್ತು ವೇದಾಂತ ಪರಿಜ್ಞಾನವಿಲ್ಲದೆ ನಮಗೆ ಅವರ ಬಗೆಗೆ ಅರಿವು ಹಾಗೂ ಶ್ರದ್ಧೆಬರಬೇಕಾದರೆ ಹೀಗೆ ಹೇಳಬಹುದು: ಇಂದಿನ Imagination, logic Presentation, documentaion & group discussion ಇವೆಲ್ಲವುಗಳ ಏಕಮೇ ವಾದ್ವಿತೀಯ ರೂಪವೇ ಶ್ರೀಮಜ್ಜಯತೀರ್ಥರು.

ಸಮಯ, ಸ್ಥಳ ಹಾಗೂ ಆದಾಯದ ಅಭಾವಗಳ ಮಧ್ಯದಲ್ಲಿ ಬದುಕುತ್ತಿರುವ ನಮಗೆ ಸಹಜವಾಗಿ ಸಂಸ್ಕಾರ, ಸತ್ಸಂಗಗಳ ಕೊರತೆ ಕಾಡುತ್ತಿದೆ. ಆದಾಗ್ಯೂ ನಾವುಗಳು ಆಗಾಗ ಸುಧಾ ಓದಿ ಪದಾ ಹೇಳು, ಕಿಂಪಶು ಪೂರ್ವದೇಹಿ, ಮಳಖೇಡ ವೃಂದಾವನ, ಕಾಗಿಣಾನದಿ, ಯರಗೋಳಗುಹೆ - ಹೀಗೆಲ್ಲ ಕೇಳಿರಲು ಸಾಧ್ಯ.

ಎತ್ತಿನ ಅವತಾರ, ಪುಸ್ತಕ ಹೊರುವಿಕೆ, ಸರ್ಪರೂಪ- ಹೀಗೆ ಹಲವಾರು ಶಬ್ಧಗಳು ಈ ಯತಿವರೇಣ್ಯರ ಸುತ್ತ ಆವರಿಸಿವೆ. ಇವರನ್ನು ಯತಿಕುಲ ರನ್ನ, ಭಯಕೃದ್ಧ್ಯ ನಾಶನ,ಸದ್ಗುಣಶೀಲ,ಸುಜನಪಾಲ ಎಂದು ದಾಸರು ಸುಳಾದಿ ಯಲ್ಲಿ ಕೊಂಡಾಡಿದ್ದಾರೆ ಒಟ್ಟಿನಲ್ಲಿ ದ್ವೈತ ವೇದಾಂತದ ಜ್ಞಾನ ನೇಗಿಲು ಎಂದು ಹೇಳಲಾಗುವ ಶ್ರೀಜಯತೀರ್ಥರನ್ನು

ಸೃಷ್ಟಿಯೊಳಗೆ ಇವರ ದರ್ಶನವಾಗದಲೆ
ಸ್ಪಷ್ಟವಾದ ಜ್ಞಾನ ಪುಟ್ಟದಯ್ಯಾ

ಎಂದು ದಾಸರುಗಳು ವರ್ಣಿಸಿದ್ದಾರೆ.ಅಂತಹ ಜ್ಞಾನಿಯ ವೃಂದಾವನ ಮಳಖೇಡದಲ್ಲಿದ್ದು ಅಷಾಢ ಬಹುಳ ಪಂಚಮಿ ಆರಾಧನ ನಡೆಯುತ್ತದೆ. ಕಳೆದ ಆರು ಶತಮಾನ ಗಳಿಂದ ನಡೆಯುತ್ತಿರುವ ಈ ಉತ್ಸವದಲ್ಲಿ ವಿಜಯದಾಸರೇ ಮೊದಲಾಗಿ ನೂರಾರು ಹರಿದಾಸರು, ಸಹಸ್ರಾರು ಪಂಡಿತರು, ಲಕ್ಷಾವಧಿ ಸದ್ಭಕ್ತರು ಭಾಗವಹಿಸಿ ಜ್ಞಾನ, ವೈರಾಗ್ಯ ಪಡೆದ ಪವಾಡಗಳು ಇವೆ.

ಮೋಕ್ಷಕ್ಕೆ ಜಯ ಪತ್ರಿಕೆ ಕೊಡಿಸಿ ಪಕ್ಷಿವಾಹನ ಸಿರಿ ವಿಜಯವಿಠಲನ್ನ ಈಕ್ಷಿಸುವುದಕ್ಕೆ ಉಪದೇಶಕೊಡುವ ಋಷಿ ಎಂದು Documentery evidence ಕೊಡುತ್ತಾರೆ. ಟೀಕಾ ಚಾರ್ಯರು ಭೇದಾರ್ಥ ಜ್ಞಾನ ಪರಮ ಭಕ್ತಿಯಿಂದ ಆನಂದತೀರ್ಥರ ಗ್ರಂಥ ವಿಸ್ತಾರ ಮಾಡಿದ್ದು ಕರದ ಕನ್ನಡಿ ಯಂತೆ ಎಂಬುದನ್ನು ಅಚ್ಚಗನ್ನಡದಲ್ಲಿ ಹೇಳುವುದು ದಾಸ ವಾಣಿಯ ವೈಶಿಷ್ಟ್ಯ. ಆನಂದತೀರ್ಥರಿಗೆ ಮೋದ ತೀರ್ಥರು ಎಂದು ಹೇಳಿದ್ದಾರೆ.

ಇಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ Steess, Strain, Tension ದಿಂದ ದೂರವಿರಬೇಕಾಗಿದೆ. ಹೀಗಾಗಿ ಸಾಧನೆ, ಜಯ, ಸದ್ಗತಿ ಮತ್ತು ಸತ್ಸಂಗಕ್ಕಾಗಿ ಜಯತೀರ್ಥರ ಅಧ್ಯಯನ (ಕನ್ನಡ ದಾಸ ಸಾಹಿತ್ಯದಲ್ಲಿ) ದರ್ಶನ ಮತ್ತು ಪ್ರಸಾದ ಅಗತ್ಯ ಎನ್ನುವ ಮಾರ್ಗದರ್ಶಿಕೆ ಈ ಕೆಳಗಿನ ಪಲ್ಲವಿಯಾಗಿದೆ.

ಜ ಎಂದು ಹೊಗಳಲು ಜಯಶೀಲನಾಗುವ

ಯ ಎನ್ನೆ ಯಮರಾಯನಂಜುವನು

ತೀ ಎಂದು ಪೊಗಲು ತೀವ್ರ ಪದವಿಯುಂಟು

ರ್ಥ ಎಂದು ಪೊಗಳಲು ತಾಪತ್ರಯಪಶಮನ

ಭಗಾವತ ಧರ್ಮವನ್ನು ವಿಶೇಷವಾಗಿ ಪ್ರಸಾರ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆಚಾರ್ಯರ ವಿಚಾರಗಳನ್ನು ಸಮರ್ಥಿಸಿ ಜನತೆಗೆ ತಿಳಿಸುವ ಸಮರ್ಥರು ಬೇಕಾಗಿದ್ದ ಕಾಲ ಆಗಿತ್ತು. ಅಂತೆಯೇ ಟೀಕಾ ಗ್ರಂಥಗಳ ಅನಿವಾರ್ಯತೆಯೂ ಇತ್ತು. ಈ ಮಹತ್ತರವಾದ ಕಾರ್ಯವು ಸಾಮಾನ್ಯರಿಂದ ಸಾಧ್ಯವಲ್ಲದ ಕಾರಣ ಇದಕ್ಕೆ ದೈವೀ ಪುರುಷರೇ ಅವತರಿಸಿ ಬರಬೇಕಾದ ಸಂದರ್ಭವಿತ್ತು. ಆದ್ದರಿಂದ ಜ್ಞಾನ ಪ್ರಸಾರ ಮಾಡಲು ಜ್ಞಾನ ಪ್ರದಾಯಕರಾದ ಶೇಷದೇವರೇ ಜಯ ತೀರ್ಥರಾಗಿ ಅವತರಿಸಿದರು.

ಜಯ ಎಂದರೆ ಇಂದ್ರಿಯಗಳನ್ನು ಜಯಿಸಿದವರೂ ತೀರ್ಥ ಎಂದರೆ ಜ್ಞಾನ ಸಂಪನ್ನರೂ ಎಂದು. ಚಿಕ್ಕವಯಸ್ಸಿ ನಲ್ಲಿಯೇ ರಾಜದರ್ಬಾರಿನಲ್ಲಿದ್ದರೂ ಸಕಲ ವೈಭೋಗ ಗಳನ್ನೂ ತ್ಯಜಿಸಿ ವೈರಾಗ್ಯದಿಂದ ಸನ್ಯಾಸದೀಕ್ಷೆ ಪಡೆದವರು. ತ್ಯಾಗಿಗಳಾದ ನಂತರ ಜಯತೀರ್ಥರು ದುರ್ಗಾದೇವಿ ಮತ್ತು ಶ್ರೀಹರಿಯಿಂದ ಅನುಗ್ರಹಿಸಲ್ಪಟ್ಟು ಉತ್ತಮ ಗ್ರಂಥಗಳಿಗೆ ಅಪೂರ್ವವ್ಯಾಖ್ಯಾನ ರಚಿಸಿದರು. ಮುಂದೆಯರಗೊಳಕ್ಕೆ ಬಂದು ಏಕಾಂತ ಪರಿಸರದ ಗುಹೆಯಲ್ಲಿ ಪ್ರಾಣದೇವರನ್ನು ಸ್ಥಾಪಿಸಿ ಉಪಾಸನೆ ಮಾಡಿದರು. ಈ ಪರಿಸರದಲ್ಲಿಯೇ 18 ದಿವ್ಯ ಟೀಕೆಗಳನ್ನೂ ಮೂರು ಸ್ವತಂತ್ರ ಕೃತಿಗಳನ್ನೂ ರಚಿಸಿ ದರು. ತಮ್ಮ ತಪಃ ಶಕ್ತಿಯಿಂದ ಅನೇಕ ಮಹಿಮೆಗಳನ್ನು ಅಂದರೆ ಯರಗೊಳದ ಒಡ್ಡು ಒಡೆದ ಕೆರೆಯನ್ನು ನಿಲ್ಲಿಸಿದ ಹಾಗೂ ಇನ್ನಿತರ ಪವಾಡಗಳಿಂದ ಜನರ ಕಷ್ಟ ನಿವಾರಿಸಿದರು.

ಮುಂದೆ ಜಯತೀರ್ಥರು ಉತ್ತರ - ದಕ್ಷಿಣ ಭಾರತದ ಸಂಚಾರ ಕೈಗೊಂಡು ಅಹಮದಾಬಾದಿಗೆ ಬಂದು ಅಲ್ಲಿ ಆರು ತಿಂಗಳು ಬೌದ್ಧರು ಗ್ರಂಥಾಲಯದಲ್ಲಿ ಗ್ರಂಥಾವಲೋಕನ ಮಾಡಿದರು. ಬೌದ್ಧರ ಗೌರವಕ್ಕೆ ಪಾತ್ರರಾದರು. ಕಾಮದೇವ ಎಂಬ ಕುಲಪತಿಯು ಜಯತೀರ್ಥರ ಗೌರವಾರ್ಥ ಶಾಸನ ವೊಂದನ್ನು ಸ್ಥಾಪಿಸಿದ್ದಾನೆ.ನ ಭೂತೋ ನ ಭವಿಷ್ಯತಿ ಎಂಬಂತೆ ಜೈನ, ಬೌದ್ಧ, ಸಾಂಖ್ಯ, ಅದ್ವೈತ, ವಿಶಿಷ್ಟಾದ್ವೈತ, ಮೀಮಾಂಸ ತರ್ಕ ವ್ಯಾಕರಣ ಮೊದಲಾದ ಸಕಲ ಶಾಸ್ತ್ರ ಗಳಲ್ಲಿಯೂ ಪರಿಪೂರ್ಣ ಪಾಂಡಿತ್ಯವನ್ನು ಪಡೆದರು ಇವರು. ಇವರ ಕಾರ್ಯ ಕ್ಷೇತ್ರವನ್ನು ಮೂರು ವಿಧವಾಗಿ ಹೇಳಬಹುದು: 1) 22 ಗ್ರಂಥಗಳ ರಚನೆ, 2) ವಾಕ್ಯಾರ್ಥ,ವಾದಿ ನಿಗ್ರಹ, ಗ್ರಂಥಾವಲೋಕನ,ಮಧ್ವಸಿದ್ಧಾಂತ ಪ್ರತಿಪಾದನೆ 3) ಸಿದ್ದಾಂತ ಪ್ರಸಾರ, ವೈಷ್ಣವ ದೀಕ್ಷೆ, ಪ್ರಚಾರ, ಶಿಷ್ಯರನ್ನು ಉದ್ಧರಿಸುವ ಕಾರ್ಯ, ಜ್ಞಾನ - ಭಕ್ತಿಯ ಪ್ರವಾಹ ನಿರಂತರ ವಾಗಿ ಜನ - ಮನಗಳಲ್ಲಿ ಹರಿಯುವಂತೆ ಮಾಡಿದ ಜ್ಞಾನಯಜ್ಞ ಅದ್ಭುತ ಪ್ರತಿಭೆ, ಪ್ರಚಂಡ ಪಾಂಡಿತ್ಯ ಚಿಂತನಶೈಲಿ, ಪ್ರೌಢ ಚಿಂತನೆ, ಖಚಿತ ನಿರೂಪಣೆ ಹಾಗೂ ತೂಕದ ವಿಶ್ಲೇಷಣೆ ಜಯತೀರ್ಥರ ವೈಶಿಷ್ಟ್ಯ.

ಶ್ರೀ ಜಯತೀರ್ಥರ ಬದುಕೇ ಅತಿದೊಡ್ಡ ಆಧ್ಯಾತ್ಮಿಕ ಸಂದೇಶ.ಅವರ ವ್ಯಕ್ತಿತ್ವವೇ ಎಲ್ಲರ ಬದುಕಿಗೆ ಆಧಾರ. ಇಂತಹ ಶ್ರೀಜಯತೀರ್ಥರ ಅನುಗ್ರಹದಿಂದ ಮಾನವನು ಸರ್ವಸ್ವವನ್ನೂ ಪಡೆಯಬಲ್ಲ. ಅಂತೆಯೇ ದಾಸ ಶ್ರೇಷ್ಠರಾದ ಶ್ರೀವಿಜಯದಾಸರು ಸಾರಿಭಜಿಸಿರೋ ಟೀಕಾರಾಯರಂ ಘ್ರಿಯಾ। ಘೋರ ಪಾರಕಾಂಬುಧಿಯ ದೂರಮಾಳ್ಪರಾ ಎಂದು ಹಾಡಿ ಹೊಗಳಿದ್ದಾರೆ.

ಕೇವಲ 43 ವರ್ಷಗಳ ಆಯುಷ್ಯದಲ್ಲಿ ಮಹತ್ಕಾರ್ಯ ಸಾಧಿಸಿದ ದೈವಿಕ ಚೇತನರು ಇವರು. ಈ ಅತ್ಯಲ್ಪಕಾಲದಲ್ಲಿ ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಏಕಾಂತದಲ್ಲಿ ಕುಳಿತು, ಜ್ಞಾನ ತಪಸ್ಸನ್ನು ಸಾಧಿಸಿ,ದ್ವೈತವಾಙ್ಮಯದ ಅತ್ಯುನ್ನತ ಶಿಖರವನ್ನೇರಿದ ದೇವಾಂಶ ಸಂಭೂತರು ಶ್ರೀ ಜಯತೀರ್ಥರು.

ಜಯತೀರ್ಥರ ಪೂರ್ವಾಶ್ರಮದ ಹೆಸರು ಧೊಂಡೋ ನರಸಿಂಹಪಂತ. ಧೋಂಡು ಎಂದರೆ ಮರಾಠಿ ಭಾಷೆಯಲ್ಲಿ ಕಲ್ಲು ಎಂದರ್ಥ. ನರಸಿಂಹನ ತಂದೆ ಧುಂಡಿರಾಜ. ಧುಂಡಿ ರಾಜನ ಕಾರ್ಯಕ್ಷೇತ್ರ ಮಂಗಳವೇಡೆ. ಶ್ರೀ ಆಚಾರ್ಯ ಮಧ್ವರು, ಅವರ ಶಿಷ್ಯರುಗಳಾದ ಶ್ರೀ ಪದ್ಮನಾಭತೀರ್ಥರು, ಶ್ರೀ ನರಹರಿತೀರ್ಥರು, ಶ್ರೀಮಾಧವತೀರ್ಥರು ಮತ್ತು ಶ್ರೀ ಅಕ್ಷೋಭ್ಯತೀರ್ಥರು ಮಂಗಳವೇಡೆಯನ್ನು ಸಂದರ್ಶಿಸಿ ಉಲ್ಲೇಖಗಳು ಇತಿಹಾಸದಲ್ಲಿದೆ.

ವಿಜಯನಗರದ ಸಂಸ್ಥಾಪಕ ಗುರುಗಳಾದ ಶ್ರೀ ವಿದ್ಯಾ ರಣ್ಯರನ್ನು ವಾದದಲ್ಲಿ ಜಯಿಸಿದ ಬಳಿಕ ಮಹಾಮಹಿಮರಾದ ಶ್ರೀ ಅಕ್ಷೋಭ್ಯತೀರ್ಥರು ಪಂಢರಾಪುರದ ಭೀಮನದಿ ದಂಡೆಯಲ್ಲಿ ವಿಠಲನ ಸೇವೆಯಲ್ಲಿದ್ದಾಗ ಶೀಘ್ರದಲ್ಲಿಯೇ ತಮ ಗೊಬ್ಬ ಶಿಷ್ಯ ದೊರಕುವವನೆಂಬ ಸ್ವಪ್ನ ಆದೇಶ ದೊರಕಿತ್ತು. ರಾವುತನೊಬ್ಬ ಕುದುರೆಯ ಮೇಲೆ ಕುಳಿತೇ ಪಶುವಿನಂತೆ ನೀರು ಕುಡಿಯಲು ಭೀಮರಥಿಗೆ ಬರಲಿದ್ದಾನೆ. ಆತನೇ ನಿಮ್ಮ ಶಿಷ್ಯ-ಇದು ಸ್ವಪ್ನ ಸಂದೇಶ. ನದಿಯಲ್ಲಿ ಮಿಂದು, ಶ್ರೀಮೂಲ ರಾಮನನ್ನು ಎದುರುನೋಡುತ್ತಿದ್ದ ಕನಸು ನನಸಾಗುವ ಸಂದರ್ಭ ಒದಗಿಬಂತು.

ಮಧ್ಯಾಹ್ನದ ಉರಿಬಿಸಿಲಿನಲ್ಲಿ ನಾಲ್ಕೈದು ಕುದುರೆ ಯನ್ನೇರಿ ಬಂದ ರಾವುತರು ನದಿಗಿಳಿದರು. ಆ ಪೈಕಿ ರಾಜ ಪುರುಷನಂತಿದ್ದ ರಾವುತನೊಬ್ಬ ನೇರ ಕುದುರೆಯೊಂದಿಗೆ ನೀರಿಗೆ ನುಗ್ಗಿ ಕುದುರೆಯಿಂದ ಕೆಳಗಿಳಿಯದೆ ಪಶುವಿನಂತೆ ನೇರ ನೀರಿಗೆ ಬಾಯಿ ಹಾಕಿದುದನ್ನು ಅಕ್ಷೋಭ್ಯತೀರ್ಥರು ಗುರುತಿಸಿದರು.

ಶ್ರೀ ಪಾದರಿಗರಿವಿಲ್ಲದೆ ಪ್ರಶ್ನೆಯೊಂದು ಹೊರಬಿತ್ತು.

"ಕಿಂ ಪಶು ಪೂರ್ವದೇಹೇ" ನೀನೇದರೂ ಹಿಂದಿನ ಜನ್ಮದಲ್ಲಿ ಪಶುವಾಗಿದ್ದೆಯೇನು? ಇದು ಯತಿವರ್ಯರ ಪ್ರಶ್ನೆಯಾಗಿತ್ತು ಅಲ್ಲಿಂದ ಮುಂದೆ ನಡೆದದ್ದೆಲ್ಲಾ ಪವಾಡ ವಾಯಿತು.

"ಕಿಂ ಪಶುಃ ಪೂರ್ವದೇಹೇ?" ಈ ಪ್ರಶ್ನೆ ಕೇಳಿ ಆ ಯುವಕನಲ್ಲಿ ವಿದ್ಯುತ್ ಸಂಚಾರವಾದಂತೆ ಆಯಿತು.

ಕುದುರೆಏರಿ ನೀರು ಕುಡಿಯಲು ನದಿಗೆ ಇಳಿದಾಗ ದೊಂಡು ನರಸಿಂಹ. ಒಂದು ಕ್ಷಣಕ್ಕೆ ತನ್ನ ಜನ್ಮಾಂತರಗಳ ನೆನಪುಂಟಾಗಿ ಜೀವನಸಾಗರದಲ್ಲಿ ತಾನು ಹಲವಾರು ನೀರ್ಗುಳ್ಳೆಗಳಾಗಿ ರೂಪಗೊಂಡದ್ದನ್ನು ನೋಡಿದ ಧೋಂಡು. ಒಂದಾದ ಮೇಲೆ ಒಂದರಂತೆ ನೂರಾರು, ಸಾವಿರಾರು ಜನ್ಮಗಳನ್ನೆತ್ತಿದ ಪೂರ್ವಸ್ಮರಣೆ ಅವನಿಗೆ ಆ ಕ್ಷಣಕ್ಕೆ ಉಂಟಾ ಯಿತು.

ಯಾವುದೋ ಒಂದು ಕಲ್ಪದಲ್ಲಿ ಎಂಟನೇ ಕಕ್ಷದಲ್ಲಿ - ತಾನು ಆದಿತಿ ಕಶ್ಯಪರ ಪುತ್ರನಾಗಿ ಹುಟ್ಟಿದುದನ್ನು ಕಂಡ ಧೋಂಡು. ಕಾಲಗತಿಯಲ್ಲಿ ಶ್ರೀಮನ್ಮಹಾವಿಷ್ಣುವನ್ನು ಕುರಿತು ತಪಸ್ಸು ಮಾಡಿ ಇಂದ್ರ ಪದವಿಗೇರಿದಂತೆ ಭಾಸವಾಯಿತು. ಯಜ್ಞರೋಚನ, ಸತ್ಯಜಿತ್, ತ್ರಿಶಿಖ, ವಿಭು, ಮಂತ್ರದ್ರುವ, ಪುರಂದರ, ಬಲಿ, ಅದ್ಭುತ, ಶಂಭು, ವೈವೃತಿ, ಋತುಧಾಮ, ದಿವಸ್ಪತಿ, ಶಚಿಗಳೆಂಬ ಹದಿನಾಲ್ಕು ಮಂದಿ ಇಂದ್ರರಲ್ಲಿ ಈ ಜೀವ ಏಳನೆಯ ಇಂದ್ರನಾಗಿ ಅವತರಿಸಿದ ಸ್ಮರಣೆಯಾಯಿತು ಆತನಿಗೆ.

ವೃತ್ರಾಸುರನನ್ನು ಕೊಂದು ಬ್ರಹ್ಮಹತ್ಯೆಗೆ ಗುರಿಯಾಗಿ ದಧೀಚಿಋಷಿಯ ಆಸ್ಥಿಯಿಂದ ಹಾಗೂ ಪರಮಾತ್ಮನ ಅನು ಗ್ರಹದಿಂದ ವಜ್ರಾಯುಧ ಪಡೆದುದನ್ನೂ ತಾರಕಾಸುರ ನೊಡನೆ ನಡೆದ ಕದನ ಮತ್ತು ಅನಂತರದ ಘಟನೆಗಳನ್ನೂ ಕಂಡಂತಾಯಿತು. ಅಹಲ್ಯೆಯ ಪಾತಿವ್ರತ್ಯವನ್ನು ಭಂಗಗೊಳಿಸಿ ಸಹಸ್ರಾಕ್ಷನಾದುದು,ತ್ರೇತಾಯುಗದ ಶ್ರೀರಾಮನಿಂದ ಅಹಲ್ಯಾ ಶಾಪ ವಿಮೋಚನೆಯಾದುದು ಇವುಗಳನ್ನೂ ನೋಡಿ ದನು.ತನ್ನ ಅಂಶದಿಂದ ಹುಟ್ಟಿದ ವಾಲಿಯನ್ನು ನೋಡಿದ... ಧೋಂಡು.

ದ್ವಾಪರಯುಗದಲ್ಲಿ ಕುಂತಿದೇವಿ ಮಗ ಅರ್ಜುನನಾಗಿ ಹುಟ್ಟಿ ಶ್ರೀಕೃಷ್ಣನ ಅನುಗ್ರಹಕ್ಕೆ ಪಾತ್ರನಾಗಿ ಭೂಭಾರಹರಣ ಕಾರ್ಯದಲ್ಲಿ ನೆರವಾದುದ್ದು ಸ್ಮೃತಿಸಾರದಲ್ಲಿ ಮೂಡಿತು.


ಈ ಕಲಿಯುಗದಲ್ಲಿ ಶ್ರೀವಾಯುದೇವರ ಅವತಾರರಾದ ಶ್ರೀಮಧ್ವಾಚಾರ್ಯರು ಜನಿಸಿದಾಗ ತಾನು ಅವರ ಧರ್ಮ ಸ್ಥಾಪನಾಕಾರ್ಯದಲ್ಲಿ ಎತ್ತಾಗಿ ಹುಟ್ಟಿ ಅವರ ಗ್ರಂಥಗಳನ್ನು ಊರಿಂದೂರಿಗೆ ಹೊತ್ತು ಸೇವೆ ಸಲ್ಲಿಸಿದುದನ್ನೂ ಅವರ ಮುಖದಿಂದ ಸಚ್ಛಾಸ್ತ್ರ ಶ್ರವಣವಾದುದನ್ನೂ ಕಂಡ. ಆ ಜೀವನು ಈ ಜನ್ಮದಲ್ಲಿ ಧುಂಡಿರಾಜನಿಗೆ ಮಗನಾಗಿ ಧೋಂಡು ನರಸಿಂಹನಾಗಿ ಜನಿಸಿದುದನ್ನೂ ಆತ ನೋಡಿದ.

ಅವನಿಗೆ ಆ ಕ್ಷಣದಲ್ಲಿ ತನ್ನ ಜೀವಿತದ ಪರಮ ಉದ್ದಿಶ್ಯ ತಿಳಿಯಿತು.ತಾನು ಸನ್ಯಾಸವನ್ನು ಸ್ವೀಕರಿಸಿ - ಶ್ರೀಮಧ್ವಾ ಚಾರ್ಯರ ಸರ್ವಮೂಲ ಗ್ರಂಥಗಳಿಗೆ ವ್ಯಾಖ್ಯಾನ ಮಾಡ ಬೇಕಾಗಿರುವ ಜೀವಿತದ ಉದ್ದಿಶ್ಯವು ಸ್ಪಷ್ಟವಾಯಿತು. ಕೂಡಲೇ ತನ್ನ ಸೈನಿಕ ಉಡುಪನ್ನು ತೆಗೆದುಹಾಕಿ ಜೊತೆ ಯವರನ್ನು ಹಿಂದಕ್ಕೆ ಕಳುಹಿಸಿದ. ಸರಳವಾದ ಉಡುಪನ್ನು ಧರಿಸಿ,ಒಬ್ಬನೇ ತನ್ನ ಆತ್ಮೋದ್ಧಾರಕ ಗುರುಗಳಾದ ಅಕ್ಷೋಭ್ಯತೀರ್ಥರ ಬಳಿಗೆ ಹೋಗಿ ನಮಸ್ಕರಿಸಿದ. ಘಟನೆ ಎಲ್ಲಿ ನಡೆಯಿತು ಎಂಬ ಬಗೆಗೆ ಇತಿಹಾಸ ಸಂಶೋಧಕರಲ್ಲಿ ಜಿಜ್ಞಾಸೆ ಇದೆ.

ಶ್ರೀ ಜಯತೀರ್ಥರ ಗ್ರಂಥ ವೈಶಿಷ್ಟ್ಯತೆಗಳನ್ನು ಒಂದೇ ಮಾತಿನಲ್ಲಿ ಹೇಳುವುದು ಬಹು ಪ್ರಯಾಸಕರ. ಬ್ರಹ್ಮ ಮೀಮಾಂಸೆ ಎನ್ನಬಹುದಾದ ದ್ವೈತಸಿದ್ಧಾಂತ ಪ್ರತಿಪಾದಕ ಶ್ರೀ ಮಧ್ವಾ ಚಾರ್ಯರ ಬ್ರಹ್ಮ ಸೂತ್ರಭಾಷ್ಯಕ್ಕೆ ತತ್ವ ಪ್ರಕಾಶಿಕೆ ಮತ್ತು ಶ್ರೀಮನ್ನ್ಯಾಯ ಸುಧೆಯ ರತ್ನಾಭರಣ ತೂಡಿಸಿದವರು ಶ್ರೀಜಯತೀರ್ಥರು. ವಿಷಯ ಪ್ರತಿಪಾದನೆ, ಶೈಲಿ, ಸಂಯಮದ ನಿರೂಪಣೆ, ವಿಶಾಲ ಮನೋಭಾವ ಹರಿತವಾದ ತರ್ಕ ಕಲ್ಪನೆ, ವಾದಕೌಶಲ್ಯ,ಸಿದ್ಧಾಂತ ಪ್ರತಿಪಾದನೆ - ಇವು ಶ್ರೀ ಜಯ ತೀರ್ಥರ ಕೃತಿರಚನಾ ವಿಶೇಷಣಗಳು.

# ಆಚಾರ್ಯ ಮಧ್ವರು ಸಂದರ್ಶಿಸಿದ ತಾಣಗಳು

-ವಿದ್ವಾನ್ . ಬಿ. ಗೋಪಾಲಾಚಾರ್



(ಕಳೆದ ಸಂಚಿಕೆಯಿಂದ ಮುಂದುವರೆಯುವುದು)

## 22. ಕುರುಕ್ಷೇತ್ರ


ಆಚಾರ್ಯಮಧ್ವರು ಸಂಚಾರ ಕ್ರಮವಾಗಿ ಕುರುಕ್ಷೇತ್ರಕ್ಕೆ ಬಂದರು. ಇದು ಹರ್ಯಾಣ ರಾಜ್ಯದಲ್ಲಿದೆ. ದೇಶದ ಪವಿತ್ರ ತೀರ್ಥಕ್ಷೇತ್ರಗಳಲ್ಲಿ ಒಂದಾಗಿದೆ. ರಾಜರಿಗೆ ಸ್ವರ್ಗ ಮಾರ್ಗವಾದ ಈ ಕ್ಷೇತ್ರವು ಕೌರವ ಪಾಂಡವರ ಯುದ್ಧ ವೇದಿಕೆಯಾಗಿತ್ತು. ಇದೇ ಭೂಮಿಯಲ್ಲಿ ಭಗವದ್ಗೀತೆಯು ಪ್ರಕಟಗೊಂಡಿದ್ದು. ಭೀಮಸೇನನ ಪರಾಕ್ರಮದ ಮುಂದೆ ಕೌರವರ ಸೈನ್ಯವೇ ನಲುಗಿ ಹೋಗಿತ್ತು. ಆಚಾರ್ಯರು ತಮ್ಮ ಶಿಷ್ಯರಿಗೆ ತಾವು ಭೀಮಾವತಾರದಲ್ಲಿ ನಡೆಸಿದ ಯುದ್ಧದ ವೈಭವವನ್ನು ಮತ್ತು ಆಯುಧಗಳನ್ನು ತೋರಿಸಿದರು. ಆಚಾರ್ಯರ ಪೂರ್ವಜನ್ಮ ಸ್ಮರಣೆಯನ್ನು ಕಂಡು ಸತ್ಯತೀರ್ಥರೇ ಮೊದಲಾದ ಶಿಷ್ಯರು ಆಶ್ಚರ್ಯಗೊಂಡರು.

## 23. ಹಸ್ತಿನಾಪುರ

ಪಾಂಡವರ ಆಳ್ವಿಕೆಯಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಹಸ್ತಿನಾಪುರಕ್ಕೆ ಆಚಾರ್ಯಮಧ್ವರು ಆಗಮಿಸುತ್ತಾರೆ. ಅನುಷ್ಠಾನಕ್ಕೆ ಯೋಗ್ಯಸಮಯವಾದ ಚಾತುರ್ಮಾಸ್ಯವು ಸಮೀಪಿಸಿದ್ದರಿಂದ ಇಲ್ಲಿಗೆ ಸಮೀಪವಿರುವ ಗಂಗಾ ನದಿಯ ಪ್ರಶಾಂತವಾದ ಪ್ರದೇಶವೊಂದರಲ್ಲಿ ನಾಲ್ಕು ತಿಂಗಳ ಕಾಲ ವಾಸಿಸುತ್ತಾರೆ. ಇವರ ಸನ್ನಿಧಿಗೆ ಗಂಗೆ ಆಗಮಿಸಿ ಸೇವಿಸುವ ಮೂಲಕ ಧನ್ಯಳಾದಳು. ಪಾಠ ಪ್ರವಚನಗಳೊಂದಿಗೆ ಚಾತುರ್ಮಾಸ್ಯವನ್ನು ಆಚರಿಸಿದರು.

## 24. ಕಾಶೀ

ದೇಶದ ಪ್ರಮುಖ ಕ್ಷೇತ್ರಗಳಲ್ಲಿ ಕಾಶಿಯೂ ಸೇರಿದೆ. ಕಾಶೀಮರಣದಿಂದ ಮುಕ್ತಿ ಕರಗತ ಎನ್ನುವ ಹಿರಿಯರ ಮಾತು ಪ್ರಸಿದ್ಧವಾಗಿದೆ. ಪಾಪವನ್ನು ತೊಳೆಯುವ ಗಂಗೆಯ ದಿವ್ಯ ಸನ್ನಿಧಾನ. ಮನೋನಿಯಾಮಕರಾದ ರುದ್ರದೇವರ ತಪೋಭೂಮಿಯೂ ಇದಾಗಿದೆ. ಇಲ್ಲಿಗೆ ಆಚಾರ್ಯಮಧ್ವರು ಶಿಷ್ಯರೊಂದಿಗೆ ಆಗಮಿಸಿದರು. ಪರಾಕ್ರಮದಿಂದ ಅಹಂಕಾರಿ



ಗಳಾಗಿದ್ದ ಶಿಷ್ಯರನ್ನು ಕಂಡು ದ್ವಂದಯುದ್ಧಕ್ಕೆ ಆಹ್ವಾನಿಸಿದರು. ಎಲ್ಲರೂ ಒಟ್ಟಿಗೆ ಯುದ್ಧಕ್ಕೆ ಬಂದರೂ ಏಕಾಂಗಿಯಾಗಿ ಆಚಾರ್ಯರು ಎಲ್ಲರನ್ನೂ ಸೋಲಿಸಿದರು. ಮಹಾಬಲಿ ಶಾಲಿಗಳಾದ ಆಚಾರ್ಯರ ಬೆರಳನ್ನೂ ಅಲುಗಾಡಿಸಲು ಇವರೆಲ್ಲ ಸಮರ್ಥರಾಗಲಿಲ್ಲ. ಸೋತು ಕ್ಷಮೆಯಾಚಿಸಿದರು. ವಾದದಲ್ಲಿ ಆಚಾರ್ಯರನ್ನು ಸೋಲಿಸಲು ಬಂದ ಇಂದ್ರಪುರೀ ಎಂಬ ಸನ್ಯಾಸಿಯನ್ನು ಇರುತ್ತರನನ್ನಾಗಿಸಿದರು.

### 25. ಗೋವಾ

ಆಚಾರ್ಯಮಧ್ವರು ಗೋವಾ ಪ್ರಾಂತ್ಯಕ್ಕೆ ಆಗಮಿಸಿದರು. ಭಗವಾನ್ ಪರಶುರಾಮನ ದಿವ್ಯಸನ್ನಿಧಾನದಲ್ಲಿ ಭಕ್ತರನ್ನು ಅನುಗ್ರಹಿಸಿದರು. ಪ್ರೀತಿಯಿಂದ ಭಕ್ತರು ನೀಡಿದ ಸಮೃದ್ಧವಾದ ಹಾಲು ಹಣ್ಣುಗಳನ್ನು ಸ್ವೀಕರಿಸಿ ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ಅಡಿಕೆ ಮೊದಲಾದ ವೃಕ್ಷ ಸಮೂಹವಿರುವ ಪಶುಪೆ ಎಂಬ ಪ್ರದೇಶದ ಜನರ ಪ್ರಾರ್ಥನೆಯಂತೆ ತಮ್ಮ ಅನುಪಮಗಾನ ಸಂಪತ್ತಿನಿಂದ ವೃಕ್ಷಗಳಲ್ಲಿ ಫಲ ಸಂಪತ್ತನ್ನು ಇಮ್ಮಡಿಗೊಳಿಸಿದರು.

### 26. ಕೊಕ್ಕಡ

ಧರ್ಮಸ್ಥಳದಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ಈ ಗ್ರಾಮವು ಸಿಗುತ್ತದೆ. ಅತ್ಯಂತ ಪ್ರಾಚೀನವಾದ ಭವ್ಯವಾದ ಶ್ರೀ ವೈದ್ಯನಾಥೇಶ್ವರ ದೇವಸ್ಥಾನವಿದೆ. ಇಲ್ಲಿ ರುದ್ರದೇವರ ಜೊತೆಗೆ ಭಗವಂತನು ಧನ್ವಂತರಿಯ ರೂಪದಿಂದ ನೆಲೆಸಿದ್ದಾನೆ. ಇಲ್ಲಿಯ ಭಕ್ತರನ್ನು ಅನುಗ್ರಹಿಸಲು ಆಚಾರ್ಯಮಧ್ವರು ಕೊಕ್ಕಡದ ಶ್ರೀ ವೈದ್ಯನಾಥೇಶ್ವರನ ದಿವ್ಯ ಸನ್ನಿಧಿಗೆ ಬಂದು ದೇವರನ್ನು ಸ್ತುತಿಸಿದ್ದಾರೆ. ಭಕ್ತರ ಮೇಲಿನ ಕಾರುಣ್ಯದಿಂದ ಶ್ರೀಕೃಷ್ಣಾಮೃತಮಹಾರ್ಣವ ಎಂಬ ಗ್ರಂಥವನ್ನು ರಚಿಸಿದ್ದಾರೆ.

### 27. ಯಜ್ಞನಾರಾಯಣ ಮಠ

ಆಚಾರ್ಯಮಧ್ವರು ಕೊಕ್ಕಡದಿಂದ ಯಜ್ಞನಾರಾಯಣ ಮಠಕ್ಕೆ ಬಂದರು. ಇದು ಇಡೇಪಡಿತ್ತಾಯ ಮನೆ. ಇವರು ಅಗ್ನಿಹೋತ್ರಿಗಳು. ಪಾಠ ಪ್ರವಚನಗಳಲ್ಲೇ ಸದಾ ಆಸಕ್ತರು. ಆದ್ದರಿಂದ ಎಲ್ಲರೂ ಗೌರವದಿಂದ ಇವರನ್ನು ಕಾಣುತ್ತಿದ್ದರು. ಆಚಾರ್ಯರು ಈ ಮನೆಯವರನ್ನು ಅನುಗ್ರಹಿಸಲು ಸಂಕಲ್ಪಿಸಿದರು. ತಾವು ರಚಿಸಿದ ಶ್ರೀಕೃಷ್ಣಾಮೃತ ಮಹಾರ್ಣವ ಗ್ರಂಥವನ್ನು ಇವರಿಗೆ ಉಪದೇಶಿಸಿದರು. ಈ ಮನೆಯಲ್ಲಿ ಯಾಗವೊಂದನ್ನು ಮಾಡಿಸಿದರು. ಕೆಲವು ದಿನಗಳ ಕಾಲ ಆ ಮನೆಯಲ್ಲಿದ್ದು ಭಕ್ತರನ್ನು ಅನುಗ್ರಹಿಸಿದರು. ಆಚಾರ್ಯರು ಹೊರಡುವಾಗ ಸುಂದರವಾದ ಯಜ್ಞನಾರಾಯಣ ವಿಗ್ರಹ ಮತ್ತು ಯಜ್ಞದಲ್ಲಿ ಉಪಯೋಗಿಸಿದ ಸ್ರುಕ್ ಸ್ರುವವನ್ನು ಅನುಗ್ರಹಪೂರ್ವಕ ನೀಡಿದ್ದಾರೆ. ಈ ಮನೆಯು ಇಂದು ಯಜ್ಞ ನಾರಾಯಣ ಮಠವಾಗಿದೆ. ಆಚಾರ್ಯರು ನೀಡಿದ ದೇವರನ್ನು ನೋಡಬಹುದು.

### 28. ಎರ್ಕಿ ಮಠ

ರಾಮಕುಂಜದ ಸಮೀಪದಲ್ಲಿದೆ ಈ ಮಠ. ಇಲ್ಲಿ ನೂರಿತ್ತಾಯ ವಂಶದವರು ವಾಸವಾಗಿದ್ದರು. ಒಮ್ಮೆ ಗ್ರೀಷ್ಮ ಕಾಲದಲ್ಲಿ ಶ್ರೀಮಧ್ವಾಚಾರ್ಯರು ಸಂಚಾರದಲ್ಲಿ ಈ ಊರಿಗೆ ಬಂದಾಗ ಎಲ್ಲಡೆಯೂ ನೀರಿನ ಕ್ಷಾಮವಿತ್ತು. ಭಕ್ತರ ಪ್ರಾರ್ಥನೆಯನ್ನು ಮನ್ನಿಸಿ ಮಧ್ವರು ಮಂತ್ರಬಲದಿಂದ ದಂಡದಿಂದಲೇ ನೀರನ್ನು ತರಿಸುತ್ತಾರೆ. ತಾವು ಸ್ನಾನವನ್ನು ಮಾಡಿ ಪೂಜೆಯನ್ನು ನೆರವೇರಿಸಿದರು. ಕೆಲವು ದಿನಗಳ ಕಾಲ ಇಲ್ಲಿಯೇ ವಾಸವಾಗಿದ್ದರು. ಆಚಾರ್ಯರು ಅನುಗ್ರಹದಿಂದ ಇಲ್ಲಿ ವೇದಾಂತದ ಪಾಠ ಪ್ರವಚನಗಳು ಪ್ರಾರಂಭಗೊಂಡವು. ಅಂದಿನಿಂದ ಈ ಮನೆಯವರು ಉಪಾಧ್ಯಾಯರಾದರು. ಇವರಿಗೆ ಅನುಗ್ರಹರೂಪವಾಗಿ ಲಕ್ಷ್ಮೀಚೆನ್ನಕೇಶವ ವಿಗ್ರಹವನ್ನು ಮತ್ತು ತಪ್ತಮುದ್ರಾಧಾರಣೆಯ ಅಧಿಕಾರವನ್ನು ನೀಡಿದರು ಈ ಪ್ರದೇಶದ ಭಕ್ತರಿಗೆ ಈಗಲೂ ಮುದ್ರಾಧಾರಣೆಯನ್ನು ಪ್ರಥಮ ಏಕಾದಶಿಯಂದು ಈ ಮನೆಯವರು ನಡೆಸುತ್ತಾರೆ. ಈ ಮನೆಯು ಇಂದು ಎರ್ಕಿಮಠ ಎಂದೇ ಖ್ಯಾತವಾಗಿದೆ. ಇಲ್ಲಿ ಮಧ್ವರು ನಿರ್ಮಿಸಿದ ದಂಡತೀರ್ಥ, ಅವರು ನೀಡಿದ ಮುದ್ರೆಗಳು, ಲಕ್ಷ್ಮೀ ಚೆನ್ನಕೇಶವ ವಿಗ್ರಹವನ್ನು ಈಗಲೂ ನೋಡಬಹುದು. ಪರ್ಯಾಯ ಪೀಠವೇರುವ ಶ್ರೀಗಳು ಈ ಮಠವನ್ನು ಸಂದರ್ಶಿಸುತ್ತಾರೆ.

### 29. ಉಜಿರೇ

ಪ್ರಸಿದ್ಧ ಕ್ಷೇತ್ರವಾದ ಧರ್ಮಸ್ಥಳದ ಸನಿಹದಲ್ಲಿ ಈ ಊರು ಸಿಗುತ್ತದೆ. ಉಚ್ಚಭೂತಿ ಎಂದೇ ಪ್ರಸಿದ್ಧವಾಗಿದ್ದ ಈ ಊರಿನಲ್ಲಿ ಆ ಕಾಲದಲ್ಲಿ ವಿದ್ವಾಂಸರು ಹೆಚ್ಚಿನ ಸಂಖ್ಯೆ



ಯಲ್ಲಿದ್ದರು. ಅವರೆಲ್ಲ ಅಹಂಕಾರಿಗಳೂ ಆಗಿದ್ದರು. ತಮಗೆ ಸಮರಾದವರಿಲ್ಲ ಎಂದೇ ತಿಳಿದಿದ್ದ ಅವರನ್ನು ಉದ್ಧರಿಸಲು ಆಚಾರ್ಯಮಧ್ವರು ಇಲ್ಲಿಗೆ ಆಗಮಿಸುತ್ತಾರೆ. ಇವರು ಸನ್ಯಾಸಿಗಳಾದ್ದರಿಂದ ಕರ್ಮಾಚರಣೆಯ ಚರ್ಚೆಯಲ್ಲಿ ಸೋಲಿಸ ಬಹುದು ಎಂದು ತೀರ್ಮಾನಿಸಿ ಪ್ರಶ್ನಿಸುತ್ತಾರೆ. ಆಗ ಮಧ್ವರು ಕರ್ಮಾರ್ಥದ ಸರಿಯಾದ ವಿವರಣೆಯನ್ನು ನೀಡುತ್ತಾರೆ. ಇದರ ಸರಿಯಾದ ತಿಳಿವಿಗಾಗಿ ಕರ್ಮನಿರ್ಣಯ ಗ್ರಂಥವನ್ನು ರಚಿಸುತ್ತಾರೆ. ಶ್ರೀ ಜನಾರ್ಧನದೇವರ ಸನ್ನಿಧಾನದ ಈ ದೇವಸ್ಥಾನದಲ್ಲಿ ಗ್ರಂಥರಚನೆಗಾಗಿ ಮಧ್ವರು ಕುಳಿತಿದ್ದ ಕಲ್ಲನ್ನು ಇಂದಿಗೂ ನೋಡಬಹುದು.

### 30. ಕೊಡಿಪಾಡಿ -

ಶ್ರೀಮಧ್ವಾಚಾರ್ಯರು ಸಂಚಾರ ಕ್ರಮೇಣ ಕೇರಳದ ಕಾವು ಮಠದಿಂದ ಪುತ್ತೂರಿನ ಕೊಡಿಪಾಡಿಗೆ ಬರುತ್ತಾರೆ. ಇಲ್ಲಿ ಆನಂದಮುಖಾರವಿಂದನಾದ ಶ್ರೀಜನಾರ್ಧನನ ದಿವ್ಯ ಸನ್ನಿಧಿಯಲ್ಲಿ ಚಾತುರ್ಮಾಸ್ಯ ವ್ರತವನ್ನು ಸ್ವೀಕರಿಸಿದ್ದಾರೆ. ಆಗ ಅವರು ಧ್ಯಾನಕ್ಕೆ ಕುಳಿತು ಕೊಂಡ ಶಿಲೆಯನ್ನು ಇಂದಿಗೂ ಇಲ್ಲಿ ನೋಡಬಹುದು. ಇಲ್ಲಿಯ ಸರೋವರವು ಸ್ನಾನ ಮಾತ್ರದಿಂದಲೇ ರೋಗವನ್ನು ಪರಿಹರಿಸುತ್ತದೆ. ಆಚಾರ್ಯರ ಚಾತುರ್ಮಾಸ್ಯದಲ್ಲಿ ಪ್ರಧಾನವಾಗಿ ಸೇವೆಯನ್ನು ಸಲ್ಲಿಸಿ ಅನುಗ್ರಹ ಪಾತ್ರರಾದವರಲ್ಲಿ ಕೋಡಿಪಡಿತ್ತಾಯರು ಹಾಗೂ ಎರ್ಕಡಿತ್ತಾಯರು ಪ್ರಮುಖರು. ಇವರ ಸೇವೆಯಿಂದ ಸಂತುಷ್ಟರಾದ ಆಚಾರ್ಯರು ಕೋಡಿಪಡಿತ್ತಾಯರಿಗೆ ಶ್ರೀ ಆನಂತಾಸನನ ವಿಗ್ರಹವನ್ನು ಹಾಗೂ ಎರ್ಕಡಿತ್ತಾಯರಿಗೆ ಭೂವರಾಹ ಮೂರ್ತಿಯನ್ನು ನೀಡಿ ಅನುಗ್ರಹಿಸಿದ್ದಾರೆ.

### 31. ಪಾರಂತಿ -

ಆಚಾರ್ಯಮಧ್ವರು ಸಂಚಾರದಲ್ಲಿ ಈ ಕ್ಷೇತ್ರಕ್ಕೆ ಆಗ ಮಿಸುತ್ತಾರೆ. ಈ ಕ್ಷೇತ್ರವು ಉಪ್ಪಿನಂಗಡಿಯಿಂದ ಸುಮಾರು 11 ಕಿ.ಲೋ ಮೀಟರ್ ದೂರದಲ್ಲಿದೆ. ಇಲ್ಲಿ ಪಂಚಲಿಂಗೇಶ್ವರ ದೇವಸ್ಥಾನವಿದೆ. ಪಾಂಡವರು ಸಂಚಾರದಲ್ಲಿ ಈ ಕ್ಷೇತ್ರಕ್ಕೆ ಬಂದಾಗ ಅನಿರುದ್ಧಾದಿ ಭಗವದ್ರೂಪಗಳ ಪಂಚಲಿಂಗಗಳನ್ನು ಪ್ರತಿಷ್ಠಾಪಿಸಿದರು. ಆಚಾರ್ಯರು ಈ ಪ್ರದೇಶಕ್ಕೆ ಬಂದಾಗ ಪೂಜಾದಿ ವ್ಯವಸ್ಥೆ ಇರಲಿಲ್ಲ. ಕೂಡಲೇ ದೇವಸ್ಥಾನಕ್ಕೆ ಬೇಕಾದ ಎಲ್ಲ ವ್ಯವಸ್ಥೆಗಳನ್ನೂ ಮಾಡಿಸುತ್ತಾರೆ. ಬಹು ಪ್ರಾಚೀನ ಧಾತ್ರೀ ವೃಕ್ಷವು ಇಲ್ಲಿದೆ. ಬೆಟ್ಟದ ಮೇಲೆ ಸುಂದರ ವಾತಾವರಣ ದಲ್ಲಿರುವ ಅತ್ಯಂತ ಪ್ರಾಚೀನವಾದ ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರೀಪಲಿಮಾರು ಶ್ರೀಗಳು ಜೀರ್ಣೋದ್ಧಾರನ್ನು ಕೈಗೊಂಡಿದ್ದಾರೆ.

### 32. ನಡ್ಡಂತಾಡಿ ಮಠ -

ಈ ಮಠವು ಬಂಟ್ವಾಳ ತಾಲೂಕಿನಲ್ಲಿದೆ. ಬಿ.ಸಿ. ರೋಡಿನಿಂದ ಧರ್ಮಸ್ಥಳಕ್ಕೆ ಹೋಗುವ ಮಾರ್ಗದಲ್ಲಿದೆ. ಸಂಸ್ಕೃತದಲ್ಲಿ ಈ ಪ್ರದೇಶಕ್ಕೆ ಮಧ್ಯವಾಟ ಎಂದು ಹೆಸರು. ಉಡುಪಿಯಿಂದ ಸುಬ್ರಹ್ಮಣ್ಯಕ್ಕೆ ಬಂಟ್ವಾಳ ಮಾರ್ಗವಾಗಿ ಹೋಗುವ ದಾರಿಯಲ್ಲಿ ಈ ಸ್ಥಳವಿದೆ. ಇಲ್ಲಿ ಭವ್ಯವಾದ ಒಂದು ಮಠವಿದೆ. ಅಲ್ಲೊಂದು ಸುಂದರ ಪುಷ್ಕರಣಿ. ಆಚಾರ್ಯ ಮಧ್ವರು ಈ ಮಠದಲ್ಲಿ ಅನೇಕ ಸಮಯ ವಾಸವಾಗಿದ್ದರು. ಉಡುಪಿಯಿಂದ ಸುಬ್ರಹ್ಮಣ್ಯಕ್ಕೆ ಹೋಗುವಾಗ ಮಧ್ಯಾಹ್ನದ ಪೂಜೆ ಭಿಕ್ಷೆಯನ್ನು ಇಲ್ಲಿ ಪೂರೈಸಿದ್ದಾರೆ. ಈ ಮಠವು ಈಗ ಸೋದೆ ಶ್ರೀ ವಾದಿರಾಜ ಮಠದ ಆಡಳಿತ ದಲ್ಲಿದೆ.

### 33. ಮಧ್ವ ಕಟ್ಟೆ -

ಈ ಪ್ರದೇಶವು ಬಿ.ಸಿ. ರೋಡ್‌ನಿಂದ ಧರ್ಮಸ್ಥಳಕ್ಕೆ ಬರುವ ಮಾರ್ಗದಲ್ಲಿ ಸಿಗುತ್ತದೆ. ಶ್ರೀಮಧ್ವಾಚಾರ್ಯರು ಉಡುಪಿಯಿಂದ ಸುಬ್ರಹ್ಮಣ್ಯಕ್ಕೆ ಪೂಜೆಗೆ ಹೋಗುವಾಗ ನಡ್ಡಂತಾಡಿ ಮಠದಲ್ಲಿ ಮಧ್ಯಾಹ್ನದ ಪೂಜಾದಿಗಳನ್ನು ಮುಗಿಸಿ ಇಲ್ಲಿ ಸ್ವಲ್ಪಕಾಲ ವಿಶ್ರಾಂತಿಯನ್ನು ಸ್ವೀಕರಿಸುತ್ತಿದ್ದರು. ಇದು ಎರಡು ಕ್ಷೇತ್ರಗಳ ಸರಿಯಾದ ಮಧ್ಯಪ್ರದೇಶವಾಗಿದೆ. ಪ್ರಶಾಂತವಾದ ಈ ಪರಿಸರದಲ್ಲಿ ಅವರು ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ಇಂದಿಗೂ ನೋಡಬಹುದು. ಪೂಜ್ಯಪೇಜಾವರ ಶ್ರೀಪಾದರು ಇದನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

### 34. ಕಾಂತಾವರ ಕ್ಷೇತ್ರ -

ಈ ಕ್ಷೇತ್ರವು ಕಾರ್ಕಳ ಮೂಡಬಿದರೆಯ ಮಾರ್ಗದಲ್ಲಿ ಸಿಗುತ್ತದೆ. ಆಚಾರ್ಯಮಧ್ವರು ಈ ಕ್ಷೇತ್ರಕ್ಕೆ ಆಗಮಿಸಿದ್ದಾರೆ. ಇಲ್ಲಿಯ ಶ್ರೀ ಕಾನತೇಶ್ವರನ ಸನ್ನಿಧಿಯಲ್ಲಿ ಪ್ರವಚನವನ್ನು ಮಾಡಿದರು. ಆಗ ಅಲ್ಲಿಗೆ ಬಂದ ದುಷ್ಟರು ಆಚಾರ್ಯರನ್ನು ಬಲದಲ್ಲಿ ಪರೀಕ್ಷಿಸಲು ಪ್ರಯತ್ನಿಸುತ್ತಾರೆ. ಅವರಲ್ಲಿ ಅತ್ಯಂತ ಬಲಿಷ್ಠನೊಬ್ಬನು ಪ್ರವಚನದಲ್ಲಿದ್ದ ಆಚಾರ್ಯರ ಕುತ್ತಿಗೆಯನ್ನು ಜೋರಾಗಿ ಒತ್ತಿದರು. ಇವರು ಎಷ್ಟೇ ಜೋರಾಗಿ ಒತ್ತಿದರೂ ಆಚಾರ್ಯರ ಧ್ವನಿಯಲ್ಲಿ ವ್ಯತ್ಯಾಸವೇ ಬರಲಿಲ್ಲ. ಆಗ ಆ ದುಷ್ಟನು ಆಯಾಸಗೊಂಡು ಬಿದ್ದನು, ಮತ್ತೆ ಆಚಾರ್ಯರು ತಮ್ಮ ಅಂಗುಷ್ಠವನ್ನು ಮೇಲೆತ್ತಲು ಆದೇಶಿಸುವರು. ಆಗಲೂ ಸೋತು ಅವಮಾನಿತನಾದನು. ಆಚಾರ್ಯರ ಅಣಿಮಾದಿ ಸಿದ್ಧಿಯನ್ನು ಕಂಡು ಭಕ್ತರು ಭಾವುಕರಾದರು. ಅತ್ಯಂತ ವಿಶಾಲವಾದ ಈ ದೇವಸ್ಥಾನವು ಅನೇಕ ಮಹತ್ವಗಳನ್ನೊಳಗೊಂಡಿದೆ. ಇಲ್ಲಿಯ ಶ್ರೀಕಾಂತೇಶ್ವರದೇವರು ಮೂರು ಕಾಲದಲ್ಲಿ ಮೂರು ಬಣ್ಣಗಳಿಂದ ಅಲಂಕೃತರಾಗಿ ಭಕ್ತರನ್ನು

ಅನುಗ್ರಹಿಸುವುದು ಬಹು ಪ್ರಸಿದ್ಧವಾಗಿದೆ. ಈ ದೇವಸ್ಥಾನವು ಡಾ.ಬಾರಾಡಿ ಬೀಡುಬಲ್ಲಾಳರ ಆಡಳಿತದಲ್ಲಿ ಜೀರ್ಣೋದ್ಧಾರಕಗೊಂಡಿದೆ.

**35. ಕಾವು ಮಠ -**

ತುಳುನಾಡಿನ ಇತಿಹಾಸದಲ್ಲಿ ಲಿಕುಚಕುಲದ ಕೊಡುಗೆ ಅಪಾರವಾದದ್ದು.ಆ ಕುಲದವರು ಇಲ್ಲಿ ವಾಸವಾಗಿದ್ದಲಿಂದ ಅತ್ಯಂತ ಪ್ರಸಿದ್ಧಿಯನ್ನು ಪಡೆದ ಮಠವಾಗಿದೆ. ಕೇರಳದ ಕಾಸರಗೋಡಿನ ಪ್ರಾರಂಭದಲ್ಲಿ ಈ ಮಠವು ಸಿಗುತ್ತದೆ. ತುಳುನಾಡಿನ ಅಭಿಜಾತ ಕವಿಗಳಾಗಿದ್ದ ಶ್ರೀ ತ್ರಿವಿಕ್ರಮ ಪಂಡಿತರು ಇಲ್ಲಿಯೇ ವಾಸವಾಗಿದ್ದರು.ಆಸ್ಥಾನ ಕವಿಗಳಾಗಿದ್ದ ಇವರು ಸಂಸ್ಕೃತ ಕಾವ್ಯ ಪ್ರಪಂಚಕ್ಕೆ ನೀಡಿದ ಕೊಡುಗೆ ಅಪಾರವಾದದ್ದು. ಕಾವ್ಯ ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠವಾದ ಉಷಾಹರಣ ಕಾವ್ಯವನ್ನು ಎಳೆಯ ವಯಸ್ಸಿನಲ್ಲೇ ಇವರು ರಚಿಸಿದ್ದಾರೆ. ಇಂತಹ ಮಹಾಪಂಡಿತರು ಜಯಸಿಂಹ ರಾಜನ ಸಹವಾಸದಿಂದ ಆಚಾರ್ಯರ ವ್ಯಕ್ತಿತ್ವದಲ್ಲಿ ಆದರವುಳ್ಳವರಾದರು. ರಾಜನ ನೇತೃತ್ವದಲ್ಲಿ ತ್ರಿವಿಕ್ರಮರು ಮತ್ತು ಆಚಾರ್ಯರು ಮೊದಲಬಾರಿ ಒಂದು ಮರದ ಕೆಳಗಡೆ ಕೂಡಿದ ಸ್ಥಳವನ್ನು ಕೂಡ್ಲು ಎಂದು ಹೆಸರಿಸಿದ್ದಾರೆ. ಇದರ ಮುಂಭಾಗದಲ್ಲಿ ಕಾವುಗೋಳಿ ವಿಷ್ಣುಮೂರ್ತಿ ದೇವಸ್ಥಾನವಿದೆ.

ಒಮ್ಮೆ ವಿಷ್ಣುಮಂಗಳ ದೇವಸ್ಥಾನದಲ್ಲಿ ರಾಜನ ನೇತೃತ್ವದಲ್ಲಿ ದೊಡ್ಡ ವಿದ್ವತ್ಸಭೆಯನ್ನು ಆಯೋಜಿಸಲಾಗಿತ್ತು. ಸುತ್ತಲಿನ ಎಲ್ಲ ಗ್ರಾಮದವರೂ ಅಲ್ಲಿ ನೆರೆದಿದ್ದರು. ಶ್ರೀ ತ್ರಿವಿಕ್ರಮ ಪಂಡಿತರು ಹದಿನೈದು ದಿನಗಳ ಕಾಲ ಆಚಾರ್ಯರೊಂದಿಗೆ ವಾದ ಮಾಡಿ ಕೊನೆಗೆ ಆಚಾರ್ಯರ ವಿದ್ವತ್ತಿಗೆ ತಲೆ ಬಾಗಿದರು. ಅವರಲ್ಲಿ ಶಿಷ್ಯತ್ವವನ್ನು ಸ್ವೀಕರಿಸಿದರು. ಇವರ ವಿನಯಾದಿ ಸದ್ಗುಣಗಳಿಂದ ಸಂತುಷ್ಟರಾದ ಆಚಾರ್ಯರು ಅನುಗ್ರಹ ಪೂರ್ವಕ ಪಂಚ ಮುದ್ರೆಗಳನ್ನು ಮತ್ತು ಅತ್ಯಂತ ಸುಂದರವಾದ ಶ್ರೀವತ್ಸನಾರಾಯಣ ವಿಗ್ರಹವನ್ನು ಕರುಣಿಸಿದ್ದಾರೆ. ಈ ವಿಗ್ರಹವನ್ನು ಮಠದಲ್ಲಿ ನೋಡಬಹುದು.

ಈ ಮಠದಲ್ಲಿ ಶ್ರೀ ತ್ರಿವಿಕ್ರಮಪಂಡಿತರ ಮತ್ತು ಅವರ ಮಗನಾದ ಶ್ರೀಮಧ್ವವಿಜಯದ ಕರ್ತೃಗಳಾದ ನಾರಾಯಣ ಪಂಡಿತರ ವೃಂದಾವನಗಳನ್ನು ನೋಡಬಹುದು.

**36. ನಾರ್ಶ್ಯ-**

ನೇತ್ರಾವತೀ ನದಿಯನ್ನು ದಾಟಿ ದಕ್ಷಿಣಾಭಿಮುಖವಾಗಿ ಹೋಗುವ ಮಾರ್ಗದಲ್ಲಿ ಈ ಗ್ರಾಮವು ಸಿಗುತ್ತದೆ. ಸಂಸ್ಕೃತದಲ್ಲಿ ಈ ಗ್ರಾಮವನ್ನು ನೃಸಿಂಹಗೇಹ ಎಂದು ಹೆಸರಿಸಿದ್ದಾರೆ. ಮುಂದೆ ಇದೇ ಹೆಸರು ನಾರ್ಶ್ಯ ಎಂದು ಬದಲಾಗಿದೆ.ಇಲ್ಲಿ ಬಹು ಪ್ರಾಚೀನವಾದ ಶ್ರೀ ನರಸಿಂಹ ದೇವರ ದೇವಸ್ಥಾನವಿದೆ. ಆಚಾರ್ಯರು ಶಿಷ್ಯರೊಂದಿಗೆ ಇಲ್ಲಿಗೆ ಆಗಮಿಸಿ ಪುಷ್ಕರಣಿಯಲ್ಲಿ ಸ್ನಾನವನ್ನು ಮಾಡಿ ದೇವರನ್ನು ಧ್ಯಾನಿಸಿದ್ದಾರೆ.ಎಲ್ಲರೂ ನೋಡುತ್ತಿದ್ದಂತೆಯೇ ಒಬ್ಬ ಬಾಲಕನ ಹೆಗಲೇರಿ ಕುಳಿತು ತಮಗಿರುವ ಲಘಿಮಾಸಿದ್ಧಿಯನ್ನು ತೋರಿಸಿದರು.ಆ ಬಾಲಕ ನಗುತ್ತಾ ಆಚಾರ್ಯರನ್ನು ಹೊತ್ತುಕೊಂಡು ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿದನು. ಅಲ್ಲಿದ್ದ ಎಲ್ಲರೂ ಆಶ್ಚರ್ಯದಿಂದ ಗುರುಗಳನ್ನು ಸ್ತುತಿಸಿದರು.

**37. ಕಟ್ಟಿಲ -**

ಈ ಗ್ರಾಮವು ಬಂಟ್ವಾಳ ತಾಲೂಕಿನ ಸಾಲೆತ್ತೂರಿನ ಸಮೀಪವಿದೆ. ಆಚಾರ್ಯಮಧ್ವರು ಸಂಚಾರ ಕ್ರಮೇಣ ಈ ಗ್ರಾಮಕ್ಕೆ ಬಂದು ತಾವು ಬರೆದ ಸರ್ವ ಮೂಲಗ್ರಂಥಗಳನ್ನು ಸಂರಕ್ಷಿಸಲು ಇದೇ ಯೋಗ್ಯಸ್ಥಳವೆಂದು ನಿರ್ಣಯಿಸಿದರು. ಕಟ್ಟಿಲದಲ್ಲಿ ಒಂದು ಬಾವಿಯನ್ನು ತೋಡಿ ಅದರಲ್ಲಿ ಗ್ರಂಥಗಳನ್ನು ಇಟ್ಟು ಮಣ್ಣಿನಿಂದ ಮುಚ್ಚಿದರು, ಮುಂದೆ ಎಂದಾದರೂ ಮಧ್ವ ಮತವು ಶಿಥಿಲವಾದರೆ ಕುಮಾರ ಪರ್ವತದಲ್ಲಿರುವ ಶ್ರೀ ವಿಷ್ಣುತೀರ್ಥರು ಮತ್ತೆ ಬಂದು ಈ ಗ್ರಂಥಗಳನ್ನು ಮೇಲೆತ್ತಿ ಮತವನ್ನುದ್ಧರಿಸುವರು ಎಂಬುದು ಇಲ್ಲಿಯ ನಂಬಿಕೆ.ಆಚಾರ್ಯರು ಗ್ರಂಥಗಳನ್ನಿಟ್ಟ ಬಾವಿಯನ್ನು ಈಗಲೂ ನೋಡಬಹುದು.ಈ ಮಠವು ಶ್ರೀ ಅದಮಾರು ಮಠದ ಆಡಳಿತದಲ್ಲಿದೆ.

**38. ವರ್ಕಾಡಿ -**

ಕರ್ನಾಟಕ ಕೇರಳದ ಗಡಿಭಾಗದಲ್ಲಿರುವ ವರ್ಕಾಡಿ ಗ್ರಾಮವು ಅತ್ಯಂತ ಪ್ರಸಿದ್ಧಕ್ಷೇತ್ರವಾಗಿದೆ. ಈ ಭಾಗದ ಭಕ್ತರನ್ನು ಅನುಗ್ರಹಿಸಲು ಆಚಾರ್ಯರು ವರ್ಕಾಡಿಯ ಮಠದಲ್ಲಿ ಚಾತುರ್ಮಾಸ್ಯ ವ್ರತವನ್ನು ಸ್ವೀಕರಿಸಿದರು. ಶ್ರೀ ವಿಷ್ಣುಮೂರ್ತಿ ದೇವರ ದಿವ್ಯ ಸನ್ನಿಧಿಯಲ್ಲಿ ಪ್ರತಿದಿನವೂ ಜ್ಞಾನ ಯಜ್ಞ ಕಾರ್ಯಕ್ರಮ.ಈ ಮಠವು ಕಾಲಕ್ರಮದಲ್ಲಿ ದುಷ್ಟರ ಆಕ್ರಮಣಕ್ಕೆ ಒಳಗಾದಾಗ ಆ ಗ್ರಾಮದ ಜನರು ದೇವರನ್ನು ಒಂದು ಪೆಟ್ಟಿಗೆಯಲ್ಲಿ ಭದ್ರಮಾಡಿ ಅಲ್ಲಿರುವ ಬಾವಿಗೆ ಹಾಕಿದರು. ಹಲವಾರು ವರ್ಷಗಳು ಉರುಳಿದವು. ಇತ್ತೀಚೆಗೆ ಅಷ್ಟಮಂಗಳ ಪ್ರಶ್ನೆಯಲ್ಲಿ ಕಂಡಂತೆ ಅಲ್ಲಿದ್ದ ಬಾವಿಯನ್ನು ಅಗೆದಾಗ ದೇವರ ವಿಗ್ರಹ ಗೋಚರವಾಗಿ ಶ್ರೀ ಪಲಿಮಾರು ಮಠದ ಪೂಜ್ಯ ಶ್ರೀವಿದ್ಯಾಧೀಶತೀರ್ಥರ ನೇತೃತ್ವದಲ್ಲಿ ಮೊದಲಿನ ಸ್ಥಳದಲ್ಲೇ ಭವ್ಯವಾದ ದೇವಸ್ಥಾನವು ನಿರ್ಮಾಣಗೊಂಡಿದೆ.

**39. ಕಳಸ ಗ್ರಾಮ**

ಶ್ರೀಮಧ್ವಾಚಾರ್ಯರು ಸಂಚಾರ ಕ್ರಮೇಣ ತುಂಗಾ ನದಿಯ ತೀರದಲ್ಲಿರುವ ಕಳಸ ಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಜನರಿಗೆ ತೊಂದರೆಯಾಗುವ ರೀತಿಯಲ್ಲಿ ದೊಡ್ಡದೊಂದು

ಬಂಡೆಗಲ್ಲು ಅಲ್ಲಿತ್ತು.ಅದನ್ನು ಸ್ಥಳಾಂತರಿಸಲು ಅನೇಕರು ಪ್ರಯತ್ನಿಸುತ್ತಿದ್ದರು.ಪರಾಕ್ರಮಿಗಳಾದ ಭೀಮಸೇನ ದೇವರ ಸ್ಮರಣೆಯನ್ನು ಮಾಡುತ್ತಿದ್ದರು. ಅಲ್ಲಿಗೆ ಆಚಾರ್ಯರು ಆಗಮಿಸಿದರು. ಅವರ ಪ್ರಾರ್ಥನೆಯನ್ನು ಸ್ವೀಕರಿಸಿ ಅನಾ ಯಾಸವಾಗಿ ಆ ಬಂಡೆಗಲ್ಲನ್ನು ಎತ್ತಿ ಇಟ್ಟರು. ಇದರಿಂದ ಜನರಿಗೆ ಅತ್ಯಂತ ಉಪಕಾರವಾಯಿತು. ಇವತ್ತಿಗೂ ಈ ಬಂಡೆಗಲ್ಲನ್ನು ತುಂಗಾ ದಡದಲ್ಲಿ ನೋಡಬಹುದು. ಆ ಕಲ್ಲಿನ ಮೇಲೆ "ಏಕೇನ ಹಸ್ತೇನ ಆನೀಯ ಸ್ಥಾಪಿತಾ ಶಿಲಾ" ಎಂದು ಬರೆಯಲಾಗಿದೆ. ಅವರ ಪರಾಕ್ರಮಕ್ಕೆ ಸಾಕ್ಷಿಯಾದ ಸ್ಥಳವಾಗಿದೆ.

**40. ಕಣ್ವತೀರ್ಥ -**

ಮಂಗಳೂರಿನಿಂದ ಕಾಸರಗೋಡಿಗೆ ಹೋಗುವ ಮಾರ್ಗದಲ್ಲಿ ತಲಪಾಡಿಯ ಸಮೀಪದಲ್ಲಿ ಈ ಗ್ರಾಮವು ಸಿಗುತ್ತದೆ. ಕಣ್ವಮಹರ್ಷಿಗಳು ಪ್ರತಿಷ್ಠಾಪಿಸಿದ ಬ್ರಹ್ಮಲಿಂಗೇಶ್ವರ ದೇವಸ್ಥಾನವಿದೆ.ಅಲ್ಲಿಯೇ ಸುಂದರವಾದ ಕಣ್ವತೀರ್ಥವಿದೆ. ಆಚಾರ್ಯಮಧ್ವರು ಪರ್ಕಾಡಿಯಲ್ಲಿ ಚಾತುರ್ಮಾಸ್ಯದಲ್ಲಿದ್ದಾಗ ಸೂರ್ಯಗ್ರಹಣ ಪರ್ವಕಾಲ ಬರುತ್ತದೆ. ಆಗ ಸಮುದ್ರ ಸ್ನಾನಕ್ಕಾಗಿ ಆಚಾರ್ಯರು ಇಲ್ಲಿಗೆ ಬರುತ್ತಾರೆ. ಆಚಾರ್ಯರ ಜೊತೆಗೆ ಸ್ನಾನ ಮಾಡಲು ಆಬಾಲವೃದ್ಧರೂ ಅಲ್ಲಿ ಸೇರುತ್ತಾರೆ. ಗ್ರಹಣದ ಪರ್ವಕಾಲದಲ್ಲಿ ಸಮುದ್ರದ ತೀರದಲ್ಲೇ ಆಚಾರ್ಯರ ಮುಖಾರವಿಂದದಿಂದ ಪ್ರವಚನ ಕೇಳುವ ಸುಯೋಗ ಅವರದು. ಪ್ರವಚನಕ್ಕೆ ಅಡ್ಡಿಪಡಿಸುತ್ತಿದ್ದ ಭೋರ್ಗರೆಯುವ ಸಮುದ್ರವನ್ನೂ ಆಚಾರ್ಯರು ಶಾಂತಗೊಳಿಸಿದರು. ಇಲ್ಲಿಯೇ ಅಷ್ಟಮಠದಲ್ಲಿ ದ್ವಂದ್ವಮಠದ ವ್ಯವಸ್ಥೆಯನ್ನು ಇಲ್ಲಿಯೇ ಮಾಡಿದ್ದು. ಈ ಸ್ಥಳವನ್ನು ನೋಡಬಹುದು.ಶ್ರೀಪೇಜಾವರ ಮಠದ ಆಡಳಿತದಲ್ಲಿರುವ ಈ ಮಠದಲ್ಲಿ ಭಾಗವತ ವ್ಯಾಖ್ಯಾನಕಾರರಾದ ಶ್ರೀ ವಿಜಯಧ್ವಜತೀರ್ಥರ ಮೂಲವೃಂದಾವನವಿದೆ. ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ನೇತೃತ್ವದಲ್ಲಿ ಅಭಿವೃದ್ಧಿಗೊಂಡಿದೆ.

ಜಗದ್ಗುರುಗಳಾದ ಆಚಾರ್ಯಮಧ್ವರು ಭಾರತದ ಉದ್ದಗಲಕ್ಕೂ ಸಂಚರಿಸಿ ಅನೇಕ ಮಹಿಮೆಗಳನ್ನು ತೋರಿಸಿದ್ದಾರೆ. ಉಡುಪಿಯ ಮಹತೋಭಾರ ಶ್ರೀ ಅನಂತಾಸನ ದೇವರ ದಿವ್ಯ ಸನ್ನಿಧಿಯಲ್ಲಿ ಸುಜೀವಿಗಳಿಗೆ ಪಾಠವನ್ನು ಮಾಡುತ್ತ ಅದೃಶ್ಯರೂಪದಿಂದ ನೆಲೆಸಿದ್ದಾರೆ. ಅವರು ಅಜ್ಞರ ಕಣ್ಣಿಗೆ ಅದೃಶ್ಯರಾಗಿ ಇರುವ ಸ್ಥಳವನ್ನು ಇಂದಿಗೂ ಕಾಣಬಹುದು.ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗಣೇಂದ್ರತೀರ್ಥಶ್ರೀಪಾದರು ಈ ದೇವಸ್ಥಾನದ ಆಡಳಿತ ಮೋಕ್ತೇಸರರಾಗಿದ್ದಾರೆ.

ಹೀಗೆ ಆಚಾರ್ಯಮಧ್ವರು ಸಂಚರಿಸಿದ ತಾಣಗಳನ್ನು ಮಧ್ವವಿಜಯದ ಆಧಾರದಲ್ಲಿ ಗುರುತಿಸಬಹುದು. ಇದಲ್ಲದೆ ಮಧೂರು ಕಳಸ ಮೊದಲಾದ ಅನೇಕ ಪ್ರದೇಶಗಳನ್ನು ಆಚಾರ್ಯರು ಸಂದರ್ಶಿಸಿದ್ದಾರೆ.ಆದರೆ ಕಾಲದ ಪರಿಮಿತಿಯಲ್ಲಿರುವ ನಾವು ಕೆಲವು ಪ್ರಮುಖ ಭಾಗಗಳನ್ನು ಮಾತ್ರ ಇಲ್ಲಿ ಸಂಗ್ರಹಿಸಿದ್ದೇವೆ. ಆಚಾರ್ಯರು ಸಂಚರಿಸಿದ ಎಲ್ಲ ಕ್ಷೇತ್ರಗಳೂ ಪರಮಪಾವನವೇ ಆಗಿವೆ. ನಮ್ಮ ಶಕ್ತ್ಯಾನುಸಾರ ಕೆಲವನ್ನು ಮಾತ್ರ ಇಲ್ಲಿ ನಿರೂಪಿಸಲಾಗಿದೆ. ಕ್ಷಮಾಗುಣದ ಓದುಗರು ಇದರಲ್ಲಿರುವ ಉತ್ತಮ ವಿಚಾರಗಳನ್ನು ಸ್ವೀಕರಿಸಿ ಈ ಎಲ್ಲ ಸ್ಥಳಗಳ ಮಾಹಿತಿಯನ್ನು ಎಲ್ಲರಿಗೂ ತಿಳಿಸಲಿ ಎಂಬುದೇ ನಮ್ಮ ಆಶಯ.

- ಮುಕ್ತಾಯ


ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರೀ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರೀ ನಂಬರ್
18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!
ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.


ಮಹಾಭಾರತದ ಕಥೆಯಲ್ಲಿ ಬಾಲಕನಾದ ವೀರ ಅಭಿಮನ್ಯುವಿನ ಚಕ್ರವ್ಯೂಹ (ಪದ್ಮವ್ಯೂಹ) ಬೇಧದ ಕಥೆಯು ಇಂದಿಗೂ-ಅಂದಿಗೂ ಅಜರಾಮರವಾಗಿದೆ. ಮಹಾಭಾರತದ ಯುದ್ಧದಲ್ಲಿ ಪಿತಾಮಹರಾದ ಶ್ರೀ ಭೀಷ್ಮಾಚಾರ್ಯರು ಶಯನ ಶಯ್ಯೆಯನ್ನು ಸ್ವೀಕರಿಸಿದ ಬಳಿಕ ಕೌರವ ದಳದ ಸೇನಾಧಿ ಪತಿ ಸ್ಥಾನವನ್ನು ಕೌರವ ಹಾಗೂ ಪಾಂಡವರಿಬ್ಬರ ಗುರು ಗಳಾದ ದ್ರೋಣಾಚಾರ್ಯರುವಹಿಸಿ ಕೊಂಡರು.

ಕೌರವೇಶನಾದ ದುರ್ಯೋಧನನು ಮೇಲಿಂದ ಮೇಲೆ ತನ್ನ ಗುರುಗಳಾದ ದ್ರೋಣಾಚಾರ್ಯರನ್ನು ನೀವು ಪಾಂಡವರ ಬಗ್ಗೆ ಹೆಚ್ಚು ಒಲವು ತೋರುತ್ತಿರುವಂತೆ ನನಗೆ ಕಂಡು ಬರುತ್ತಿದೆ. ನಾವೆಲ್ಲ ನಿಮಗೆ ಸೇನಾಧಿಪತ್ಯವನ್ನು ನೀಡಿದರೂ ಕೂಡಾ ಯುದ್ಧಲ್ಲಿ ಮುನ್ನುಗ್ಗಲು ಹಿಂಜರಿಯುತ್ತಿರುವಿರಿ ಎಂದು ಚುಚ್ಚುಮಾತನ್ನಾಡಿದನು. ಆಗ ನಿಕ್ಷಪಕ್ಷಪಾತಿಗಳಾದ ಗುರು ದ್ರೋಣರಿಗೆ ತನ್ನ ಶಿಷ್ಯನಾದ ದುರ್ಯೋಧನನ ಮಾತಿನಿಂದ ತುಂಬಾ ನೋವಾಯಿತು. ಆಗ ಗುರುದ್ರೋಣರು ಕೋಪಾವೇಶದಿಂದ ದುರ್ಯೋಧನನಿಗೆ ಹೀಗೆ ನುಡಿದರು- “ ನಿನ್ನ ಚುರು ನುಡಿಗಳಿಂದ ನನ್ನ ಕೋಪಾಗ್ನಿಯ ಜ್ವಾಲೆ ಪ್ರಜ್ವಲಿಸುತ್ತಿದೆ. ನಾಳಿನ ಯುದ್ಧದಲ್ಲಿಯೆ ನನ್ನ ಸಾರಥ್ಯದಲ್ಲಿ ಒಬ್ಬ ಪಾಂಡವನ ತಲೆಯನ್ನಾದರೂ ಧರೆಗೆ ಉರುಳಿಸುವೆ.”ಎಂದು ದಾಪುಗಾಲಿಡುತ್ತ ತಮ್ಮ ಶಿಬಿರದತ್ತ ಸಾಗಿದರು.

ಗುರುದ್ರೋಣರು ಕೂಡಲೇ ಕಾರ್ಯ ಪ್ರವರ್ತರಾದರು. ನಾಳಿನ ಯುದ್ಧಕ್ಕಾಗಿ ಅವರು ಯಾರೂ ಭೇದಿಸದಂತೆ “ಚಕ್ರವ್ಯೂಹ” (ಪದ್ಮವ್ಯೂಹ) ವನ್ನು ರಚಿಸಿದರು.ಆ ಚಕ್ರವ್ಯೂಹವು ಅರ್ಜುನನ ಹೊರತಾಗಿ ಬೇರೆಯಾರಿಗೂ ಚಕ್ರವ್ಯೂಹವನ್ನು ಭೇದಿಸುವುದರ ಬಗ್ಗೆ ತಿಳಿದಿರಲಿಲ್ಲ. ಆ ಸಮಯದಲ್ಲಿ ಅರ್ಜುನನು ಭಗವಾನ್ ಶ್ರೀ ಕೃಷ್ಣನೊಂದಿಗೆ ವೈರಿಗಳಾದ ಸಂಸಪ್ತಕರೊಂದಿಗೆ ಸೆಣೆಸಲು ಬಹುದೂರ ಹೋಗಿದ್ದನು. ಇಂಥಹ ಸಮಯದಲ್ಲಿ ದ್ರೋಣರು ಪಾಂಡವರಿಗೆ ಚಕ್ರವ್ಯೂಹವನ್ನೂ ಭೇದಿಸಲು ಆಮಂತ್ರಣವನ್ನು ನೀಡಿದರು.

ಅರ್ಜುನನು ಬೇರೆಡೆಗೆ ತೆರಳಿದ ಕಾರಣ ಪಾಂಡವರೆಲ್ಲರೂ ಚಿಂತಗೆ ಒಳಗಾದರು.ಆಗ ಯುಧಿಷ್ಠರನು ತನ್ನವರೊಂದಿಗೆ ಈ ಸಂಧಿಗ್ಧ ಪರಿಸ್ಥಿತಿಯಿಂದ ಪಾರಾಗಲು ಚರ್ಚಿಸಲು ಪಾಂಡವರನ್ನು ಸಭಾಗ್ರಹಕ್ಕೆ ಬರಮಾಡಿದನು. ಚಕ್ರವ್ಯೂಹವನ್ನು ಭೇದಿಸಲು ಯಾರಿಗೂ ಯಾವ ಉಪಾಯಗಳು ಹೊಳೆಯದೆ ಎಲ್ಲರೂ ಚಿಂತಾಕ್ರಾಂತರಾದರು. ಈ ವಿಷಯವು ಬಾಲಕನಾದ ವೀರ ಅಭಿಮನ್ಯುವಿಗೆ ತಿಳಿದಿದ್ದರಿಂದ ಮಂತ್ರಾಲೋಚನೆ ನಡೆದ ಸಭೆಗೆ ವೀರಾವೇಶದಿಂದ ಆಗಮಿಸಿದನು.

ಅಭಿಮನ್ಯು ಚಿಂತೆಗೊಳಗಾದ ಯುಧಿಷ್ಠರರಿಗೆ ಹೀಗೆ ಹೇಳಿದನು. - ಪಿತಾಶ್ರೀ ಗುರುದ್ರೋಣರು ನನ್ನ ಪಿತಾಶ್ರೀಯವರ ಅನುಪ ಸ್ಥಿತಿಯಲ್ಲಿ ಚಕ್ರವ್ಯೂಹವನ್ನು ರಚಿಸಿ ನಮ್ಮನ್ನು ಆಹ್ವಾನಿಸಿದ್ದನ್ನು ನೋಡಿದರೆ ಇದು ದುರ್ಯೋಧನ ಹಾಗೂ ಶಕುನಿಯ ಕಪಟ ಕರಸ್ಥಾನ ಎಂಬುದರ ಬಗ್ಗೆ ಸಂದೇಹ ಬಾರದೆ ಇರದು. ಇಂಥಹ ಆಪತ್ಸಮಯದಲ್ಲಿ ಚಿಂತಿಸುತ್ತ ಕುಳಿತರೆ ನಡೆಯಲಾರದು. ನನ್ನ ಪಿತಾಶ್ರೀಯವರ ಬದಲು ನಾನೇ ಚಕ್ರವ್ಯೂಹವನ್ನು ಭೇದಿಸಿ ಕೌರವ ಸೇನೆಯನ್ನು ಧೂಳಿ ಪಟ ಮಾಡುವೆ. ನನಗೆ ಕೇವಲ ನಿಮ್ಮ ಶುಭಾಶೀರ್ವಾದ ನೀಡಿರಿ



# ಪಾಂಡವರ ಹೆಮ್ಮೆಯ ಸಂತಾನ ವೀರ ಅಭಿಮನ್ಯು

- ಎಸ್. ಆರ್. ಪೂಜಾರ್

ನಿಮ್ಮ ಆಶೀರ್ವಾದದ ಬಲವೊಂದಿದ್ದರೆ ಇತಿಹಾಸ ಪುಟಗಳಲ್ಲಿ ನಾನು ಸ್ಥಿತಸ್ಥಾಯಿ ಗೊಳಿಸುವೆ. ಈ ಸಂಗ್ರಾಮದಲ್ಲಿ ನನಗೆ ವೀರಮರಣ ಬಂದರೂ ನಾನು ಲೆಕ್ಕಿಸಲಾರೆ ಎಂದು ಅಭಿ ಮನ್ಯುವು ಎಲ್ಲರೆದುರು ಗುಡುಗಿದನು. ಅಭಿಮನ್ಯುವಿನ ವೀರಾ ವೇಶದ ರೌದ್ರರೂಪವನ್ನು ಕಂಡು ಸಭಾಸದರೆಲ್ಲ ಬೆಚ್ಚಿಬಿದ್ದರು.

ಅಭಿಮನ್ಯುವಿನ ನೇತ್ರಗಳಲ್ಲಿ ಕೆಂಡದುಂಡೆಗಳು ಚಿಮ್ಮಿ ದವು.ಆತನು ತನ್ನ ಸೊಂಟದಲ್ಲಿಯೇ ಖಡ್ಗವನ್ನು ಸೆಳೆದರೆಲ್ಲ ಝಳಪಿಸತೊಡಗಿದನು. ಆಗ ಅಲ್ಲಿನೆರೆದಿದ್ದ ಸಭಾಸದರೆಲ್ಲ "ಸಿಂಹದ ಹೊಟ್ಟೆಯಲ್ಲಿ ಸಿಂಹವೇ ಹುಟ್ಟಿದೆ"ಎಂದು ಅಭಿ ಮನ್ಯುವನ್ನು ಜೈಜೈಕಾರ ಮಾಡಿ ಪ್ರೋತ್ಸಾಹಿಸಿದರು.

ಉತ್ತೇಜಿತನಾದ ವೀರ ಅಭಿಮನ್ಯು ನಾಳಿನ ಯುದ್ಧದಲ್ಲಿ ಸಾರಥ್ಯವಹಿಸುವದಾಗಿ ಘೋಷಿಸಿದಾಗಿ ನಿರುತ್ಸಾಹಿಗಳಾದ ಪಾಂಡವರ ಪಡೆಯಲ್ಲಿ ಎಲ್ಲರಲ್ಲೂ ಉತ್ಸಾಹ ತುಂಬಿ ಜಯ ಘೋಷ ಮಾಡಿದರು. ಯುಧಿಷ್ಠರನು ತನ್ನ ಎರಡು ಕಣ್ಣು ಗಳಿಂದ ಆನಂದಬಾಷ್ಪ ಸುರಿಸಿ ಓಡಿಬಂದು ವಾತ್ಸಲ್ಯಾಭಿ ಮಾನದಿಂದ ಅಭಿಮನ್ಯುವನ್ನು ಬಿಗಿದಪ್ಪಿ ಆತನ ಮೈದಡ ವಿದನು ಹಾಗೂ ಹೃದಯ ಸ್ಪರ್ಶಿಯಾಗಿ ಅಭಿಮನ್ಯುವಿಗೆ ಈ ರೀತಿ ನುಡಿದನು,

ಮಗು ಅಭಿಮನ್ಯು ಶ್ರೀ ಗುರುದ್ರೋಣರು ನಮಗಾರಿಗೂ ತಿಳಿಯದ ಚಕ್ರವ್ಯೂಹವನ್ನು ರಚಿಸಿ ನಮಗೆ ಯುದ್ಧಕ್ಕೆ ಆಮಂತ್ರಿಸಿದ್ದಾರೆ.ನಮ್ಮಲ್ಲಿ ಅರ್ಜುನನ ಹೊರತಾಗಿ ಯಾರಿಗೂ ಚಕ್ರವ್ಯೂಹದ ಭೇದ ಮಾಡಲು ತಿಳಿದಿಲ್ಲ. ಇಂಥಹ ಪ್ರಸಂಗದಲ್ಲಿ ಅಭಿಮನ್ಯು ನೀನು ಹೇಗೇ "ಚಕ್ರವ್ಯೂಹ" ಭೇದಿಸಿ ಯುದ್ಧ ಮಾಡುವೆ?ಎಂದು ಕಳವಳದಿಂದ ಯುಧಿಷ್ಠರನು ಅಭಿಮನ್ಯು ವನ್ನು ಕೇಳಿದನು. ಕಳವಳ ಆತಂಕದಿಂದ ಪರಿತಪಿಸುತ್ತಿದ್ದ ಯುಧೀಷ್ಠರನಿಗೆ ಅಭಿಮನ್ಯು ಹೀಗೆ ಹೇಳಿದನು-ನಿಮಗೆಲ್ಲರಿಗೂ ಚಕ್ರವ್ಯೂಹವನ್ನು ಭೇದಿಸುವ ಕಲೆ ತಿಳಿದಿರಲಾರದು.ಆದರೆ ನನಗೆ ಚಕ್ರವ್ಯೂಹವನ್ನು ಹೇಗೆ ಭೇದಿಸಬೇಕೆಂಬ ಕಲೆಯು ತಿಳಿದಿದೆ ಎಂದು ಹೇಳಿದಾಗ ಯುಧಿಷ್ಠರನಿಗೆ ಅಚ್ಚರಿಮೂಡಿತು.

ಮಗು ನಿನ್ನ ತಂದೆಯಾದ ಅರ್ಜುನನ ಹೊರತಾಗಿ ಚಕ್ರ ವ್ಯೂಹವನ್ನು ಭೇದಿಸುವ ಕಲೆ ತಿಳಿದಿಲ್ಲವೆಂಬ ಭಾವನೆ ನನಗಿದೆ.ಆದರೆ ನೀನು ಚಕ್ರವ್ಯೂಹ ಭೇದಿಸುವೆ ಕಲೆ ನನಗೆ ತಿಳಿದಿದೆ ಎಂದು ಹೇಳುವುದನ್ನು ಕಂಡು ಇದು ಕನಸೋ ಅಥವಾ ನನಸೋ ನನಗೆ ತಿಳಿಯುತ್ತಿಲ್ಲ. ಆಗ ಅಭಿಮನ್ಯು ಮುಗುಳ್ನಗೆ ಬೀರಿ ಪಿತಾಶ್ರೀ ನಾನು ನನ್ನ ಮಾತಾಶ್ರೀ ಸುಭದ್ರ ಮಾತೆಯ ಗರ್ಭದಲ್ಲಿದ್ದಾಗ ನನ್ನ ಪಿತಾಶ್ರೀಯವರು ನನ್ನ ತಾಯಿಯ ಬಳಲಿಕೆಯ ನೋವನ್ನು ನಿವಾರಿಸಲು "ಚಕ್ರ ವ್ಯೂಹ" ಭೇದಿಸುವುದನ್ನು ಹೇಳುತ್ತಿದ್ದರು. ಆಗ ನಾನು ಇದನ್ನು ನನ್ನ ಮಾತಾಶ್ರೀಯವರು ಗರ್ಭದಲ್ಲಿದ್ದಾಗಲೇ ಕೇಳಿಸಿ ಕೊಂಡಿರುವೆ. ನನ್ನ ಪಿತಾಶ್ರೀಯವರು ನನ್ನ ತಾಯಿಗೆ ಚಕ್ರ ವ್ಯೂಹದ ಮೊದಲ ದ್ವಾರದಿಂದ ಆರನೇ ದ್ವಾರದವರೆಗೆ ಚಕ್ರವ್ಯೂಹ ಭೇದಿಸುವವರೆಗೆ ಹೇಳುತ್ತಿದ್ದರು.ಆದರೇ ಏಳನೆ ದ್ವಾರ ದಾಟುವ ಬಗ್ಗೆ ನನ್ನ ಪಿತಾಶ್ರೀ ಹೇಳಬೇಕೆಂಬಷ್ಟರಲ್ಲಿ ಅವರ ಬಳಲಿಕೆ ಉಪಶಮನಗೊಂಡು ನಿದ್ರೆ ಹೋಗಿದ್ದರು. ನನ್ನ ಮಾತೆಯವರು ಏಳನೇದ್ವಾರದ ಬಗ್ಗೆ ಕೇಳದೆ ನಿದ್ರೆಗೆ ಶರಣಾ ದರು. ಆಗ ನನ್ನ ಪಿತಾಶ್ರೀಯವರು ನನ್ನ ತಾಯಿಯವರನ್ನು ಎತ್ತಿ ಕೊಂಡು ಹೋಗಿ ಹಂಸತೂಲಿಕಾ ತಲ್ಪದಲ್ಲಿ ಮಲಗಿ ಸಿದರು. ಹೀಗಾಗಿ ನನಗೆ ಏಳನೇದ್ವಾರದ ದಾರಿ ಮಾತ್ರ ಗೊತ್ತಿರುವುದಿಲ್ಲ ಎಂದು ಹೇಳಿದಾಗ, ವೀರ ಭೀಮಶೇನನು ಮಗು ಅಭಿಮನ್ಯು ನೀನು ನಿನಗೆ ಗೊತ್ತಿರುವ ಚಕ್ರವ್ಯೂಹದ ಆರನೇ ಬಾಗಿಲವರೆಗೆ ಶತ್ರು ಸೈನ್ಯವನ್ನೂ ಸದೆಬಡಿಯುತ್ತ ನಡೆ ನಾನು ನಿನ್ನನ್ನು ಹಿಂಬಾಲಿಸಿ ಬರುವೆ. ನನ್ನ ಭಾರವಾದ ಗದೆ ಯಿಂದ ಏಳನೇ ಬಾಗಿಲನ್ನು ಒಡೆದು ಮುನ್ನುಗ್ಗಿ ಶತ್ರು ಸೈನ್ಯವನ್ನು ಸದೆ ಬಡೆಯುವೆ ಎಂದು ವೀರಾವೇಶದಿಂದ ಹುರಿದುಂಬಿ ಸಿದನು.ಯುಧಿಷ್ಠರನು ಭೀಮಶೇನ ಹಾಗೂ ಅಭಿಮನ್ಯುವಿನ ಕಾರ್ಯ ಧೈರ್ಯದ ಬಗ್ಗೆ ವಿಶ್ವಾಸವುಂಟಾದರು ಅಭಿಮನ್ಯು ಇನ್ನು ಚಿಕ್ಕವನಾಗಿದ್ದುದರಿಂದ ಅಳುಕುವುಂಟಾಯಿತು.ಆದರೂ ಅನಿವಾರ್ಯವಾಗಿ ಒಪ್ಪಿಲೇ ಬೇಕಾಯಿತು.

ದಿನನಿತ್ಯದಂತೆ ರಾತ್ರಿ ಕಳೆದು ಬೆಳಗಾಯಿತು ಸಮರ ಆಹ್ವಾನದ ಕಣೆಕಹಳೆ ಮೊಳಗಿತು.ಎರಡೂ ಪಕ್ಷದ ಸೇನಾ ಧಿಪತಿಗಳೂ ತಮ್ಮ ಸೈನ್ಯದೊಂದಿಗೆ ರಣರಂಗದತ್ತ ಸಾಗಿ ಬಂದರು.ಕೌರವರ ಪಕ್ಷದಲ್ಲಿ ಅತಿರಥ ಮಹಾರಥರೇ ಇದ್ದರು. ಪಾಂಡವರ ಸೇನಾಧಿಪತಿಯಾದ ಬಾಲಕ ಅಭಿಮನ್ಯುವನ್ನು ಕಂಡು ಎಲ್ಲರೂ ಮರುಕಪಟ್ಟರು. ಅಭಿಮನ್ಯು ಶತ್ರುಗಳ ಅಪಾರ ಸೈನ್ಯಕ್ಕೆ ಅಧಿಪತಿಯಾಗಿ ಚಕ್ರವ್ಯೂಹದತ್ತ ರಣಕಹಲೆ ಹಾಕಿ ತನ್ನ ರಥವನ್ನು ಸಾಗಿಸಿದನು. ಆತನ ಸೈನಿಕರು ಅಭಿಮನ್ಯು ವನ್ನು ಹಿಂಬಾಲಿಸಿದರು.ಚಕ್ರವ್ಯೂಹದ ಪ್ರವೇಶದ್ವಾರದಲ್ಲಿ ಗುರು

ದ್ರೋಣರು ದುರ್ಯೋಧನನ ಬದಲಾಗಿ ಜಯದ್ರತನನ್ನೂ ನಿಯುಕ್ತಿ ಗೊಳಿಸಿ ನಿಲ್ಲಿಸಿದ್ದರು.

ದ್ರೋಣರು ಮೊಟ್ಟಮೊದಲು ಜಯದ್ರತನನ್ನು ಏಕೆ ನೇಮಿಸಿದ್ದರೆಂದರೆ ಆತನು ಸಾಕ್ಷಾತ್ ಪರಶಿವನಿಂದ ವರವನ್ನು ಪಡೆದಿದ್ದನು. ಆ ವರವು ಏನಾಗಿತ್ತೆಂದರೆ ಅರ್ಜುನನ ಹೊರತಾಗಿ ಉಳಿದ ಯಾವ ಪಾಂಡವರೂ ಆತನನ್ನು ಸೋಲಿಸಲಾರರೆಂಬ ವರವನ್ನು ಪಡೆದಿದ್ದನು. ಆದರೆ ಅಭಿಮನ್ಯು ಅರ್ಜುನನ ವಂಶಸ್ಥನೇ ಅಲ್ಲವೆ? ಹೀಗಾಗಿ ಜಯದ್ರತನು ತನ್ನ ಎಷ್ಟೇ ಯುದ್ಧ ಕೌಶಲ್ಯವನ್ನು ಅಭಿಮನ್ಯುವಿನ ಮೇಲೆ ಪ್ರಯೋಗಿಸಿದರೂ ಆತನ ಆಟವು ನಡೆಯದಾಯಿತು. ಅಭಿಮನ್ಯು ಪರಾಕ್ರಮದಿಂದ ತನ್ನ ರಥವನ್ನು ಚಕ್ರವ್ಯೂಹದ ಮಧ್ಯದಲ್ಲಿಯೇ ತಂದು ನಿಲ್ಲಿಸಿದನು. ಆಗ ಅರ್ಜುನ ಕುಮಾರನ ಮೇಲೆ ಏನೂ ಮಾಡಲಾರದೆ ಹತಾಶನಾಗಿ ಕೈಚೆಲ್ಲುವಂತಾಯಿತು. ಆಗ ಅಭಿಮನ್ಯುವಿನ ರಥವು ಮುಂದೆ ನುಗ್ಗಿತು. ಜಯದ್ರತನನ್ನು ಅಭಿಮನ್ಯುವಿನ ಹೊರತಾಗಿ ಉಳಿದಾವ ಪಾಂಡವರು ಏನೂ ಮಾಡಲು ಅಸಮರ್ಥರಾದರು. ಏಕೆಂದರೆ ಅದು ಜಯದ್ರತನು ಪರಶಿವನಿಂದ ಪಡೆದ ವರದಾನದ ಮಹತ್ವವಾಗಿತ್ತು. ಒಬ್ಬಂಟಿಗನಾದ ಅಭಿಮನ್ಯು ತಾನು ಒಬ್ಬನೇ ಚಕ್ರವ್ಯೂಹದಲ್ಲಿ ಮುನ್ನುಗ್ಗಿದನು. ಉಳಿದ ಪಾಂಡವರು ಆತನನ್ನು ಅನುಸರಿಸಲು ಅಸಮರ್ಥರಾಗಿ ನಿರಾಶರಾಗುವಂತಾಯಿತು.

ವೀರ ಅಭಿಮನ್ಯು ತನ್ನ ಸ್ವಸಾಮರ್ಥ್ಯದಿಂದ ತನ್ನ ವೀರಾವೇಶವನ್ನು ಪ್ರವರ್ಶಿಸುತ್ತ ಚಕ್ರವ್ಯೂಹದ ಒಂದೊಂದೆ ದ್ವಾರಗಳನ್ನು ದಾಟುತ್ತ ಮುಂದೆ ಸಾಗಿದನು. ಒಂದೊಂದು ದ್ವಾರದಲ್ಲಿ ಕೌರವ ದಳದ ಒಬ್ಬೊಬ್ಬ ಅಥಿರಥ ಮಹಾರಥಿಗಳು ಆದ ದ್ರೋಣಾಚಾರ್ಯರು ಕೃಪಾಚಾರ್ಯರು, ಕರ್ಣ, ದುಶ್ಯಾಸನ, ಶಕುನಿ ಹಾಗೂ ದುರ್ಯೋಧನರನ್ನು ಚಿಕ್ಕ ಬಾಲಕ ಅಭಿಮನ್ಯು ಅವರನ್ನೆಲ್ಲರನ್ನು ವೀರಾವೇಶದಿಂದ ಎದುರಿಸಿ ಅವರನ್ನೆಲ್ಲರನ್ನು ನಿಶ್ಯಸ್ತ್ರರನ್ನಾಗಿ ಮಾಡಿದನು.

ಮಹಾಭಾರತ ದ್ರೋಣಪರ್ವದಲ್ಲಿ ವರ್ಣಿಸಿದ ಪ್ರಕಾರ ಹೀಗೆ ವರ್ಣಿಸಲಾಗಿದೆ - ಹೇಗೆಂದರೆ ಯಜ್ಞವನ್ನು ಗೈಯ್ಯುವಾಗ ವೇದದ ಮೇಲೆ ಹೇಗೆ ಕುಶವನ್ನು ಅರ್ಪಿಸುವರೋ ಅದೆ ಪ್ರಕಾರವಾಗಿ ಅಭಿಮನ್ಯುವು ತನ್ನ ಶತ್ರುಗಳ ಅವಯವಗಳನ್ನು ರಣಭೂಮಿಯ ತುಂಬೆಲ್ಲ ಶವಗಳ ರಾಶಿಯನ್ನೇ ಬಿಟ್ಟು ಬಿಟ್ಟನು. ಈ ದೃಶ್ಯವನ್ನು ಕಂಡ ದರ್ಯೋಧನನು ತನ್ನ ಕಣ್ಣೆದುರಿನಲ್ಲೇ ನಡೆದ ಮಾರಿಣ ಹೋಮವನ್ನು ಕಂಡು ಆತಂಕಗೊಂಡನು. ದುರ್ಯೋಧನನಿಗೆ ಆತಂಕ ಹಾಗೂ ಭಯವುಂಟಾಗಿ ಮಾತುಗಳು ಹೊರಡದಾದವು. ಆತನು ತತ್ತರಿಸತೊಡಗಿದನು. ನಂತರ ಯುದ್ಧ ನೀತಿಯನ್ನು ಉಲ್ಲಂಘಿಸಿ ತನ್ನ ಸೈನ್ಯಬಲದ ಮುಖಂಡರಾದ ಆರುಜನ ಅತಿರಥ ಮಹಾರಥಿಗಳನ್ನು ಬಾಲಕನಾದ ಒಬ್ಬಂಟಿಗನಾಗಿ ಸೆಣಸುತ್ತಿದ್ದ ವೀರ ಅಭಿಮನ್ಯುವಿನ ಮೇಲೆ ಏಕಕಾಲದಲ್ಲಿ ಎಲ್ಲರೂ ದಾಳಿ ಮಾಡುವಂತೆ ನುಗ್ಗಿಸಿದನು. ದುರ್ಯೋದನನ ಆಜ್ಞೆಯಂತೆ ಆರೂಜನರು ಒಮ್ಮಲೇ ಅಭಿಮನ್ಯುವಿನ ಮೇಲೆ ಏಕಕಾಲಕ್ಕೆ ಆಕ್ರಮಣ ಮಾಡಿಬಿಟ್ಟರು. ಈ ಅನಿರಿಕ್ಷಿತ ದಾಳಿಯಿಂದ ಅಭಿಮನ್ಯು ಅಧೀರನಾಗದೆ ಎಲ್ಲರನ್ನು ತಾನು ಒಬ್ಬನೇ ಎದುರಿಸಿದನು. ಆದರೆ ಒಮ್ಮೆಲೆ ಆರುಜನ ಬಾಲಕನ ಮೇಲೆ ಏಕಕಾಲದಲ್ಲಿ ಎರಗಿದ್ದರಿಂದ ಅವರ ಕೈ ಮೇಲಾಗತೊಡಗಿತು. ಅವರು ಅಭಿಮನ್ಯುವಿನ ಮೇಲೆ ಏಕ ಕಾಲದಲ್ಲಿ ದಾಳಿ ನಡೆಸಿ ಅಭಿಮನ್ಯುವಿನ ಶರೀರದ ತುಂಬ ಬಾಣ ಬತ್ತಳಿಕೆಗಳಿಂದ ದಾಳಿ ಮಾಡಿದರು. ಅಭಿಮನ್ಯುವಿನ ದೇಹದಿಂದ ರಕ್ತದ ಕಾರಂಜಿ ಚಿಮ್ಮತೊಡಗಿತು. ಅಭಿಮನ್ಯುವಿನ ಬತ್ತಳಿಕೆಯಲ್ಲಿಯ ಬಾಣಗಳು ತುಂಡರಿಸಿ ಕೆಳಗೆ ಬಿದ್ದವು. ಆತನ ಖಡ್ಗವು ಕೂಡಾ ತುಂಡಾಗಿ



ಕೆಳಗೆ ಬಿದ್ದಿತು. ಅಭಿಮನ್ಯುವಿನ ದೇಹವು ಛಿದ್ರ ಛಿದ್ರವಾಗಿ ರಕ್ತದ ಕಾಲುವೆ ಹರಿದರೂ ಆತನಿಗೆ ಯಾವ ವೇದನೆಯುಂಟಾಗಲಿಲ್ಲ. ಕೊನೆಗೆ ರಥದ ಚಕ್ರವನ್ನೇ ಸುದರ್ಶನ ಚಕ್ರವನ್ನು ತಿರುಗಿಸಿದಂತೆ. ತಿರುಗಿಸುತ್ತ ಕೌರವರನ್ನು ಆಕ್ರಮಿಸುತ್ತ ತನ್ನ ಜೀವನದ ಉಸಿರಿರುವವರೆಗೂ ಹೋರಾಡಿ ತನ್ನ ತಂದೆಯಾದ ಅರ್ಜುನ ನನ್ನು ಹಾಗೂ ಮಾಮಾ ಶ್ರೀ ಕೃಷ್ಣನನ್ನು ಸ್ಮರಿಸಿ ವೀರಸ್ವರ್ಗ ವನ್ನು ಸೇರಿದನು.

ಯುದ್ಧ ನೀತಿಯನ್ನು ಉಲ್ಲಂಘಿಸಿ ಅಭಿಮನ್ಯುವಿನ ಮೇಲೆ ಎಲ್ಲ ಕೌರವರು ಅತಿಕ್ರಮೇಣ ಗೈದದ್ದನ್ನು ಕಂಡ ಗುರು ದ್ರೋಣರು ಕೌರವರಿಗೆ ಇದು ತಪ್ಪು ಎಂದು ಹೇಳಿದರು. ಅವರು ಹೇಳಿದ್ದರೂ ಕೌರವರು ತಮ್ಮ ಗುರುಗಳ ಮಾತನ್ನು ಕೇಳದ ಸ್ಥಿತಿಯಲ್ಲಿ ಅವರು ಇದ್ದರು. ಆದರೆ ಗುರುದ್ರೋಣರು ಹಾಗೂ ಕೃಪಾಚಾರ್ಯರು ಅಭಿಮನ್ಯುವಿಗಾಗಿ ತಮ್ಮ ಮನಸ್ಸಿನಲ್ಲಿಯೇ ಕೊರಗಿ ಆತನನ್ನು ಆಶೀರ್ವದಿಸಿ ಆತನ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಅವರಿಬ್ಬರಿಗೆ ನಾವು ಈ ಜಗತ್ತಿನಲ್ಲಿ ಅಧರ್ಮಿಗಳೆನಿಸಿದೆವಲ್ಲ ಎಂಬ ಕೊರಗು ಅವರನ್ನು ಕಾಡತೊಡಗಿತು.

ಅಭಿಮನ್ಯುವಿನ ವೀರಕಥೆಯು ಅತ್ಯದ್ಭುತವಾಗಿದೆ. ಯಾರೇ ಆಗಲಿ ಚಕ್ರವ್ಯೂಹದ ಭೇದನೆಯನ್ನು ತನ್ನ ಮಾತೃ ಗರ್ಭದಲ್ಲಿದ್ದಾಗಲೇ ಕೇಳಿ ಆಸ್ಮರಣೆಯ ಆಧಾರದಿಂದಲೇ ಚಕ್ರ ವ್ಯೂಹವನ್ನು ಧೈರ್ಯಸಾಹಸಗಳಿಂದ ಭೇದಿಸಿ ಸಂಗ್ರಾಮಕ್ಕೆ ನುಗ್ಗಿ ವೀರಸ್ವರ್ಗ ಸೇರಿದ್ದನು ಯಾರೂ ಎಂದಿಗೂ ಮರೆಯಲಾರರು. ಎಲ್ಲರೂ ತಿಳಿದಿರುವಂತೆ ಯಾವ ಮಾತೆಯೂ ಗರ್ಭಾವಸ್ಥೆಯಲ್ಲಿದ್ದಾಗ ತನ್ನ ಮಗುವನ್ನು ಪೋಷಿಸಲು ಹಾಗೂ ತನ್ನ ಮಗು ಭೂಮಿಗೆ ಬಂದಾಗ ಹೇಗಿರುವನೋ ಎಂಬ ಚಿಂತೆಯಿಂದ ಬಳಲುತ್ತಾರೆ. ಅವರ ಮನಸ್ಸು ಕಳವಳದಿಂದ ಅಶಾಂತಿಯ ಗೂಡಾಗಿರುತ್ತದೆ. ಆಯಾಸದಿಂದ ಅವರು ಕೊರಗಿ ಸೊರಗುತ್ತಾರೆ. ಅವರನ್ನು ಪ್ರಸನ್ನರಾಗಿ ಇರಿಸಲು ಅವರು ವೀರರಕಥೆಗಳನ್ನು ಹಾಗೂ ಹಾಡುಗಳಿಂದ ಸಂತೋಷದಿಂದ ಇರಿಸುತ್ತಾರೆ. ಅದೆ ಪ್ರಕಾರವಾಗಿ ಅಭಿಮನ್ಯು ತನ್ನ ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವಾಗ ರಾಣಿ ಸುಭದ್ರೆ ಉದಾಸೀನರಾದಾಗ ಆಕೆಯನ್ನು ಪ್ರಸನ್ನಗೊಳಿಸಲೆಂದು ಆಕೆಯ ಮನಸ್ಸನ್ನು ಸೆಳೆಯಲು ಅರ್ಜುನನು ಚಕ್ರವ್ಯೂಹವನ್ನು ಭೇದಿಸುವ ಕಥೆಯನ್ನು ಹೇಳಿರಬಹುದು. ತನ್ನ ಪತಿಯಿಂದ ಚಕ್ರವ್ಯೂಹದ ಕಥೆಯನ್ನು ಕೇಳಿದ ಸುಭದ್ರೆಯ ಮನಸ್ಸು ಪ್ರಫುಲ್ಲಿತವಾಗಿರಲೂಬಹುದು. ಆಗ ಆಕೆಯು ಶಾಂತಚಿತ್ತಳಾಗಿ ನಿದ್ರಿಸಿರಲೂಬಹುದು. ಅರ್ಜುನನು ತನ್ನ ಪತ್ನಿಗೆ ಹೇಳಿದ ಕಥೆಯನ್ನು ಗರ್ಭದಲ್ಲಿರುವ ವೀರಪುತ್ರ ಅಭಿಮನ್ಯು ಕೇಳಿರಲೂ ಬಹುದು. ಆದ ತಾನು ಗರ್ಭಾವಸ್ಥೆಯಲ್ಲಿದ್ದಾಗ ಕೇಳಿದ ಕಥೆಯನ್ನು ತನ್ನ ಜ್ಞಾಪಕದಲ್ಲಿಟ್ಟುಕೊಂಡು ತಾನು ದೊಡ್ಡವನಾದ ಮೇಲೆ ಅದನ್ನೇ ಸವಾಲಾಗಿ ಸ್ವೀಕರಿಸಿ ಚಕ್ರವ್ಯೂಹವನ್ನು ಭೇದಿಸುವಾಗ ವೀರಸ್ವರ್ಗವನ್ನು ಪಡೆದದ್ದು ಅಚ್ಚರಿಯಾಗದೆ ಇರದು ಇಂದಿನ ಮುಂದುವರೆದ ವಿಜ್ಞಾನದ ಬಗ್ಗೆ ರಹಸ್ಯ ಭೇದಿಸುವನು ಸವಾಲಾಗಿದೆ. ಇದಲ್ಲದೆ ಎಲ್ಲಾ ತಾಯಂದಿರು ತಮ್ಮ ಮಕ್ಕಳನ್ನು ಮಲಗಿಸುವಾಗ ಜೋಗುಳವನ್ನು ಹಾಡಿ ಮಲಗಿಸುವಂತೆ ಸುಭದ್ರೆಯು ಅಭಿಮನ್ಯುವನ್ನು ಮಲಗಿಸುವಾಗ ಚಕ್ರವ್ಯೂಹದ ಹಾಡನ್ನು ಹಾಡಿ ತನ್ನ ಮಗನನ್ನು ಮಲಗಿಸುತ್ತಿದ್ದಿರಬಹುದು. ಸುಭದ್ರೆಯ ಉದರದಲ್ಲಿ ವೀರಪುತ್ರ ಅಭಿಮನ್ಯು ಜನಿಸಿದಂತೆ ಮಹರ್ಷಿಗಳ ಆಶ್ರಮದಲ್ಲಿ ಸೀತಾಮಾತೆಯ ಉದರದಲ್ಲಿ ಜನಿಸಿದ ಲವ - ಕುಶರು ಕೂಡಾ ಸೀತಾಮಾತೆಯ ಹಾಗೂ ವಾಲ್ಮಿಕೀ ಮಹರ್ಷಿಗಳ ಹಿತೋಪದೇಶದಿಂದ ಕೇವಲ ಹನ್ನೇರಡು ವರ್ಷದ ಮಕ್ಕಳಿದ್ದಾಗ ಪ್ರಭು ಶ್ರೀ ರಾಮನ ಅಶ್ವಮೇಧಯಾಗದ ಕುದುರೆಯನ್ನು ದಿಟ್ಟತನದಲ್ಲಿ ಕಟ್ಟಿಹಾಕಿ ಶ್ರೀರಾಮನ ಸೈನ್ಯವನ್ನೇ ಸೋಲಿಸಿ ಅವರ ತಂದೆ - ಚಿಕ್ಕಪ್ಪಂದಿರೊಂದಿಗೆ ವೀರಾವೇಶದಿಂದ ಯುದ್ಧಗೈದು ಜಯಶಾಲಿ ಎನಿಸಿದರು. ಅದೇ ಪ್ರಕಾರವಾಗಿ ಮಾತಾಜೀಜಾಬಾಯಿಯ ಉದರದಲ್ಲಿ ವೀರಛತ್ರಪತಿ ಶಿವಾಜಿಯು ಜನಿಸಿ ಆಂಗ್ಲರೊಂದಿಗೆ ಹೋರಾಡಿ ಸಾಮ್ರಾಜ್ಯ ಸ್ಥಾಪಕನೆನಿಸಿದನು.


ನಮ್ಮ ದೇಶಕ್ಕೆ ಸುಭದ್ರ, ಸೀತಾಮಾತೆ, ಜೀಜಾಬಾಯಿಯಂಥಹ ತಾಯಂದಿರ ಅವಶ್ಯಕತೆ ತುಂಬ ಇದೆ. ಇಂಥವರ ಉದರದಲ್ಲಿ ವೀರಪುತ್ರರು ಜನಿಸಿ ಉತ್ತಮವಾದ ಸಂಸ್ಕಾರವನ್ನು ಪಡೆದು ಭಾರತಮಾತೆಯ ಕೀರ್ತಿಪತಾಕೆಯನ್ನು ಜಗತ್ತಿನ ಉದ್ದಗಲಕ್ಕೆ ಹರಡಬೇಕಾಗಿದೆ. ಇದೆಲ್ಲದಕ್ಕೆ ಭಗವಂತನ ಕೃಪೆ ಹಾಗೂ ಕೃಪಾಶೀರ್ವಾದ ಕರುಣೆಯು ಅತ್ಯವಶ್ಯ ಬೇಕಾಗಿದೆ.

"ಮಾತೃದೇವೋಭವ
ಪಿತೃದೋವೋಭವ
ಆಚಾರ್ಯ ದೇವೋಭವ"

# ತಪಸ್ಸಿನಿಂದ ಸಕಲ ವಿಜಯಗಳು ಸಾಧ್ಯ

**ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್**

**ಅನುವಾದ - ಡಿ.ಎಸ್. ಭೂಮಿಕ**



ವಾಹನವನ್ನು ನಡೆಸಬೇಕೆಂದರೆ ಇಂಧನವಿರಬೇಕು, ವಾಹನದ ಆರಂಭಗೊಳ್ಳಬೇಕಾದರೆ ಬ್ಯಾಟರಿಯಿರಬೇಕು, ಮನುಷ್ಯ ಓಡ ಬೇಕೆಂದರೆ ಶಕ್ತಿಯಿರಬೇಕು, ಹಾಗೆಯೇ ವಿಜಯವನ್ನು ಸಾಧಿಸಬೇಕೆಂದರೆ 'ತಪಸ್ಸು' ಅಗತ್ಯವಿದೆ. ಲೋಕೋತ್ತರವಾದ ಗುರಿಯನ್ನು ಸಾಧಿಸಬೇಕೆಂದರೂ ಯಾವುದೇ ಸರ್ವೇಸಾಮಾನ್ಯಕರವಾದ ವಿಷಯವನ್ನು ಸಾಧಿಸಬೇಕೆಂದರೂ ತಪಸ್ಸು ಅವಶ್ಯವಾಗಿ ಬೇಕಾಗುತ್ತದೆ. ನಿಜಕ್ಕೆ ಈ ತಪಸ್ಸೆಂದರೇನು? ಜೀವನದಲ್ಲಿ ಈ ತಪಸ್ಸಿನ ಮಹತ್ವವನ್ನರಿಯದ ಮಾನವರು ಅದೆಷ್ಟೋ ಸುವರ್ಣಾವಕಾಶಗಳನ್ನು ಲೀಲಾಜಾಲವಾಗಿ ಕಳೆದುಕೊಂಡು ಬಿಡುತ್ತಾರೆ. ಶಾರೀರಿಕ ತಾಪವನ್ನುಂಟು ಮಾಡುವುದೇ ಈ ತಪಸ್ಸು, ತಪಸ್ಸಿನ ಮೂಲಕ ಶಾರೀರಿಕ ದಣಿವುಂಟಾಗುತ್ತದೆ. ಆದರೆ ತಪಸ್ಸಿನ ಫಲವಾಗಿ ಎಷ್ಟೋ ಶಕ್ತಿ ಮೈಗೂಡುತ್ತದೆ. ಭಗವಂತನ ದರ್ಶನವನ್ನು ಪಡೆಯಲು ಭಕ್ತಧ್ರುವನು ಆರು ತಿಂಗಳುಗಳವರೆಗೆ ಕಠೋರವಾದ ತಪಸ್ಸನ್ನು ಮಾಡಿದನೆಂದು ಭಾಗವತವು ಅರಹುತ್ತದೆ. ಇಂದಿನ ದಿನಗಳಲ್ಲೂ ವಿದ್ಯಾರ್ಥಿಗಳು ಐಐಟಿಯಲ್ಲಿ ಸೀಟನ್ನು ಪಡೆಯಲು ತಪಸ್ಸೇ ಮಾಡಬೇಕಾಗಿ ಬರುತ್ತದೆ. ಆದರೆ ಇವುಗಳೆಲ್ಲಾ ಅವರಿಗೆ ತಪಸ್ಸೆಂದು ಅನ್ನಿಸುವುದಿಲ್ಲ.ನಾವು ಕಷ್ಟ ಪಡುತ್ತಿದ್ದೇವೆಂದು ಅಂದುಕೊಳ್ಳುತ್ತಾರೆಯೇ ವಿನಃ ತಪಸ್ಸೆಂದು ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ತಮಗೆ ತಕ್ಕುದಾದ ಫಲ ದೊರೆಯುವುದೆಂಬ ಧೈರ್ಯವೂ ಅವರಲ್ಲುಂಟಾಗುವುದಿಲ್ಲ.

ತಪಸ್ಸಿಗೆ ವ್ಯತಿರಿಕ್ತವಾದ ಪದವೇ ಭೋಗ. ಯಾರು ಭೋಗಾವಿಲಾಸಿಯಾಗಿ ವಿಲಾಸ - ವಿನೋದಗಳಲ್ಲಿ ಕಾಲವನ್ನು ಕಳೆಯುತ್ತಾರೋ ಆತನಲ್ಲಿರುವ ಶಕ್ತಿ ಕ್ರಮೇಣ ಕುಂದಿ ಹೋಗುತ್ತವೆ.ಆದರೆ ತಪಸ್ಸಿನಲ್ಲಿ ತೊಡಗಿರುವವನಿಗೆ ಶಕ್ತಿ ನಿರಂತರವಾಗಿ ವೃದ್ಧಿಗೊಳ್ಳುತ್ತಿರುತ್ತದೆ. ವಿಜಯದ ಸಾಧನೆಗೆ ತಪಸ್ಸು ತುಂಬಾ ಅತ್ಯಾವಶ್ಯಕ. ವಾಸ್ತವದಲ್ಲಿ ಅದು ಬೇಕೇ ಬೇಕು. ಆದ್ದರಿಂದಲೇ ವಿಜಯ ಸಾಧನೆಯನ್ನು ಹಂಬಲಿಸುವ ವಿದ್ಯಾರ್ಥಿಗಳು ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ತಪಸ್ಸನ್ನು ಕುರಿತು ತಿಳಿದುಕೊಳ್ಳಬೇಕು. ಅದನ್ನು ಪಾಲಿಸಬೇಕು, ಶಕ್ತಿಯನ್ನು ಹೊಂದಬೇಕು. ಅದರ ಮುಖೇನ ಅವರು ವಿಜಯವನ್ನು ಸಾಧಿಸಬಲ್ಲವರಾಗುತ್ತಾರೆ.

ತಪಸ್ಸುಗಳು ಮೂರು ಬಗೆಯದ್ದಾಗಿವೆ (17 ನೇ ಅಧ್ಯಾಯ 14, 15, 16 ಶ್ಲೋಕಗಳು) ಎಂದು ಭಗವದ್ಗೀತೆ ತಿಳಿಸುತ್ತದೆ.ವಿದ್ಯಾರ್ಥಿಗಳು ಯುವಕರು ಇದನ್ನು ಗಹನವಾಗಿ ಶ್ರದ್ಧೆಯಿಂದ ಪಾಲಿಸಬೇಕು.

"ಭಗವಂತನನ್ನು, ಬ್ರಾಹ್ಮಣರನ್ನು, ಗುರುಗಳನ್ನು, ತಂದೆ - ತಾಯಿಯರಂತಹ ಹಿರಿಯರನ್ನು ಪೂಜಿಸುವುದು, ಶುಚಿಯಾಗಿರುವುದು, ಸರಳ ಸ್ವಭಾವವನ್ನು ಹೊಂದಿರುವುದು,ಬ್ರಹ್ಮಚರ್ಯವನ್ನು ಪಾಲಿಸುವುದು,ಅಹಿಂಸೆ" ಎಂಬುವು ಶಾರೀರಿಕ ತಪಸ್ಸೆಂದು ಕರೆಯಲ್ಪಡುತ್ತವೆ.

"ಸತ್ಯವನ್ನೇ ಹೇಳುವುದು, ಪ್ರಿಯವಾದುದನ್ನೇ ನುಡಿಯುವುದು, ಇತರರನ್ನು ನೋಯಿಸದಿರುವುದು, ಎದುರಾಡದಿರುವುದು ಇವೇ ಅಲ್ಲದೇ ವೈದಿಕಶಾಸ್ತ್ರಗಳನ್ನು ಓದುವುದು" ಸಹಾ ವಾಚಿಕ ತಪಸ್ಸೆಂದು ಹೇಳಲ್ಪಡುತ್ತವೆ.

"ಸಂತೃಪ್ತಿ, ಸರಳತ್ವ, ಮೌನ, ಆತ್ಮನಿಗ್ರಹ, ಸ್ವಯಂ ವ್ಯಕ್ತಿತ್ವವನ್ನು ಶುದ್ಧಿಗೊಳಿಸುತ್ತಿರುವುದು" ಎಂಬುವೇ ಮಾನಸಿಕ ತಪಸ್ಸೆಂದು ಹೇಳಲಾಗುತ್ತದೆ.

ಅಂದರೆ ಭಗವದ್ಗೀತೆಯಲ್ಲಿ ಮೂರು ಬಗೆಯ ತಪಸ್ಸುಗಳು ಹೇಳಲ್ಪಟ್ಟಿವೆ. ಅವು ದೇಹ ದೃಷ್ಟಿಯಿಂದ

ಮಾನಸಿಕ ದೃಷ್ಟಿಯಿಂದ ಶುಚಿಯಾಗಿರುವುದೇ ಆಗಿದೆ. "ಹಿರಿಯರ ಮಾತು ಕಿರಿಯರ ಆಸ್ತಿ" ಎಂಬ ಮಾತಿದೆ. ಹಿರಿಯರನ್ನು ಗೌರವಿಸುವುದು ಸೇವಿಸುವುದು, ಇಂದಿನ ಕಾಲದಲ್ಲಿ ಯಾರೂ ಪೂರ್ಣಗೊಳಿಸಲಾರರು. ಆದ್ದರಿಂದಲೇ ಅವರಿಗೆ ಹಿರಿಯರ ಅನುಗ್ರಹ ದೊರಕುವುದಿಲ್ಲ. ಹಿರಿಯರ ಪರವಾಗಿ ಗೌರವ, ಕೃತಜ್ಞತೆಯಿಂದ ವ್ಯವಹರಿಸುವುದು,ಅವರನ್ನು ಸೇವನೆ ಮಾಡುವುದು ಅದ್ಭುತ ಶಕ್ತಿಯನ್ನು ಪ್ರಸಾದಿಸುತ್ತವೆ.

ನಂತರ ಮಾತುಗಳನ್ನು ನಿಯಂತ್ರಿಸುವುದು ಕೂಡ ಒಂದು ದೊಡ್ಡ ತಪಸ್ಸೇ ಆಗಿದೆ. ಸಾಮಾನ್ಯವಾಗಿ ಎಲ್ಲರೂ ಬಾಯಿಂದ ಅಪಶಕುನವನ್ನೇ ನುಡಿಯುತ್ತಿರುತ್ತಾರೆ. " ಈ ಕೆಲಸವಂತೂ ಆಗದು" " ಈ ಇಂಟರ್‌ವ್ಯೂ ತುಂಬಾ ಕಷ್ಟ" "ಐಐಟಿಯಲ್ಲಿ ಸೀಟು ಬರಲ್ಲ" ಎಂದು ನಾನಾ ಬಗೆಯ ಮಾತುಗಳನ್ನು ಆಡುತ್ತಾ ಆ ಪ್ರಕಾರದ ಫಲಗಳಲನ್ನೇ ಹೊಂದುತ್ತಿರುತ್ತಾರೆ. ಹಾಗಾಗಿ ಬಾಯಿಂದ ಶುಭವಾದ , ಪ್ರಿಯವಾದ ಮಾತುಗಳನ್ನೇ ಆಡಬೇಕು. ಆಧ್ಯಾತ್ಮಿಕ ಗ್ರಂಥಗಳನ್ನು ಓದುವುದೂ ಸಹಾ ಒಂದು ತಪಸ್ಸೇ. ಯಾರಿಗೂ ಮನಸ್ಸು ನೋಯಿಸುವಂತಹ ಮಾತುಗಳನ್ನಾಡಬಾರದು. ಇದೆಲ್ಲಾ ವಾಚಿಕ ತಪಸ್ಸು.

ಇನ್ನು ಮಾನಸಿಕ ತಪಸ್ಸು ಇಂದಿನಕಾಲದಲ್ಲಿ ಬಹಳ ಅವಶ್ಯ. ಅನಾವಶ್ಯಕವಾಗಿ ಮನಸ್ಸನ್ನು ಕೆಡಿಸಬಲ್ಲ ಆಲೋಚನೆಗಳನ್ನೆಂದೂ ಮಾಡಬಾರದೂ. ಅನವಸರವಾದ ಮಾತುಗಳನ್ನು ಎಷ್ಟು ಜಾಸ್ತಿ ಆಡಿದರೆ ಅಷ್ಟೇ ಹೆಚ್ಚಾಗಿ ಮನಸ್ಸು ಕಲುಷಿತಗೊಳ್ಳುತ್ತದೆ. "ನನಗೆ ವಿಜಯ ತಥ್ಯ; ವಿಜಯವು ನನ್ನದೇ" ಎಂದು ಪದೇ ಪದೇ ಹೇಳುವುದರೊಂದಿಗೆ ಮನಸ್ಸು ಬಲಿಷ್ಠವಾಗುತ್ತದೆ.ಭಗವದ್ಗೀತೆಯನ್ನು ಅನುಸರಿಸುವುದರಿಂದ ಸಕಲ ವಿಜಯಗಳು ಸಾಧ್ಯವಾಗುತ್ತವೆ ಎಂದು ಮಾತು ಮಾತಿಗೆ ಹೇಳುತ್ತಿದ್ದರೆ ಮಾನಸಿಕ ದೌರ್ಬಲ್ಯ ಕರಗಿ ಹೋಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು, ಯುವಕರು ಈ ಮೂರು ತಪಸ್ಸುಗಳನ್ನು ಎಷ್ಟೋ ಸಾವಧಾನದಿಂದ ಮಾಡಬೇಕು. ಈ ಮೂರು ತಪಸ್ಸಗಳನ್ನು ಶ್ರದ್ಧೆಯಿಂದ ಮಾಡುವವರು ಮೊದಲು ಗುರಿಯನ್ನು ನಿಶ್ಚಯಿಸಿಕೊಂಡರೆ ಅದರಲ್ಲಿ ವಿಜಯವನ್ನು ಸಾಧಿಸುವುದು ಖಚಿತ. ಇದರಲ್ಲಿ ಯಾವುದೇ ಸಂದೇಹವಿಲ್ಲ. ಲಕ್ಷ್ಯವನ್ನು ನಿಶ್ಚಯಿಸಿಕೊಂಡು ತಪಸ್ಸಿನಲ್ಲಿ ತೊಡುಗುವವನಿಗೆ ವಿಜಯವು ಖಂಡಿತವಾಗಿ ಲಭಿಸುತ್ತದೆ. ಸಕಲ ಸರ್ವತ್ರಾ ವಿಜಯಗಳ ರಹಸ್ಯ ಇದೇ ಆಗಿದೆ.



ತಿರುಮಲೆ ತಿರುಪತಿ ದೇವಸ್ಥಾನಗಳು

'ಸಪ್ತಗಿರಿ' ಸ್ವರ್ಣೋತ್ಸವ ಸಂಚಿಕೆಯ ವ್ಯಾಸಗಳಿಗೆ ಆಹ್ವಾನ!!



ತಿರುಮಲೆ ತಿರುಪತಿ ದೇವಸ್ಥಾನವು ಆಧ್ಯಾತ್ಮಿಕ ಸಚಿತ್ರಮಾಸ ಪತ್ರಿಕೆ "ಸಪ್ತಗಿರಿ". ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ವೇಂಕಟೇಶ್ವರ ಸ್ವಾಮಿಯ ವೈಭವವನ್ನು, ತಿರುಮಲೆ ಕ್ಷೇತ್ರದ ದಿವ್ಯತ್ವವನ್ನು ಪ್ರತಿ ತಿಂಗಳು ಪಾಠಕರಿಗಾಗಿ "ಸಪ್ತಗಿರಿ"ಯು ನೀಡುತ್ತಿದೆ. ಆರು ಭಾಷೆಗಳಲ್ಲಿ ಪ್ರಚುರಣೆಗೊಳ್ಳುತ್ತಿರುವ ಆಧ್ಯಾತ್ಮಿಕ ಧಾರ್ಮಿಕ ಪತ್ರಿಕೆಗಳಲ್ಲಿ ಒಂದಾಗಿದೆ. ಈ ಪತ್ರಿಕೆಯು ಜಿಜ್ಞಾಸೆಯುಳ್ಳವರಿಗೆ,ಮಹಿಳೆಯರಿಗೆ, ಬಾಲರರಿಗೆ ... ಹೀಗೆ ತಾರತಮ್ಯವಿಲ್ಲದೆ ಎಲ್ಲರಿಗೂ ಉಪಯುಕ್ತವಿರುವ ಪತ್ರಿಕೆ ಇದು. "ಸಪ್ತಗಿರಿ" ಪಾಠಕರೆಲ್ಲರ ಗೌರವವನ್ನು ಪಡೆದಿದೆ. ಕಾಲ ಪ್ರವಾಹದಲ್ಲಿ ಪುರೋಭಿವೃದ್ಧಿಯ ಕಡೆಗೆ ಕಾಲಿಡುತ್ತಿದೆ. ಈ ಸಂದರ್ಭವಾಗಿ "ಸಪ್ತಗಿರಿ" ಮಾಸಪತ್ರಿಕೆಯನ್ನು ಸ್ವರ್ಣೋತ್ಸವ ಪ್ರತ್ಯೇಕ ಸಂಚಿಕೆಯಾಗಿ ಪ್ರಚುರಿಸಬೇಕೆಂದುಕೊಳ್ಳುತ್ತಿದೆ ಸಪ್ತಗಿರಿ. ಪಾಠಕರಿಂದ ಸಪ್ತಗಿರಿ ಮಾಸಪತ್ರಿಕೆಯ ಬಗ್ಗೆ ತಮ್ಮ ಅನುಭೂತಿಯನ್ನು ತಮ್ಮ ರಚನೆಗಳ ರೂಪದಲ್ಲಿ ಕಳಿಸಬೇಕಾಗಿ ಕೋರಲಾಗಿದೆ. ಅದನ್ನು ಪರಿಶೀಲಿಸಿ "ಸಪ್ತಗಿರಿ"ಯಲ್ಲಿ ಪ್ರಚುರಿಸಲಾಗುತ್ತದೆ.

**ನಿಮ್ಮ ರಚನೆಗಳನ್ನು ಅಂಚೆ ಮೂಲಕ ಕಳುಹಿಸಬೇಕಾದ ವಿಳಾಸ :**

ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ., ಪ್ರೆಸ್ ಕಾಂಪೌಂಡ್, ಕೆ.ಟಿ. ರಸ್ತೆ , ತಿರುಪತಿ - 517507.

ಕನ್ನಡದಲ್ಲಿ ಡಿ.ಟಿ.ಪಿ. ಮಾಡಿ ಮೇಯಿಲ್ ಮುಖಾಂತರ ಕಳುಹಿಸುವವರು ಅನು ಫಾಂಟ್ಸ್(ಅಥವಾ) ಎಂ.ಎಸ್. ವರ್ಡ್‌ನಲ್ಲಿ ಯೂನೀಕೋಡ್‌ಫಾಂಟ್‌ನಲ್ಲಿ ಟೈಪ್ ಮಾಡಿದ ಫೈಲ್ ಅನ್ನು ಪಿ.ಡಿ.ಎಫ್. ಮಾಡಿ **kannadasapthagiri50years@gmail.com** ಎನ್ನುವ ಮೇಯಿಲ್‌ಗೆ ಕಳುಹಿಸಬೇಕಾಗಿ ಕೋರಲಾಗಿದೆ.

- ಪ್ರಧಾನ ಸಂಪಾದಕರು.



ನಮ್ಮ ದೇವಾಲಯ

# ಪುಷ್ಕರಿಣಿಯ ಒಡೆಯ! ಕೀಲಪಟ್ಲಾಧೀಶ!

- ಮೂಲ ಶ್ರೀಮತಿ. ಎಂ. ಉತ್ತರಫಲ್ಗುಣಿ
- ಅನುವಾದ ಶ್ರೀಮತಿ. ಪಿ.ಪದ್ಮಜ



ಅಡವಿಯಲ್ಲಿ ನೆಲೆಸಿರುವ ಆದಿನಾರಾಯಣನೀತ!

ಕೀಲಪಟ್ಲದಲ್ಲಿ ಶೋಭಿಸುತ್ತಿರುವ ಕೋಟಿಶುಭಗಳನ್ನು ನೀಡುವನೀತ!!

## ಸ್ಥಳ ಪುರಾಣ

ಶ್ರೀ ಮಹಾವಿಷ್ಣುವು ಲೋಕಕಲ್ಯಾಣಕ್ಕಾಗಿ ಪವಿತ್ರ ವೈಕುಂಠವನ್ನು ಬಿಟ್ಟು ಪುಷ್ಕರಿಣಿಯ ಸ್ವಾಮಿಯಾಗಿ ಭೂಮಿಯ ಮೇಲೆ ನೆಲೆಸಿರುವ ಶ್ರೀ ಕ್ಷೇತ್ರ, ಮಹಿಮಾನ್ವಿತವಾದ ಕ್ಷೇತ್ರ ಈ ಕೀಲಪಟ್ಲ.ಇದು ಚಿತ್ತೂರು ಜಿಲ್ಲೆಯಲ್ಲಿನ ಪಲಮನೇರು ಸಮೀಪದಲ್ಲಿ ಗಂಗವರಂ ಮಂಡಲದಲ್ಲಿರುವ ಗ್ರಾಮ. ಈ ಗ್ರಾಮ ದಲ್ಲಿ ನೆಲೆಸಿರುವ ಪ್ರಸನ್ನ ವೇಂಕಟೇಶ್ವರಸ್ವಾಮಿಯ ವಿಗ್ರಹ, ತಿರುಮಲೆಯಲ್ಲಿನ ಶ್ರೀ ವೆಂಕಟೇಶ್ವರಸ್ವಾಮಿಯನ್ನೇ ಹೋಲು ತ್ತಿರುವುದರಿಂದ ತಿರುಮಲೆಯಷ್ಟೇ ಈ ದೇವಾಲಯವೂ ಪ್ರಾಚೀನವಾದುದೆಂದು ಹೇಳಲ್ಪಡುತ್ತದೆ.

ಬೆಟ್ಟಗುಡ್ಡ,ಕಾಡುಮೇಡುಗಳ ನಡುವೆ ಪ್ರಕೃತಿ ಸೌಂದರ್ಯದೊಂದಿಗೆ,ಕೇವಲ ದರ್ಶನ ಮಾತ್ರದಿಂದಲೇ ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ಪವಿತ್ರವಾದ ಕ್ಷೇತ್ರ ಕೀಲಪಟ್ಲ. ಇದನ್ನು ಚಿಕ್ಕ ತಿರುಪತಿಯೆಂದೇ ಕರೆಯುತ್ತಾರೆ. ಇದರ ನಿಜವಾದ ಹೆಸರು ಕೋಟಿಪಲ್ಲಿ. ಚೋಳರಾಜನ ಕಾಲದಲ್ಲಿ ಯುದ್ಧದ ಸೈನಿಕರ ಮುಖ್ಯವಾದ “ದಂಡು” ಈ ಅಡವಿ ಪ್ರಾಂತ್ಯವಾದ ಕೋಟಿಪಲ್ಲಿಯ ಸಮೀಪದಲ್ಲಿ ಇರುತ್ತಿ ತ್ತಂತೆ. ಈ ಸೈನಿಕರ ದಂಡು ಇರುವ ಪ್ರಾಂತ್ಯವಾದ್ದರಿಂದ ಈ ಪ್ರದೇಶವನ್ನು ‘ಕೀಲ್ ಪಟಾಲಂ’ ಎಂದು ಕರೆಯುತ್ತಿದ್ದರು. ಅದು ಜನರ ನಾಲಿಗೆಯಲ್ಲಿ ಕೀಲ್ ಪಟಾಲಂ, ಕೀಲ್‌ಪಟ್ಟು, ಕೀಲ್ ಪಟ್ಟಣಂ, ಕೊನೆಗೆ ಕೀಲಪಟ್ಲ ಎಂಬ ಹೆಸರು ಸ್ಥಿರಗೊಂಡಿದೆ.

ಕೀಲಪಟ್ಲದಲ್ಲಿನ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ಬ್ರಹ್ಮ ಮಾನಸ ಪುತ್ರನಾದ ಭೃಗು ಮಹರ್ಷಿ ಪ್ರತಿಷ್ಠಾಪಿಸಿದ ರೆಂದು ಪ್ರತೀತಿ. ಭೃಗುಮಹರ್ಷಿ ಮಹಾ ತಪಸ್ಸಂಪನ್ನ. ತ್ರಿಮೂರ್ತಿಗಳನ್ನು ಪರೀಕ್ಷಿಸಿ  ಸಮಸ್ತ ಯಜ್ಞಗಳಿಗೂ ಅಧಿಪತಿಯಾಗಿ, ಪರತತ್ತ್ವವೆಂದು ಶ್ರೀ ಮಹಾವಿಷ್ಣುವನ್ನು ನಿಯಮಿಸಿದ ಮಹಾನುಭಾವ,ಜನಮೇಜಯ ಮಹಾ ರಾಜನ  ಕಾಲದಲ್ಲಿ ಈ ಗುಡಿಯನ್ನು ಕಟ್ಟಲಾಯ್ತೆಂದೂ, ಪಲ್ಲವರಾಜರು, ಚೋಳರಾಜರು ಈ ಗುಡಿಯನ್ನು ಪುನರ್ ನಿರ್ಮಿಸಿದಂತೆ ಶಾಸನಗಳಿಂದ ತಿಳಿಯುತ್ತಿದೆ.ಪಲ್ಲವರ ಕಾಲದಲ್ಲಿ ಭಕ್ತರು ಶ್ರೀಪ್ರಸನ್ನ ವೇಂಕಟೇಶ್ವರನೆಂದು ಕರೆದರು. ಲಕ್ಷ್ಮೀ ದೇವಿಯು ಶ್ರೀಮನ್ನಾರಾಯಣನೊಂದಿಗೆ ಪ್ರಣಯ ಕಲಹವನ್ನು ಮಾಡಿಕೊಂಡು ಭೂಲೋಕಕ್ಕೆ ಬಂದಳು. ಶ್ರೀ ಮಹಾವಿಷ್ಣುವು ಕಮಲಮುಖಿಯನ್ನು ಹುಡುಕುತ್ತಾ ವೈಕುಂಠವನ್ನು ಬಿಟ್ಟು ಶ್ರೀ ವೇಂಕಟಾಚಲಕ್ಕೆ ಬಂದನು. ಪರತತ್ತ್ವವಾದ ಶ್ರೀಯಃಪತಿಯ ಆಕಾಶ ರಾಜನ ಮಗಳಾದ ಪದ್ಮಾವತಿ ದೇವಿಯನ್ನು ಪರಿಣಯವಾಡಿದನು. ಭಕ್ತರ ಉದ್ಧಾರಕ್ಕಾಗಿ ಲಕ್ಷ್ಮಿ.ಪದ್ಮಾವತಿಯರೊಂದಿಗೆ ಕಲಿಯುಗದಲ್ಲಿ ಹಲವಾರು ಕಡೆ, ದುಷ್ಟಶಿಕ್ಷಣ, ಶಿಷ್ಟರಕ್ಷಣೆ ಗಾಗಿ ಅರ್ಚಾವತಾರನಾಗಿ ವೇಂಕಟೇಶ್ವರ ಎಂಬ ಹೆಸರಿ ನಿಂದ ನೆಲೆಸಿದನೆಂದು ಪುರಾಣಗಳು ತಿಳಿಸುತ್ತಿವೆ.

ಈ ಕೀಲಪಟ್ಲ ದೇವಾಲಯ ಸಪ್ತಗಿರೀಶನ ಆಲಯಕ್ಕೆ ಸಮಾನವಾಗಿದೆ.ಪಲ್ಲವರು,ಚೋಳರು, ವಿಜಯನಗರದ ಅರಸರು, ಈ ದೇವಾಲಯದ ಅಭಿವೃದ್ಧಿಗೆ ಬಹಳಷ್ಟೇ ದುಡಿದಿದ್ದಾರೆ.

ಒಮ್ಮೆ ಕೀಲಪಟ್ಲ ಆಲಯದಲ್ಲಿನ ಅರ್ಚಕರು, ಭಕ್ತರುಗಳು ದರೋಡೆಕೋರರಿಂದ ರಕ್ಷಿಸುವುದಕ್ಕಾಗಿ ಶ್ರೀ ವೇಂಕಟೇಶ್ವರಸ್ವಾಮಿ, ದೇವಿಯರ ವಿಗ್ರಹವನ್ನು ತೆಗೆದು, ರೇಷ್ಮೆಯ ವಸ್ತ್ರದಲ್ಲಿ ಸುತ್ತಿ ದೇವಾಲಯದ ಈಶಾನ್ಯದಲ್ಲಿರುವ ಪುಷ್ಕರಿಣಿಯಲ್ಲಿ ಕಣ್ಣಿಗೆ ಕಾಣಿಸದಂತೆ ಹುದುಗಿಸಿಟ್ಟರು. ಪಂಚ ಲೋಹ ವಿಗ್ರಹಗಳನ್ನು ಹುಂಡಿ,ಆಭರಣಗಳನ್ನೂ ಹಾಗೆಯೇ ಬಚ್ಚಿಟ್ಟರು.ಆ ರೀತಿ ನೂರು ವರ್ಷಗಳವರೆಗೂ ವಟಪತ್ರ ಶಾಯಿ ಆ ಪುಷ್ಕರಿಣಿಯಲ್ಲೇ ಇದ್ದನು.

ಆ ನಂತರ ಪುಂಗನೂರು ಜಮೀನುದಾರರಿಗೆ ದೇವರು ಕನಸಿನಲ್ಲಿ ಕಂಡು, ತನ್ನನ್ನು ಪುನಃ ಪ್ರತಿಷ್ಠಾಪಿಸಬೇಕೆಂದು ನಿತ್ಯವೂ ಧೂಪ ದೀಪ ನೈವೇದ್ಯಗಳಿಂದ ಪೂಜಾದಿಗಳನ್ನು ಅರ್ಪಿಸಬೇಕೆಂದು ಕೇಳಿದರು.ಅದರಂತೆಯೇ ಜಮೀನು ದಾರರು ದೇವರನ್ನು,ದೇವಿಯರನ್ನು ಪುನಃಪ್ರತಿಷ್ಠಾಪನೆ ಮಾಡಿ, ಷೋಡಶೋಪಚಾರದಿಂದ ಪೂಜೆಗಳನ್ನು, ಸೇವೆ ಗಳನ್ನು ಮಾಡಿದರು. ಪುಷ್ಕರಿಣಿಯಲ್ಲಿ ಜಲಧಾರಿಯಾಗಿ ದೊರೆತ ಸ್ವಾಮಿಯನ್ನು ಅಂದಿನಿಂದ ಪುಷ್ಕರಿಣಿಯ ಸ್ವಾಮಿ ಎಂದೇ ಕರೆಯುತ್ತಾರೆ. ಅನ್ನಮಯ್ಯ ತನ್ನ ಕೀರ್ತನೆಗಳಲ್ಲಿ ಪುಷ್ಕರಿಣಿಯ ಒಡೆಯ ಈತನೇ! ವೈಕುಂಠವಾಸನಾದ ಶ್ರೀಹರಿ ಭಕ್ತರನ್ನು ಸಲಹುವುದಕ್ಕಾಗಿ ಮೋಕ್ಷಪ್ರದಾತ ವೇಂಕಟೇಶ್ವರ ನಾಗಿಯೂ,ಅಲಮೇಲುಮಂಗಮ್ಮ ಭಕ್ತರಿಗೆ ಇಷ್ಟಾರ್ಥಗಳನ್ನು ಪ್ರಸಾದಿಸುತ್ತಾ ಈ ಕೀಲಪಟ್ಲದಲ್ಲಿ ನೆಲೆಸಿದ್ದಾರೆ.

### ದೇವಾಲಯದ ಹುಟ್ಟು

ಶ್ರೀ ಮಹಾವಿಷ್ಣು ಭೂಲೋಕಕ್ಕೆ ಬಂದು ಮೊದಲು ಅವತಾರವೆತ್ತಿದಾಗ ತುಂಬುರುತೀರ್ಥದಲ್ಲಿ ತಪೋನಿಷ್ಠೆ ಯಲ್ಲಿದ್ದ ಭೃಗುಮಹರ್ಷಿಯ ಪ್ರಾರ್ಥನೆಯ ಮೇರೆಗೆ ತಿರು ಮಲೆಗೆ ಪಶ್ಚಿಮದಲ್ಲಿರುವ ಶೇಷಾಚಲ ಪರ್ವತ ಪಾದದಲ್ಲಿ ಪವಿತ್ರ ಪ್ರದೇಶದಲ್ಲಿ ಏಳು ಯೋಜನೆಯ ದೂರದಲ್ಲಿ ಇರುವ ಕೀಲಪಟ್ಲ ಸಾಲಿಗ್ರಾಮದ ಮೇಲೆ ನೆಲೆಸಿದರು. ಪುನಃ ಸ್ವಾಮಿಯು ತಿರುಮಲೆಗೆ ಹೋಗಿ ತಾನು ಕೀಲಪಟ್ಲ ಪ್ರಾಂತ್ಯದಲ್ಲಿ ಸ್ವತಹ ನೆಲೆಸಿರುವಂತೆ ತಿಳಿಸಿದರು. ಮಹರ್ಷಿ ಅದಕ್ಕೆ ರುಜುವಾತವನ್ನು ಕೇಳಿದರು. ಅದಕ್ಕೆ ಸ್ವಾಮಿಯು, ತಾನು ಕಾಡುಗಳಲ್ಲಿ ಓಡಾಡಿದ ಪಾದದ ಗುರುತಗಳೇ ಸಾಕ್ಷಿ ಎಂದು ಅವನ್ನು ತೋರಿಸಿದರು. ಅವು ಇಂದಿಗೂ ಕಾಡಿನ ಮೂಲಕ ತಿರುಮಲೆಯವರೆಗೂ ಸ್ವಾಮಿಯ ಪಾದ ಮುದ್ರೆ ಗಳಿರುವ ಬಂಡೆಗಲ್ಲುಗಳನ್ನು ನೋಡಬಹುದು.

ನೀವು ಅಲ್ಲಿಗೆ ಹೋಗಿ ಬರುವುದು ನಮಗೆ ಹೇಗೆ ತಿಳಿಯುತ್ತದೆ ಎಂದು ಮಹರ್ಷಿ ಕೇಳಿದಾಗ, ರಾತ್ರಿಯ ಹೊತ್ತು ತಿರುಮಲೆಯಿಂದ ಕೀಲಪಟ್ಲದವರೆಗೂ ಏರ್ಪಡುವ ಬೆಳಕಿನ ದಾರಿಯೇ ನಿಮಗೆ ಸಂಕೇತವೆಂದು ಹೇಳಿದರಂತೆ. ನಂತರ ಮಹರ್ಷಿ ಸ್ವತಹಾ ಇಲ್ಲಿಗೆ ಬಂದು ಸ್ವಾಮಿಯನ್ನು ಪ್ರತಿಷ್ಠಾಪನೆ ಮಾಡಿದರು.ನಂತರ ಪರೀಕ್ಷಿ ತನ ವಾರಸುದಾರನಾದ ಜನಮೇಜಯ ಮಹಾರಾಜ ಸ್ವಾಮಿಗೆ ಚಿಕ್ಕ ಆಲಯವನ್ನು ಕಟ್ಟಿಸಿದ.

ನಂತರ ವಿಜಯನಗರದ ಅರಸರ ಕಾಲದಲ್ಲಿ ಕೀಲ ಪಟ್ಲ ಆಲಯ ವಿಶೇಷವಾದ ಆದರಣೆಯನ್ನು ಪಡೆಯಿತು. ತಿರುಪಟ್ಲ, ಚಿಕ್ಕ ತಿರುಪತಿಯೆಂದು ಅವರು ಪ್ರಮುಖವಾದ ಸ್ಥಾನವನ್ನು ಕಲ್ಪಿಸಿದರು.ತಿರುಮಲೆಯಲ್ಲಿ ಈ ಸ್ವಾಮಿಯ ಮಹಿಮೆಗಳನ್ನು ಕೇಳಿದ ಅನ್ನಮಾಚಾರ್ಯರೂ ಕೀಲಪಟ್ಲ ಪ್ರದೇಶವನ್ನು ಅನೇಕ ಬಾರಿ ಸಂದರ್ಶಿಸಿ, ಕೀರ್ತನೆಗಳನ್ನು ಹಾಡಿದರು. ಈ ಕಾಡಿನದಾರಿಯಲ್ಲೇ ಅನೇಕ ಋಷಿವಗಳು ನಿದ್ರಿಸಿದರು. ಪಶ್ಚಿಮ ಪ್ರಾಂತದಿಂದ ತಿರುಮಲೆಗೆ ಬರುವ ವರಿಗೆ ಮುಖ್ಯವಾದ ಮಹಾಪ್ರವೇಶವಾಗಿ (ಗೇಟ್ ವೇ ಆಫ್ ತಿರುಮಲ) ಹೆಸರುವಾಸಿಯಾಗಿವೆ.

### ಶ್ರೀ ಸ್ವಾಮಿಯ ಆಲಯ ಮಂಟಪಗಳು

ಶ್ರೀ ವೇಂಕಟೇಶ್ವರಸ್ವಾಮಿ, ಅಲಮೇಲುಮಂಗ ಆಲಯಗಳು ಒಂದೇ ಕಟ್ಟಡಗಳಲ್ಲಿ ನಿರ್ಮಿಸಿದ್ದಾರೆ. ಸ್ವಾಮಿ ಯವರ ಗರ್ಭಗುಡಿ ಎತ್ತರವಾದ ವೃತ್ತಾಕಾರದ ಗೋಪು ರದೊಂದಿಗೆ ವಿಜಯನಗರ ವಾಸ್ತು ಶಿಲ್ಪಕಲೆಯ ಶೈಲಿ ಯೊಂದಿಗೆ ಗೋಲಾಕಾರದ ಏಕಕಲಸದೊಂದಿಗೆ ಸುಂದರ ವಾಗಿ ನಿರ್ಮಾಣ ಮಾಡಿದ್ದಾರೆ. ನಾಲ್ಕೂ ಕಡೆಗಳಲ್ಲಿ ಗೋಪು ರದ ಮೇಲೆ ದಿಕ್ಪಾಲಕರು, ಗರುಡನ ಪ್ರತಿಮೆಗಳಿಂದ ಅಲಂಕರಿಸಲಾಗಿದೆ. ಗರ್ಭಗುಡಿಯ ಮೇಲ್ಭಾವಣಿ ಅಷ್ಟ ಭುಜದ ಆಕಾರದಲ್ಲಿ ನಿರ್ಮಿಸಿದ್ದಾರೆ. ಈ ಅದ್ಭುತವಾದ ವೈಕುಂಠ ಮಂದಿರದಲ್ಲಿ ಸ್ವಾಮಿಯು ಐಶ್ವರ್ಯಪೀಠದ ಮೇಲೆ ವಿರಾಜಮಾನನಾಗಿ ಪೂಜೆಗಳನ್ನು ಸ್ವೀಕರಿಸು ತ್ತಿದ್ದಾನೆ.ಸ್ವಾಮಿಯ ಗರ್ಭಾಲಯಕ್ಕೆ ಅಂತರಾಳವಿದೆ. ಅಂತರಾಳವು ನಾಲ್ಕು ಚತುರಸ್ರಾಕಾರದ ಸ್ತಂಭಗಳ ಮೇಲೆ ನಿಂತಿದೆ. 40 ಅಡಿಗಳ ಉದ್ದ, 30 ಅಡಿಗಳ ಅಗಲವಿರುವ 16 ಸ್ತಂಭಗಳ ಮೇಲೆ ನವರಂಗ ಮಂಟಪ,ಅದ್ಭುತವಾದ ಶಿಲ್ಪಗಳಿಂದ ಕೆತ್ತಲ್ಪಟ್ಟಿದೆ. ಈ ಎಲ್ಲಾ ಶಿಲ್ಪಕಲೆಗಳೂ ವಿಜಯ





ನಗರ ಶಿಲ್ಪಕಲೆಯ ರೀತಿಯಲ್ಲೇ ಇದೆ. ಈ ಮಂಟಪದಲ್ಲಿ ಗರ್ಭಾಲಯದ ಮುಂದಿನ ಭಾಗದಲ್ಲಿ ವೈಕುಂಠದ ದ್ವಾರ ಪಾಲಕರಾದ ಜಯವಿಜಯರನ್ನು ಪ್ರತಿಷ್ಠಾಪಿಸಲಾಗಿದೆ.

**ಅಮ್ಮನವರ ದೇವಾಲಯ**

ಸ್ವಾಮಿಯ ದೇವಸ್ಥಾನದ ನಿರ್ಮಾಣದ ನಂತರದ ನೂರು ವರ್ಷಗಳಾದ ಮೇಲೆ ಅಮ್ಮನವರ ಆಲಯವನ್ನು ನಿರ್ಮಿಸಿದರು. ಸ್ವಾಮಿಯ ಆಲಯಕ್ಕೆ ದಕ್ಷಿಣ ದಿಕ್ಕನಲ್ಲಿ ಅಮ್ಮ ನರ ಆಲಯವನ್ನು ಕಟ್ಟಿದ್ದೂ, ಅದನ್ನು ಅನುಸಂಧಾನ ಮಾಡಿದ್ದಾರೆ. ಇದರಲ್ಲೂ ಅಂತರಾಳ, ನವರಂಗ ಮಂಟಪ, ಕಲ್ಯಾಣ ಮಂಟಪ ಇದೆ. ಇಂತಹ ಮಹತ್ತರವಾದ ಆಲಯದಲ್ಲಿ ಅಮ್ಮನನರು ಐಶ್ವರ್ಯ ಪೀಠದ ಮೇಲೆ ಅಸೀನಳಾಗಿ ಭಕ್ತರು ಗಳಿಗೆ ದರ್ಶನ ನೀಡುತ್ತಾ ಅವರವರ ಬೇಡಿಕೆಗಳನ್ನು ಪೂರೈಸು ತ್ತಿದ್ದಾಳೆ.

**ದಶವತಾರ ಮಂಟಪ**

ಈ ಮುಖ್ಯ ಆಲಯವನ್ನು ತಲುಪುವುದಕ್ಕೆ ಮೊದಲು ಮೂರು ದ್ವಾರಗಳನ್ನು ದಾಟಿ ಹೋಗಬೇಕು. ಒಂದು ನಾಲ್ಕು ಕಾಲುಗಳ ಮಂಟಪ, ಎರಡನೆಯದು ಗಾಳಿಗೋಪುರ, ಮೂರನೆಯದು ಮಹಾಮುಖ ಮಂಟಪ, ಮಹಾಮಂಟಪ ಕುಸಿ ದಿರುವುದರಿಂದ ಅದನ್ನು ದಶಾವತಾರ ಮಂಟಪವೆಂದು ರೂಪಿಸಿದ್ದಾರೆ. ಇದನ್ನೇ ಅಭಿನವರಂಗಮಂಟಪ ಎಂದೂ ಕರೆ ಯುತ್ತಾರೆ. ಈ ಮಂಟಪದಲ್ಲಿ ಪಶ್ಚಿಮ ದ್ವಾರದ ಮೇಲೆ ತಲೆ ಯಿಟ್ಟು ಮಲಗಿರುವತಿರುವ ವಿನಾಯಕನ ಪ್ರತಿಮೆಗಳಿವೆ. ಪ್ರಧಾನ ಆಲಯಕ್ಕೆ ಈಶಾನ್ಯದಲ್ಲಿ ಸ್ವಾಮಿಯ ಪುಷ್ಕರಿಣಿ ಇದೆ. ವಿಜಯನಗರದ ರಾಜರು ತಿರುಮಲೆಯ ಸ್ವಾಮಿಗೆ ಮಾಡಿಸಿ ರುವಂತೆಯೇ ಈ ದೇವರಿಗೂ ಗಂಧದ ಕೊರಡಿನಿಂದ ಸುಂದರವಾದ ಮೂರು ಅಂತಸ್ತುಗಳ ಕೆತ್ತನೆಯನ್ನು ಮಾಡಿಸಿ ದ್ದಾರೆ. ಐದು ಅಂತಸ್ತುಗಳ ದೊಡ್ಡ ತೇರನ್ನೂ ಮಾಡಿಸಿದ್ದಾರೆ. ಈ ರಥವನ್ನು ಎಳೆಯುವುದಕ್ಕೆ ಆನೆಗಳನ್ನು ಉಪಯೋಗಿ ಸುತ್ತಿದ್ದರು.

**ಕೀಲಪಟ್ಲ ಆಲಯದ ಸುತ್ತಮುತ್ತಲೂ ಇರುವ ಪವಿತ್ರ ತೀರ್ಥಗಳು**

ಈ ತೀರ್ಥಗಳ ಹೆಸರುಗಳೆಲ್ಲವೂ ಬಹಳ ವಿಚಿತ್ರ ವಾಗಿವೆ ಅವು ತಿರುಮಲೆಯಲ್ಲಿ ಇರುವಂತೆ ಈ ಕಾಡಿನಲ್ಲೂ ಅನೇಕ ಪವಿತ್ರ ತೀರ್ಥಗಳು, ಬಾವಿಗಳು, ಇವೆ. ಅವು ಮಲ ಗಂಗನ ಬಾವಿ, ಜೊನ್ನಾರುಪೋಲು ಬಾವಿ, ರೆಡ್ಡಿ ಬಾವಿ, ಪಿಲ್ಲೋನಿ ಚೆಲಿಮೆ, ತಾತದಾನ, ನಾಗಿರೆಡ್ಡಿಬಾವಿ, ನಲ ಮಯನಾಯುನಿ ಕೆರೆ, ಪೆನುದೇವುಲ ಬಾವಿ, ಕೋತುಲ ಬಾವಿ, ಸಲೀಂದ್ರಾಲದೋನ, ಅನುಪೊಂಕ, ಭೈರವ ಬಾವಿ, ದೋಣಿವಂಕ ಕೆರೆ,ಯಾಪಮಾಕುಲ ದೋನ, ದೇವತಲ ದೊನ, ಅಕ್ಕಮ್ಮ ದೊನ, ಮಂಗಲೋನಿಬಂಡ ದೋನ, ಪಾಲ ಮಂದರರಂಗನ್ನ ಬಾವಿ, ಪಂದಿವಾದಮು ಬಾವಿ, ದೋನಮು ಗುಟ್ಟಬಾವಿ, ಪಾತಬಂಡದೋನ, ಬೋಡಿಬಂಡ ದೋನ, ವದ್ದನಾಲ ದೋನ, ವೀರದೋನ, ಪೆಂಡ್ಲಿ ಬಂಡ ದೋನ, ಕಲ್ಲಿ ಬಂಡದೋನ, ಸಾಮಿರೆಡ್ಡಿ ಬಾವಿ, ಕಡಪ ದೋನ, ಪಲಿವಿ ದೋನ ವಂಟಿದೋನ, ತೀರ್ಥಗಳು ಸಹಜ ಸಿದ್ಧವಾಗಿ, ಮಹಾತ್ಮೆಯುಳ್ಳದ್ದೂ ಆಗಿದ್ದು ಈ ಪ್ರಕೃತಿ ಮಾತೆಯ ಮಡಿಲಲ್ಲಿ ಸೇರಿವೆ.

ಪೆನುದೇವುಲ ಬಾವಿಯ ಸಮೀಪದಲ್ಲಿ ಆದಿ ಮಾನ ವರ ನಿವಾಸಗಳು,(ಪಾಂಡವರ ಗುಹೆಗಳು,) ಸಮಾಧಿ ಗೃಹಗಳು (ಭೂಗರ್ಭ ಸಮಾಧಿಗಳು) ಮುಂತಾದ ಪ್ರಾಚೀನ ವಾದ ಸಂಕೇತಗಳು ಈ ಕಾಡಿನಲ್ಲಿ ಅನೇಕ ಕಡೆಗಳಲ್ಲಿವೆ. ನೀರಿನ ಬುಗ್ಗೆಗಳು, ಎನ್ನುವುದು ನಿರಂತರವಾಗಿ ನೀರಿನಲ್ಲಿ ರುವ ಸರೋವರಗಳು,ಕೀಲಪಟ್ಲ ಹಿಂದಿನ ಕಾಲದಲ್ಲಿ ಮುಖ್ಯ ವಾದ ಪಟ್ಟಣವಾಗಿ ಸಂತೆಗೇ ಹೆಸರುವಾಸಿಯಾಗಿತ್ತು.

## ಶ್ರೀ ಪುಷ್ಕರಿಣಿಯ ಸ್ವಾಮಿಗೆ ನಡೆಯುವ ಪೂಜೆಗಳು

ಕೀಲಪಟ್ಲ ಸ್ವಾಮಿಗೆ ಸಂಕಲ್ಪಗಳು ಸೌರಮಾನದ ಪ್ರಕಾರ ನಡೆಯುತ್ತವೆ. ವೈಖಾನಸ ಆಗಮ ಶಾಸ್ತ್ರದ ಪ್ರಕಾರ ಪೂಜೆಗಳು ನಡೆಯುತ್ತವೆ. ವೈಖಾನಸ ಆಗಮ ಶಾಸ್ತ್ರದ ಪ್ರಕಾರ ನಿತ್ಯ ಪೂಜೆಗಳು ನಡೆಯುತ್ತವೆ.

ವಂಶ ಪಾರಂಪರ್ಯವಾದ ಮಿರಾಶಿ ಅರ್ಚಕರು ಪೂಜೆಗಳನ್ನು ನಡೆಸುತ್ತಾರೆ. ಉತ್ಸವಗಳು ಶಾಸ್ತ್ರಾನುಸಾರವಾಗಿ ಆಚಾರಗಳ ಆಧಾರದ ಮೇಲೆ ನಡೆಯುತ್ತವೆ. ಆ ನಿಟ್ಟಿನಲ್ಲಿ ವೈಕುಂಠವಾಸನಿಗೆ ಸುಪ್ರಭಾತ ಸೇವೆ, ಸಹಸ್ರನಾಮಾರ್ಚನೆ, ಸಾಯಂಕಾಲದ ಅಷ್ಟೋತ್ತರ ನಾಮಾರ್ಚನೆ, ನಡೆಯುತ್ತವೆ. ಪ್ರತೀ ವರ್ಷ ವಸಂತ ಋತುವಿನಲ್ಲಿ ಚೈತ್ರಮಾಸದಲ್ಲಿ ಶುದ್ಧ ತ್ರಯೋದಶಿ, ಚತುರ್ದಶ, ಹುಣ್ಣಿಮೆಯ ದಿನಗಳಲ್ಲಿ ಉತ್ಸವ ಮೂರ್ತಿಗಳಿಗೆ ವಸಂತೋತ್ಸವ ನಡೆಯುತ್ತದೆ. ಹಾಗೆಯೇ ತೋಮಾಲಸೇವೆ, ಶ್ರವಣಾ ನಕ್ಷತ್ರದಲ್ಲಿನ ಸ್ವಾಮಿಗೆ ಜನ್ಮದಿನದ ಸಂಭ್ರಮಗಳು, ಚತುರ್ದಶಿ ದಿನದಂದು ಶ್ರೀನಿವಾಸನ ಕಲ್ಯಾಣೋತ್ಸವಗಳೂ ನಡೆಯುತ್ತದೆ.

ಕೀಲಪಟ್ಲದಲ್ಲೂ ಪ್ರತೀವರ್ಷ ಮಾಘಶುದ್ಧ ಸಪ್ತಮಿಯ ದಿನದಂದು ರಥಸಪ್ತಮಿ ಉತ್ಸವ ನಡೆಯುತ್ತದೆ. ಆ ದಿನ ದೇವರು ಸೂರ್ಯಪ್ರಭವಾಹನದಲ್ಲಿ ಮೆರವಣಿಗೆ ಬರುತ್ತಾರೆ. ತಿರುಮಲೆಯಲ್ಲಿ ನಡೆಯುವಂತೆಯೇ ಪ್ರತೀವರ್ಷ ವೈಶಾಖ ಮಾಸದಲ್ಲಿ ಶುದ್ಧ ಅಷ್ಟಮಿಯಿಂದ ಬಹುಳ ತದಿಗೆಯವರೆಗೂ ಹನ್ನೊಂದು ದಿನಗಳ ಕಾಲ ಬ್ರಹ್ಮೋತ್ಸವಗಳು ನಡೆಯುತ್ತವೆ.

ಇಲ್ಲಿ ಬ್ರಹ್ಮೋತ್ಸವಗಳು ಸ್ವಸ್ತಿವಾಚನದಿಂದ ಪ್ರಾರಂಭವಾಗಿ ಅಂಕುರಾರ್ಪಣೆ,ಕೊನೆಯ ದಿನದಂದು ಪೂರ್ಣಾಹುತಿ, ಚಕ್ರತೀರ್ಥದೊಂದಿಗೆ ಮುಗಿಯುತ್ತವೆ.

ವರ್ಷದಲ್ಲಿ ನಾಲ್ಕನೆಯ ತಿಂಗಳಲ್ಲಿ ಅಷ್ಟಮಿಯ ದಿನದಂದು/ಅಂಕುರಾರ್ಪಣೆ ನವಮಿಯ ದಿನದಂದು ಧ್ವಜಾರೋಹಣೆ, ದಶಮಿಯ ದಿನದಂದು ಸಿಂಹವಾಹನ, ಏಕಾದಶಿಯ ದಿನದಂದು ಶೇಷವಾಹನ, ದ್ವಾದಶಿಯ ದಿನದಂದು ಹನುಮಂತವಾಹನ, ತ್ರಯೋದಶಿಯ ದಿನದಂದು ಗಜವಾಹನ,ಹುಣ್ಣಿಮೆಯೆಂದು ಬ್ರಹ್ಮರಥೋತ್ಸವ,ಪಾಡ್ಯಮಿಯಂದು ಮೋಹಿನೀ ಉತ್ಸವ, ಬಿದಿಗೆಯಂದು ದ್ವಾದಶ ಆರಾಧನೆ, ಉಯ್ಯಾಲೆಸೇವೆ (ಊಂಜಲ್ ಸೇವೆ) ಶಯನೋತ್ಸವಗಳೊಂದಿಗೆ ಬ್ರಹ್ಮೋತ್ಸವಗಳು ಸಮಾಪ್ತಿಯಾಗುತ್ತವೆ. ವರ್ಷಕ್ಕೆ ಒಮ್ಮೆ ನಡೆಯುವ ಬ್ರಹ್ಮೋತ್ಸವಗಳಲ್ಲಿ ದೊಡ್ಡತೇರಿನ ಮೇಲೆ ಶ್ರೀನಿವಾಸನು ಮೆರವಣಿಗೆಯಲ್ಲಿ ಬರುತ್ತಾನೆ. ಇನ್ನು ಧನುರ್ಮಾಸದಲ್ಲಿ ಶುದ್ಧ ಏಕಾದಶೀ ದಿನದಂದು ವೈಕುಂಠ ಏಕಾದಶೀ ಹಬ್ಬವು ನಡೆಯುತ್ತದೆ.

ತಿರುಮಲೆಯಂತೆಯೆ ಶ್ರೀನಿವಾಸನಿಗೆ ಪಾರ್ವೇಟ ಉತ್ಸವ ನಡೆಯುತ್ತದೆ. ಅಂದರೆ ಶ್ರೀನಿವಾಸನು ಬೇಟೆಗೆ ಹೊರಡುವ ಉತ್ಸವ. ಈ ಉತ್ಸವದಲ್ಲಿ ಸ್ವಾಮಿಯನ್ನು ಪಟಾಕಿಗಳಿಂದ, ಮೃದಂಗ ವಾದ್ಯಗಳಿಂದ ಬೇಟೆಯ ಮಂದಿರಕ್ಕೆ ಕರೆದೊಯ್ಯುತ್ತಾರೆ. ಅದರಲ್ಲಿ ಒಂದು ಮೊಲ ವನ್ನು ತಂದು ಪೂಜೆ ಮಾಡುತ್ತಾರೆ. ಶಮೀವೃಕ್ಷದ ಬಳಿ ಹೊಲದೊಳಗೆ ಅದನ್ನು ಬಿಡುವುದು ಆಚಾರವಾಗಿ ಬಂದಿದೆ. ಅದೇ ರೀತಿ ಸ್ವಾಮಿಯು ರಥಸಪ್ತಮಿಯ ದಿನದಂದು ಕೃಷ್ಣಮ್ಮ ಗುಡ್ಡಕ್ಕೆ ವಿಜಯದಶಮಿಯ ದಿನದಂದು ಪಾರ್ವೇಟ ಮಂಟಪಕ್ಕೆ ಬರುತ್ತಾರೆ.

ಇನ್ನು ಪ್ರತೀ ನಿತ್ಯವೂ ಬೆಳಿಗ್ಗೆ ಸುಪ್ರಭಾತ ಸೇವೆ, ಅರ್ಚನೆ, ನಿತ್ಯಾರ್ಚನೆ, ನಿತ್ಯಪೂಜೆ, ನಿತ್ಯನೈವೇದ್ಯ, ಶತನಾಮಾರ್ಚನೆ, ಸಹಸ್ರನಾಮಾರ್ಚನೆಗಳು ನಡೆಯುತ್ತವೆ. ತೀರ್ಥ ಪ್ರಸಾದ ವಿನಿಯೋಗವೂ ಇರುತ್ತದೆ.

ಸಂಜೆ ಸಾಧಾರಣ ಪೂಜೆ, ಅರ್ಚನೆ, ಏಕಾಂತಸೇವೆ, ತೀರ್ಮಾನಗಳು ಇರುತ್ತವೆ. ಪ್ರತೀ ಶುಕ್ರವಾರ, ಅಭಿಷೇಕ ಇರುತ್ತದೆ. ವೈಶಾಖ ಮಾಸದಲ್ಲಿ ಶುದ್ಧ ಅಷ್ಟಮಿಯ ದಿನದಿಂದ ಬಹುಳ ಬಿದಿಗೆಯವರೆಗೂ ದೀಪಾರಾಧನೆ, ಮೂಲಸ್ತಂಭದ ಮೇಲೆ ಆಕಾಶದೀಪ (ಮೇಲು ದೀಪ) ಹಚ್ಚುತ್ತಾರೆ.

### ಕೀಲಪಟ್ಲಸ್ವಾಮಿಯ ಅದ್ಭುತಗಳು, ಮಹಿಮೆಗಳು

#### 1. ಚಕ್ರಸ್ಥಾಪನೆಯ ಕಥೆ:

ಶ್ರೀ ರಂಗರಾಯರು ತಿರುಮಲೆಯಲ್ಲಿನಂತೆಯೇ ಕೀಲಪಟ್ಲದಲ್ಲೂ ಎಲ್ಲಾ ಪೂಜೆ ಪುನಸ್ಕಾರಗಳನ್ನು ಉತ್ಸವಗಳನ್ನು,ವಾಹನಸೇವೆಗಳನ್ನು ಮಾಡಬೇಕೆಂದು ತೀರ್ಮಾನಿಸಿ ಮಾನ್ಯಗಳನ್ನು ನೀಡಿ, ಶಿಲಾಶಾಸನ ಮಾಡಿದರು.

ಒಮ್ಮೆ ನಲಸಾನಿಪಲ್ಲೆ ಬೋಡಿಕೊಂಡವು ನಾಯುಡುವಿಗೆ ಸ್ವಾಮಿಯವರು ಕನಸಿನಲ್ಲಿ ಕಾಣಿಸಿಕೊಂಡು ಅರ್ಚಕರು ತಮಗೆ ಹುಳಗಳು, ಕಲ್ಲು ಇರುವ ನೈವೇದ್ಯವನ್ನು ನೀಡುತ್ತಿದ್ದಾರೆಂದು, ತಾನು ಅದಕ್ಕೆ ಅವನ್ನು ಸ್ವೀಕರಿಸಲು ಸಾಧ್ಯವಾಗುತ್ತಿಲ್ಲವೆಂದು

ಹೇಳಿದರಂತೆ. ಮರುದಿನ ಉಗ್ರನಾದ ಬೋಡಿಕೊಂಡಮ ನಾಯುಡು ಅರ್ಚಕರನ್ನು ಕರೆದು ನೈವೇದ್ಯದಲ್ಲಿ ಕಲ್ಲು, ಹುಳಗಳು ಹೇಗೆ ಬರುತ್ತಿವೆ ಎಂದು ವಿಚಾರಿಸಿ, ಇನ್ನೊಮ್ಮೆ ಆ ರೀತಿ ಮಾಡಿದರೆ ಗಲ್ಲಿಗೇರಿಸು ತ್ತೇನೆಂದು ಎಚ್ಚರಿಸಿದ. ಪುನಃ ಒಂದು ದಿನ ಸ್ವಾಮಿಯು ಕನಸಿನಲ್ಲಿ ಕಾಣಿಸಿಕೊಂಡು ಅದೇ ರೀತಿ ಕಲ್ಲು, ಹುಳಗಳು ಇರುವ ನೈವೇದ್ಯವನ್ನು ನೀಡುತ್ತಿದ್ದಾರೆಂದು ಹೇಳಿದರಂತೆ. ಅದನ್ನು ಕೇಳಿದ ಬೋಡಿಕೊಂಡಮನಾಯುಡು ಆ ಪ್ರಸಾದ ಗಳನ್ನು ತಾನೂ ಸ್ವಲ್ಪ ಸ್ವೀಕರಿಸಿ, ತನ್ನೊಂದಿಗೆ ಬಂದಿದ್ದ ಪ್ರಮುಖರಿಗೂ ಅದನ್ನು ನೀಡಿದ ನಂತರ ಅವೆಲ್ಲಾ ನಿಜವೆಂದು ರುಜುವಾತು ಆಯಿತಂತೆ, ಅಯ್ಯೋ! ದೇವರೇ! ಈ ಅಪಚಾರ ದಿಂದಲೇ ತನಗೆ ದೈವಕೃಪೆ ದೊರೆಯುವುದಿಲ್ಲವೇನೋ ಎಂದು ಚಿಂತಿಸಿ, ಕೋಪದಿಂದ ಅರ್ಚಕರನ್ನು ಕರೆಯಿಸಿ ಅವರನ್ನು ಬೆತ್ತದಿಂದ ಹೊಡೆಸಿದನಂತೆ. ಅದನ್ನು ಅವರು ಅವಮಾನವೆಂದು ಭಾವಿಸಿ ರಾತ್ರಿಗೆ ರಾತ್ರಿಯೇ ಮೂಲ ವಿಗ್ರಹದ ಕೆಳಗೆ ಪ್ರತಿಷ್ಠಾಪಿಸಿದ್ದ "ಚಕ್ರಸ್ಥಾಪನೆ" (ಜನಾ ಕರ್ಷಣೆ ಯಂತ್ರವನ್ನು) ತೆಗೆದುಕೊಂಡು ತಿರುಮಲೆಗೆ ಓಡಿ ಹೋದರಂತೆ. ಇದರಲ್ಲಿರುವ "ಶ್ರೀಚಕ್ರಯಂತ್ರವನ್ನು" ತಿರು ಮಲೆಯಲ್ಲಿ ಪ್ರತಿಷ್ಠಾಪಿಸಿದ್ದರಿಂದ ಅಲ್ಲಿವರೆಗೂ ನಾಮ ಮಾತ್ರ ಪೂಜೆಗಳನ್ನು ಪಡೆಯುತ್ತಿದ್ದ ತಿರುಮಲೆಯ ಆಲಯ ದಿನದಿನಾ ಅಭಿವೃದ್ಧಿಯನ್ನು ಪಡೆದುಕೊಂಡಿತೆಂದು ಜನರ ಹೇಳಿಕೆ.

**2. ಬಿಳಿಯ ಆನೆಯ ಕಥೆ:**

ಒಮ್ಮೆ ಬೋಡಿಕೊಂಡ ಮನಾಯುಡು ಕಷ್ಟಕಾಲ ಬಂದಾಗ ವೇಂಕಟೇಶ್ವರ ಸ್ವಾಮಿಯನ್ನು ಬಿಳಿಯ ಆನೆಯ ಮೇಲೆ ಮೆರವಣಿಗೆ ಮಾಡಿಸುತ್ತೇನೆಂದು ಹರಸಿಕೊಂಡನಂತೆ. ದೇವರ ಕೃಪೆಯಿಂದ ಅವನ ಕಷ್ಟಗಳೆಲ್ಲಾ ತೀರಿದವೆಂದು ಇನ್ನು ಉತ್ಸವ ಮಾಡಬೇಕೆಂದುಕೊಂಡ. ಪಾಪ ಅವನು ಬಿಳಿಯ ಕುದುರೆಯಂತೆಯೇ ಬಿಳಿಯ ಆನೆಗಳಿರುತ್ತವೆಂದು ಭ್ರಮಿಸಿದ್ದ. ಎಲ್ಲಾ ದೇಶಗಳಲ್ಲೂ ಹುಡುಕಿದ. ಆದರೆ ಎಲ್ಲೂ ಬಿಳಿಯ ಆನೆ ದೊರೆಯಲಿಲ್ಲ. ಇನ್ನು ಏನೂ ಮಾಡಲು ತೋಚದೆ ಬ್ರಾಹ್ಮಣರನ್ನು ಸಂಪರ್ಕಿಸಿದ. ಅದಕ್ಕೆ ಅವರು ಕಪ್ಪು ಆನೆಗೇ ಸುಣ್ಣವನ್ನು ಬಳಿಯಬೇಕೆಂದು ಸಲಹೆ ನೀಡಿದರು. ಆ ರೀತಿಯಲ್ಲೇ ಮಾಡಿ ಆ ಆನೆಯ ಮೇಲೆ ಅತ್ಯಂತ ವೈಭವ ದಿಂದ ಮೆರವಣಿಗೆ ಮಾಡಿಸಿದ.

ಅದಕ್ಕೆ ಸ್ವಾಮಿಯು ಕೋಪಿಸಿಕೊಂಡು ಆತನ ಕನಸಿನಲ್ಲಿ ಕಂಡು ಬಂದು. "ಏನೋ ನನಗೇ ಮೋಸ ಮಾಡ್ತೀಯಾ! ಕಪ್ಪು ಆನೆಗೆ ಬಿಳಿ ಸುಣ್ಣ ವನ್ನು ಬಳಿದು ಬಿಳಿಯ ಆನೆ ಎಂದು ನನ್ನನ್ನು ನಂಬಿಸಿ ಮೆರವಣಿಗೆ ಮಾಡಿಸ್ತೀಯಾ? ಆದ್ದರಿಂದ ನಿನ್ನ ವಂಶ ಬರಬರುತ್ತಾ ವಿಳುತಲೆಮಾರಿಗೆ ಅಂತ್ಯವಾಗಲಿ! ಎಂದು ಶಪಿಸಿದನಂತೆ. ಆ ವಿಧವಾಗಿ ಕಾಲಗರ್ಭದಲ್ಲಿ ಅವನ ವಂಶ ನಾಶವಾಗಿ ಹೋಯಿತು. ಅವನೇ ಅಲ್ಲ ಸ್ವಾಮಿಗೆ ದ್ರೋಹ ಮಾಡಿದ ಅನೇಕ ಕುಟುಂಬಗಳು ಅಂತ್ಯವಾದುವೆಂದು ಜನರು ಹೇಳುತ್ತಾರೆ.

**ವಿಗ್ರಹದ ವೈಶಿಷ್ಟತೆ**

ವೇಂಕಟೇಶ್ವರಸ್ವಾಮಿಯು ಪ್ರಪಂಚದಲ್ಲಿ ಎಲ್ಲಾ ದರೂ ಒಂದೇ! ಆದರೆ ಈಗ ತಿರುಮಲೆ - ಕೀಲಪಟ್ಲ ವೇಂಕ ಟೇಶ್ವರರಿಗಿರುವ ವ್ಯತ್ಯಾಸವೇನೆಂದರೆ, ತಿರುಮಲೆಯಲ್ಲಿ ಸ್ವಾಮಿ "ಗಿರಿಕ್ಷೇತ್ರ" ದಲ್ಲಿ ದರ್ಶನ ನೀಡುತ್ತಿದ್ದಾನೆ. ಕೀಲ ಪಟ್ಲದಲ್ಲಿ "ವನಕ್ಷೇತ್ರ" ದಲ್ಲಿ ವರಗಳನ್ನು ನೀಡುತ್ತಿದ್ದಾನೆ. ತಿರುಮಲೆಯ ಆಲಯದಲ್ಲಿ ವಿಶೇಷ ಸ್ವರ್ಣಾಭರಣ ಅಲಂಕಾರದಿಂದ ಪ್ರಕಾಶಿಸುತ್ತಿದ್ದಾನೆ. ಆದರೆ ಕೀಲಪಟ್ಲ ದಲ್ಲಿ ಬಡವನಂತೆ ಕೇವಲ ಹೂಗಳ ಅಲಂಕಾರದಿಂದ ಮಾತ್ರಾ ದರ್ಶನ ನೀಡುತ್ತಿದ್ದಾನೆ. ಕೀಲಪಟ್ಲದಲ್ಲಿ ಚಿಕ್ಕ ಪಾದ ಪೀಠದ ಮೇಲೆ ನೆಲೆಸಿದ್ದರೆ, ತಿರುಮಲೆಯಲ್ಲಿ ಪವಿತ್ರವಾದ ಪದ್ಮಪೀಠದ ಮೇಲೆ ನಿಂತು ಪೂಜೆಗಳನ್ನು ಸ್ವೀಕರಿಸು ತ್ತಿದ್ದಾನೆ. ಕೀಲಪಟ್ಲ ಪ್ರಯಾಣ ಬಹಳ ಸರಳವಾಗಿರುತ್ತದೆ. ತಿರುಮಲೆಯ ಸಂದರ್ಶನ ಬೆಟ್ಟಗುಡ್ಡಗಳ ಮೇಲೆ ಪ್ರಯಾ ಣಿಸುವಾಗ ಒಂದು ಅದ್ಭುತ ಪ್ರಕೃತಿ ಸೌಂದರ್ಯವನ್ನು ತಿಲಕಿಸುವ ಅನುಭವ ಉಂಟಾಗುತ್ತದೆ. ಈ ವಿಶೇಷ ಆಲಯ ವನ್ನು ತಿ.ತಿ.ದೇ 18-11-2012 ರಲ್ಲಿ ತನ್ನ ಅಧೀನಕ್ಕೆ ತೆಗೆದು ಕೊಂಡಿದೆ. ಇಂತಾಹ ಪ್ರಸಿದ್ಧವಾದ ವಿಶೇಷ ಪ್ರಾಶಸ್ತ್ಯವಿರುವ ಶ್ರೀ ಪುಷ್ಕರಿಣಿಯ ದೇವರ ದರ್ಶನ ಮಾಡಿ ಜನ್ಮವನ್ನು ಸಾರ್ಥಕ ಮಾಡಿಕೊಳ್ಳೋಣ.

"ಪುಷ್ಕರಿಣಿ ದೇವಾಯ ಭಕ್ತಾನುಗ್ರಹಕಾರಿಣೇ
ಕೀಲಪಟ್ಲ ನಿವಾಸಾಯ ಶ್ರೀನಿವಾಸಾಯ ಮಂಗಳಂ"

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ (ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷ ನಲ್ಲಿ ಬರಿಯಿರಿ. ಪಿನ್ ಕೋಡ್ ಜೊತೆಗೆ ದೂರವಾಣಿ ಸಂಖ್ಯೆ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ) ☐☐☐☐☐☐

( ದೂರವಾಣಿ ಸಂಖ್ಯೆಯನ್ನು ನಮೂದಿಸಿ) ☐☐☐☐☐☐☐☐☐☐

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ : ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

*ನಮ್ಮ ವಿಳಾಸ - "ಪ್ರಧಾನಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".*

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸುವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರರಾಗಿದ್ದರೆ ಚಂದಾ ಪುನರುದ್ಧಾರ - ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.

ಇವೆಲ್ಲ ವಿವರಗಳನ್ನೂ ಸರಿಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar,** B.A., B.Ed., Dy. E.O. (Publications & Press), T.T.D. Press, Tirupati - 517 507.



ದೊಡ್ಡ ಶೇಷ ವಾಹನದಲ್ಲಿ
ಉಭಯ ದೇವಿಯರೊಂದಿಗೆ
ಶ್ರೀ ಗೋವಿಂದ ರಾಜ ಸ್ವಾಮಿಯವರು

**ತಿರುಪತಿಯಲ್ಲಿ**
**11-05-2019 ರಿಂದ**
**19-05-2019 ರ ವರೆಗೆ ನಡೆದ**
**ಶ್ರೀ ಗೋವಿಂದ ರಾಜಸ್ವಾಮಿಯವರ**
**ಬ್ರಹ್ಮೋತ್ಸವ**



ಚಿಕ್ಕಶೇಷ ವಾಹನದಲ್ಲಿ ಶ್ರೀ ಗೋವಿಂದರಾಜ ಸ್ವಾಮಿಯವರು







ಹನುಮ, ಹಂಸ ಮತ್ತು ಗರುಡ ವಾಹನದಲ್ಲಿ ಶ್ರೀಗೋವಿಂದರಾಜ ಸ್ವಾಮಿಯವರು



ಸರ್ವಭೂಪಾಲ ವಾಹನದಲ್ಲಿ ಶ್ರೀಗೋವಿಂದರಾಜ ಸ್ವಾಮಿಯವರು



ಸಿಂಹವಾಹನದಲ್ಲಿ ಶ್ರೀ ಗೋವಿಂದರಾಜ ಸ್ವಾಮಿಯವರು



ಕಲ್ಪವೃಕ್ಷ ವಾಹನದಲ್ಲಿ ಉಭಯದೇವಿಯರೊಂದಿಗೆ ಶ್ರೀ ಗೋವಿಂದರಾಜ ಸ್ವಾಮಿಯವರು



ತಿರುಪತಿ ಪುರವೀಧಿಗಳಲ್ಲಿ ಶ್ರೀ ಗೋವಿಂದ ರಾಜ ಸ್ವಾಮಿಯವರ ರಥೋತ್ಸವ


SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-06-2019
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020
ಶ್ರೀ ವಿಖನಸಾಚಾರ್ಯ ಸ್ವಾಮಿಯವರ
ಉತ್ಸವಗಳು - ತಿರುಪತಿ
14-07-2019 ರಿಂದ
18-07-2019 ರ ವರೆಗೆ